# ಸಿರಿಸಂಪಿಗೆ

## ಮುನ್ನುಡಿ

ಆತ್ಮೀಯ ಮಿತ್ರರಾದ ಚಂದ್ರಶೇಖರ ಕಂಬಾರರ ಪರಿಣತ ಪ್ರಜ್ಞೆಯ ನಾಟಕವಾದ 'ಸಿರಿಸಂಪಿಗೆ'ಯ ಎರಡನೆಯ ಮುದ್ರಣಕ್ಕೆ ಹಿನ್ನುಡಿಯನ್ನು ಬರೆಯುವುದು ಒಂದು ಸಂತೋಷದ ಸಂಗತಿಯಾಗಿದೆ. ಕಂಬಾರರ 'ಸಿರಿಸಂಪಿಗೆ'ಯ ಮತ್ತು ಗಿರೀಶ್ ಕಾರ್ನಾಡರ 'ನಾಗಮಂಡಲ' ಈ ಎರಡೂ ನಾಟಕಗಳಿಗೆ ದಿ. ಎ.ಕೆ. ರಾಮಾನುಜನ್‌ರು ಹೇಳಿರುವ ಒಂದು ಜಾನಪದ ಕತೆ ಮೂಲ ಸಾಮಗ್ರಿಯನ್ನು ಒದಗಿಸಿದೆ. ಈ ಕತೆ ಹೀಗಿದೆ:

ಯಾವ ಹೆಣ್ಣನ್ನೂ ಸಂಶಯದಿಂದ ನೋಡುವ ಒಬ್ಬ ರಾಜಕುಮಾರ ತನ್ನ ದೇಹವನ್ನು ಎರಡಾಗಿ ಸೀಳಿಕೊಂಡು, ಒಂದು ಅರ್ಧವನ್ನು ಹೆಣ್ಣಾಗಿಸಿ, ಅವಳನ್ನು ಮದುವೆಯಾಗಿ ಒಂದು ನಿರ್ಜನವಾದ ಕಾಡಿನ ಅರಮನೆಯಲ್ಲಿ ಸೆರೆಯಿಟ್ಟಿರುತ್ತಾನೆ. ಅಲ್ಲಿ ಆಕಸ್ಮಾತ್ತಾಗಿ ಬಂದ ಒಬ್ಬ ಮಾಟಗಾರ ಅವಳನ್ನು ಕಂಡು ಮೋಹಿಸಿ, ರಾಜಕುಮಾರನಿಗೆ ಗೊತ್ತಿಲ್ಲದಂತೆ ಅವಳನ್ನು ಕೂಡುತ್ತಾನೆ. ರಾಜಕುಮಾರನಿಗೆ ಗೊತ್ತಾದಾಗ ಮಾಟಗಾರ ಹಾವಾಗಿ ಬಚ್ಚಲ ಹರಿಯ ಮೂಲಕ ಪಾರಾಗುತ್ತಾನೆ. ಹಾಗೆ ಪಾರಾಗುವಾಗ ಹಾವಿನ ಅರ್ಧ ದೇಹ ರಾಜಕುಮಾರನ ಕತ್ತಿಯಿಂದ ತುಂಡಾಗುತ್ತಿದೆ. ಹಾವಿನ ಪ್ರೇಯಸಿ ಆ ಅರ್ಧವನ್ನೇ ಸುಟ್ಟು ಬೂದಿಯನ್ನು ತಾಯಿತದಲ್ಲಿ ತುಂಬಿ ತೋಳಿಗೆ ಕಟ್ಟಿಕೊಳ್ಳುತ್ತಾಳೆ. ಹೆಣ್ಣಿನ ನೆಲೆ ಗಂಡಿಗೆ ಏನು ಮಾಡಿದರೂ ತಿಳಿಯದು ಎಂಬ ನೀತಿ ಈ ಕತೆಯಿಂದ ಹೊರಡುತ್ತಿದ್ದರೂ ಈ ಕತೆಯಲ್ಲಿಯ ಪ್ರತಿಮೆಗಳು ಬೇರೆ ಅರ್ಥ ಪ್ರಪಂಚವನ್ನು ಕಟ್ಟಿಕೊಳ್ಳುವ ಹವಣಿಕೆಯಲ್ಲಿವೆ. ಈ ಕತೆ ಗಿರೀಶ್ ಕಾರ್ನಾಡ್‌ರ ನಾಟಕದಲ್ಲಿ ಮನುಷ್ಯನ ಕಣ್ಣಿಗೆ, ಬುದ್ಧಿಗೆಕಾಣುವ ಸತ್ಯವೆಲ್ಲ ಅಪೂರ್ಣವಾದದ್ದು: ಯಾಕೆಂದರೆ ಮನುಷ್ಯನೇ ಅಪೂರ್ಣನಾಗಿರುವನು. 'ಹಯದವನ' ನಾಟಕದ ಸಮಸ್ಯೆ 'ನಾಗಮಂಡಲ'ದಲ್ಲಿ ಮುಂದುವರಿಯುತ್ತದೆ.

ಕಂಬಾರರ 'ಸಿರಿಸಂಪಿಗೆ' ಗ್ರೀಕರ ನಾರ್ಸಿಸಸ್ ಕತೆಯನ್ನು ಮುಂದುವರಿಸಿದಂತೆ ತೋರುತ್ತದೆ. ನಾರ್ಸಿಸಸ್ ಮೋಹಿಸಿದ್ದು ತನ್ನನ್ನೋ ಅಥವಾ ತನ್ನ ಪ್ರತಿಬಿಂಬನ್ನೋ ಎಂಬ ಪ್ರಶ್ನೆಗೆ ಉತ್ತರ ಸಂದಿಗ್ಧವಾಗಿದೆ. ನಾರ್ಸಿಸಸ್ ತನ್ನ ಪ್ರತಿಬಿಂಬದೊಡನೆ ಬೇಟವನ್ನು ನಡೆಸುತ್ತ ಕಳೆದುಕೊಂಡ ತನ್ನ ಇನ್ನೊಂದು ಅರ್ಧವನ್ನು ಹುಡುಕುತ್ತಿರುತ್ತಾನೆ. ಆ ಅರ್ಧ 'ಇಕೋ' (ಪ್ರತಿಧ್ವನಿ)ದ ರೂಪದಲ್ಲಿ ಬಂದಾಗ ಅವನು ಗುರುತು ಹಿಡಿಯುವುದಿಲ್ಲ. ಒಂದು ಇದ್ದದ್ದು ಎರಡಾಗುವುದು, ಒಂದು ಇದ್ದದ್ದು ಹಲವಾಗುವುದು ಈ ಪ್ರಪಂಚದ ರಹಸ್ಯವಾಗಿದೆ ಎಂದು ಗೊತ್ತಾದಾಗ ಈ ತಿಳಿವಿನಲ್ಲಿಯೇ ಪೂರ್ಣ ಮತ್ತು ಅಪೂರ್ಣಗಳ ಸಮಸ್ಯೆಯೂ ತಲೆದೋರುತ್ತದೆ. ನಮ್ಮ ಖಡ್ಗದ ಅಲುಗಿಗೆ ದಕ್ಕುವುದೆಂದರೆ ಕಡಿದು ಬಿದ್ದ ಹಾವಿನ ಅರ್ಧ ದೇಹ ಮಾತ್ರ.

ನಾಟಕದ ನಾಯಕ ಶಿವನಾಗದೇವನಿಗೆ ಮದುವೆಯಾಗಲು ಮನಸ್ಸಿಲ್ಲ. ತಾಯಿಯ ಒತ್ತಾಯಕ್ಕೆ ಮಣಿದು ಮದುವೆಯಾಗಲು ಸಿದ್ಧನಾಗುತ್ತಾನೆ. ತನ್ನ ಮೈಯ ಅರ್ಧವನ್ನು ಸೀಳಿ ಆ ಅರ್ಧ ಹೆಣ್ಣಾಗುತ್ತದೆಂದೂ ಅವಳನ್ನೇ ಮದುವೆಯಾಗುತ್ತೇನೆಂದೂ ಹೇಳುತ್ತಾನೆ. ಆದರೆ ಅವನ ದೇಹದ ಅರ್ಧ ಹೆಣ್ಣಾಗದೆ ಕಾಳಿಂಗಸರ್ಪವಾಗಿ ಕಾಡಿನಲ್ಲಿ ಹೊರಟು ಹೋಗುತ್ತದೆ. ನಿರ್ವಾಹವಿಲ್ಲದೆ ಶಿವನಾಗದೇವ ತಾಯಿ ತಂದ ವಧು ಸಿರಿಸಂಪಿಗೆಯನ್ನು ಮದುವೆಯಾಗುತ್ತಾನೆ. ಆದರೆ ತಾನು ಕನಸಿನಲ್ಲಿ ಕಂಡಿದ್ದ ದೀಪದ ಮೊಲ್ಲೆಗೆ ಹಾತೊರೆಯುತ್ತ ಹೆಂಡತಿಯನ್ನು ತಿರಸ್ಕರಿಸುತ್ತಾನೆ. ಪಾರಾಗಿ ಹೋಗಿದ್ದ ಕಾಳಿಂಗನಿಗೆ ಸಿರಿಸಂಪಿಗೆಯ ಮೇಲೆ ಕಣ್ಣು. ಅವನು ರಾಮಕುಮಾರನಾಗಿ ಬಂದು ಅವಳನ್ನು ಕೂಡುತ್ತಾನೆ. ಸಿರಿಸಂಪಿಗೆಯ ಅಕ್ರಮ ಗರ್ಭವನ್ನು ಶಿವನಾಗದೇವ ಒಪ್ಪುವುದಿಲ್ಲ. ಸಿರಿಸಂಪಿಗೆ ನಾಗದ ದಿವ್ಯಕ್ಕೆ ಒಪ್ಪಿದಾಗ ಕಾಳಿಂಗನೇ ಅಲ್ಲಿ ಬಂದು ಅವಳನ್ನು ಬದುಕಿಸುತ್ತಾನೆ. ಅವಳು ಮಗನನ್ನು ಹಡೆದಾಗ ತನ್ನ ಮಗುವನ್ನು ನೋಡಲೆಂದು ಬಂದವನು ಶಿವನಾಗದೇವನ ಕೈಯಲ್ಲಿ ಸಿಕ್ಕಿಬೀಳುತ್ತಾನೆ. ಇಬ್ಬರಿಗೂ ದ್ವಂದ್ವ ಯುದ್ಧ ನಡೆದು ಕಾಳಿಂಗ ಸತ್ತು ಹೋಗುತ್ತಾನೆ. ಅವನು ಸತ್ತು ಹೋದ ಮೇಲೆ ಶಿವನಾಗದೇವ ತನ್ನ ಬೆನ್ನು ಹುರಿಯ ಶಕ್ತಿಯನ್ನು ಕಳೆದುಕೊಂಡು ತಾನೂ ಸಾಯುತ್ತಾನೆ. ಶಿವನಾಗದೇವ

ಕಾಳಿಂಗನನ್ನು ಕೊಲ್ಲದೆ ಇರಲಾರ; ಕೊಂದ ಮೇಲೆ ತಾನೂ ಇರಲಾರ. ನಾರ್ಸಿಸಸ್‌ನಿಗೆ ಪ್ರತಿಬಿಂಬ ಬಿಂಬವಾಗಿ ದೊರೆಯುವುದಿಲ್ಲ. ಅವನಿಗೆ ಸತ್ಯ ದೊರೆಯುವುದು ಸಾವಿನ ಕ್ಷಣದಲ್ಲಿ, ಸಾವು ಬಿಂಬ ಪ್ರತಿಬಿಂಬಗಳನ್ನು ಒಂದಾಗಿಸುವ ಅಥವಾ ಇಲ್ಲವಾಗಿಸುವ ಅದ್ಭುತ ವಿಧಾನವಾಗಿದೆ. ಈ ನಾಟಕದ ವಿದೂಷಕನಾದ ಅವಳಿ ತನ್ನ ತಮ್ಮ ಅಥವಾ ಅಣ್ಣನಾದ ಜವಳಿಯನ್ನು ಹಿಡಿಯಲು ಹೋಗಿ ಒಂದು ಗಿಡವನ್ನು ಏರುತ್ತಾನೆ. ಗಿಡ ನೀರಿನವರೆಗೆ ವಾಲಿಕೊಂಡಿರುವುದರಿಂದ ನೀರಿನಲ್ಲಿಯ ತನ್ನ ಪ್ರತಿಬಿಂಬವನ್ನೇ ಬಿಂಬವೆಂದು ಭ್ರಮಿಸಿ ನೀರಿನಲ್ಲಿ ಧುಮುಕಿ ಸತ್ತು ಹೋಗುತ್ತಾನೆ. ಅವಳಿ ಜವಳಿಯರ ಪ್ರಸಂಗ ನಾಟಕದಲ್ಲಿ ಪ್ರಮುಖ ವಸ್ತುವನ್ನು ಪ್ರತಿಬಿಂಬಿಸುತ್ತ, ಅಣಗಿಸುತ್ತ, ಅದನ್ನು ಅನುವಾದಿಸುತ್ತದೆ. ನಾಟಕದ ಒಂದು ಅರ್ಧ ಇನ್ನೊಂದು ಅರ್ಧವನ್ನು ಪ್ರತಿಬಿಂಬಿಸಿದಂತಾಗಿದೆ. ನಾಟಕದ ಕೊನೆಯಲ್ಲಿ ಈ ಎರಡೂ ಅರ್ಧಗಳು ಒಂದಾಗಲು ಹೋಗಿ ಇಲ್ಲದಂತಾಗುತ್ತವೆ ಅಥವಾ ಇಲ್ಲವಾದಂತಾದಾಗ ಒಂದಾಗುತ್ತವೆ.

ಅವಳಿ ಜವಳಿಯರ ಪ್ರಸಂಗ ಗಂಭೀರವಾದ ಮುಖ್ಯ ವಸ್ತುವನ್ನು-ಶಿವನಾಗದೇವನ ದುರಂತ ಸನ್ನಿವೇಶವನ್ನು - ಅಣಗಿಸುತ್ತದೆ, ಅನುವಾದಿಸುತ್ತದೆ ಎಂಬ ಸಂಗತಿ ನಾಟಕದಲ್ಲಿ ಸ್ಪಷ್ಟವಾಗಿ ಗೊತ್ತಾಗುವಂತಿದೆ. ಅವಳಿ ಜವಳಿಯರ ಜಗಳಾಟ, ಕಮಲಳ ಜೊತೆಗೆ ಅವರ ಪ್ರಣಯ, ಒಬ್ಬ ಅವಳನ್ನು ಮದುವೆಯಾಗಿ ಇನ್ನೊಬ್ಬ ಕಾಡಿಗೆ ಹೋಗುವುದು - ಈ ಸಂಗತಿಗಳೆಲ್ಲ ಪ್ರತಿಬಿಂಬವೂ ಹೌದು, ಅಣಕವೂ ಹೌದು ಒಂದು ದೃಷ್ಟಿಯಿಂದ ಈ ಅನುವಾದ ಪುನರುಕ್ತಿಯೂ ಹೌದು. ಆದರೆ ಈ ಅನುವಾದ ಅಥವಾ ಪುನರುಕ್ತಿಯಲ್ಲಿ ಒಂದು ವಿಶೇಷವಿದೆ. ಮೂಲ ಮತ್ತು ಅನುವಾದದ ನಡುವೆ ಒಂದು ಅದೃಶ್ಯವಾದ ಕನ್ನಡಿಯಿದೆ. ಕನ್ನಡಿಯೊಳಗಿನ ಪ್ರತಿಬಿಂಬ ಬಿಂಬವಲ್ಲ, ಅದರ ಆಭಾಸ ಮಾತ್ರ. ಅಲ್ಲದೆ ಕನ್ನಡಿಯಲ್ಲಿಯ ಉಬ್ಬುತಗ್ಗುಗಳು, ಏರಿಳಿತಗಳು ಪ್ರತಿಬಿಂಬವನ್ನು ವಿಕೃತವಾಗಿ ಮೂಡಿಸುತ್ತವೆ. ಕನ್ನಡಿ ತಿಳುವಳಿಕೆಯ ಒಂದು ಸಾಧನವಾದಾಗ ಅದಕ್ಕೊಂದು ಚೌಕಟ್ಟು ಇರುವುದಿಲ್ಲ. ಆಗ ಕನ್ನಡಿಯ ತುಂಬ ಪ್ರತಿಬಿಂಬ ತುಂಬಿಕೊಂಡು ತಾನೇ ಒಂದು ಸತ್ಯವಾಗುವ ಡೌಲನ್ನು ಮೆರೆಯುತ್ತದೆ. ಆದರೆ ಏನಿದ್ದರೂ ಅದರಲ್ಲಿ ವಿಕೃತಿ ತಪ್ಪುವುದಿಲ್ಲ. ಈ ವಿಕೃತಿ ಎಷ್ಟು ದೂರ ಹೋಗಬಲ್ಲದೆಂದರೆ ಬಿಂಬ ಸಾಯುವುದಕ್ಕಿಂತ ಮೊದಲೇ ಅದು ಸತ್ತುಹೋಗುತ್ತದೆ. ಹಾದರದಿಂದ ಸಂಪಿಗೆಯ ಪಾತಿವ್ರತ್ಯ ಸಿದ್ಧವಾಗುತ್ತದೆ; ಸ್ವಕೀಯ ಪರಕೀಯವನ್ನು ತಿಳಿಯಲು ಹಾತೊರೆದಷ್ಟೂ ಪರಕೀಯ ಸ್ವಕೀಯವೇ ಆಗಿರುತ್ತದೆ. ಗಂಡನ ಜೊತೆಗೆ ಮಲಗಿದಾಗ ಗಂಡ ಪರಪುರುಷನಾಗುತ್ತಾನೆ, ಯಾಕೆಂದರೆ ಪರಪುರುಷನೇ ಗಂಡನಾಗಿರುತ್ತಾನೆ. ಇದೆಲ್ಲ ಬಿಂಬಕ್ಕೆ ಪ್ರತಿಬಿಂಬವನ್ನು ತೋರಿಸುವ ಕನ್ನಡಿಯ ಪ್ರಭಾವವಾಗಿದೆ. ಬಿಂಬಕ್ಕೆ ಕಣ್ಣುಗಳಿವೆ; ಪ್ರತಿಬಿಂಬದ ಕಣ್ಣಿನಲ್ಲಿ ನೋಟವಿರುವುದಿಲ್ಲ. ಶಿವನಾಗದೇವನ ದುರಂತವೆಂದರೆ ತಾನು ಬಿಂಬವಾಗಿದ್ದುಕೊಂಡೂ ಅವನು ಕುರುಡಾಗಿದ್ದಾನೆ. ಕಾಳಿಂಗನೇ ತಾನು ಎನ್ನುವುದನ್ನು ಅವನು ನೋಡಲಾರ, ಆದ್ದರಿಂದ ಅವನ ಚೇಷ್ಟೆಗಳಲ್ಲ ಪ್ರತಿಬಿಂಬದ ಚೇಷ್ಟೆಗಳಾಗಿವೆ. ಜಗತ್ತು ಕನ್ನಡಿಯಾದಾಗ ಕನ್ನಡಿ ಕಣ್ಣಿಗೆ ಕಾಣುವುದೇ ಇಲ್ಲ.

ನಾಟಕದ ಪ್ರಾರಂಭದಲ್ಲಿ ಶವನಾಗದೇವನ ತಾಯಿ ಅವನ ಬಗ್ಗೆ ಒಂದು ಸಂಗತಿಯನ್ನು ಹೇಳುತ್ತಾಳೆ. ಕುಲದೇವರು ಅವಳಿಗೊಂದು ಎಚ್ಚರಿಕೆ ಕೊಟ್ಟಿದ್ದಾನೆ. ನೀರಿನಲ್ಲಾಗಲಿ, ಕನ್ನಡಿಯಲ್ಲಾಗಲಿ ಶಿವನಾಗದೇವ ತನ್ನ ಪ್ರತಿಬಿಂಬವನ್ನು ನೋಡಬಾರದು. ನೋಡಿದರೆ ಸನ್ಯಾಸದತ್ತ ಅವನ ಮನಸ್ಸು ಒಲಿಯಬಹುದು. ಈ ಮಾತು ಜೈನ ತೀರ್ಥಂಕರರಿಗೆ ವೈರಾಗ್ಯವನ್ನು ಹುಟ್ಟಿಸುವ ನಿರ್ವೇದದ ಕ್ಷಣವನ್ನು ನೆನಪಿಗೆ ತರುತ್ತದೆ. ತಾಯಿ ಅವನಿಗೆ ಪ್ರತಿಬಿಂಬವನ್ನು ತೋರಿಸಿಲ್ಲ. ಆದರೆ ಪ್ರತಿಬಿಂಬವೇ ಅವನನ್ನು ಹುಡುಕಿಕೊಂಡು ಬರುತ್ತದೆ. ಕುಲದೇವರ ಕಾರಣಿಕದಲ್ಲಿ ಇರುವುದೇನು? ಸ್ವರಂಭವಾದಾಗ ಸನ್ಯಾಸಯೋಗವಿದೆ, ಅನುಜ ಸತ್ತಾಗಿವನು ಸಾವನೆಂದು. ಸ್ವರಭಂಗ ಯೌವನ ಹುಟ್ಟಿಸುವ ವಿಕ್ರತಿಗಳಲ್ಲಿ ಒಂದಾಗಿದೆ. ಯೌವನದಲ್ಲಿಯೇ ಮನುಷ್ಯ ಒಬ್ಬನಿದ್ದವನು ಎರಡಾಗುತ್ತಾನೆ. ಮಾನಸಿಕವಾಗಿ ತಾಯಿಯೊಡನೆ ಸಂಬಂಧದ ಹುರಿ ಇದೇ ಸಂದರ್ಭದಲ್ಲಿ ಕಡಿದುಕೊಳ್ಳುತ್ತದೆ. ಶಿವನಾಗದೇವನಿಗೆ ತಾಯ ಸಂಬಂಧವನ್ನು ಹರಿದುಕೊಳ್ಳುವ ಮನಸ್ಸಿಲ್ಲ. ಅವನು ತನ್ನ ಮೈಯನ್ನು ಸೀಳಿ ಒಂದು ಅರ್ಧದಲ್ಲಿ ತನ್ನನ್ನೂ ಇನ್ನೊಂದರಲ್ಲಿ ಹೆಂಡತಿಯನ್ನೂ ಪಡೆಯಬೇಕೆನ್ನುತ್ತಾನೆ. ಆದರೆ ಪಡೆದುಕೊಂಡದ್ದು ಮಾತ್ರ ತನ್ನ ದೇಹದ ಎರಡು ಅರ್ಧಗಳನ್ನು. ಅದರಲ್ಲಿ ಒಂದು ಕಾಳಿಂಗ ಸರ್ಪವಾಗಿ ಓಡಿ ಹೋಗುತ್ತದೆ. ಕಾಳಿಂಗ ಓಡಿ ಹೋದರೆ ಶಿವನಾಗದೇವ ಸನ್ಯಾಸಿಯಾಗಬೇಕು. ಸರ್ಪ ಮೃತ್ಯುವಿನ ಸಂಕೇತವಿದ್ದಂತೆ ಕಾಮದ ಸಂಕೇತವೂ ಹೌದು. ಶಿವನಾಗದೇವನ ದೇಹ ಮತ್ತು ಮನಸ್ಸುಗಳು ಬೇರೆ ಬೇರೆಯಾದವೆಂದು ನಾಟಕದಲ್ಲಿ ಸೂಚನೆ ದೊರೆಯುತ್ತದೆ. ಆದರೆ ಅದಕ್ಕಿಂತ ಭಿನ್ನವಾದ ಬೇರೊಂದು ಅರ್ಥವೂ ಇರಬಹುದಾಗಿದೆ. ಕಾಡಿನಲ್ಲಿ

ಕಾಳಿಂಗನಾಗಿ ಹರಿದಾಡುವವನು ಸಿರಿಸಂಪಿಗೆಯ ಕಣ್ಣಿನಲ್ಲಿ ಶಿವನಾದೇವನಾಗುತ್ತಾನೆ, ಬಿಂಬ ಮತ್ತು ಪ್ರತಿಬಿಂಬಗಳು ಒಂದಾಗುವುದು ಸಿರಿಸಂಪಿಗೆಯ ಕಣ್ಣಿನ ನೋಟದಲ್ಲಿ ಇಲ್ಲವೆ ಸಾವಿನ ಕ್ಷಣದಲ್ಲಿ. ಈ ಆಯ್ಕೆ ದಾರುಣವಾಗಿದೆ. ಶಿವನಾಗದೇವ ಪ್ರಬುದ್ಧನಾಗಬೇಕಾದರೆ ಈ ಆಯ್ಕೆಯಲ್ಲಿ ಗೆಲ್ಲಬೇಕು. ನಮ್ಮ ಪುರಾಣದಲ್ಲಿ ಕೂಡ ರತಿಪ್ರೌಢಳಾಗಿ ಕಾಮ ಶಿಶುವಾಗಿದ್ದಾನೆ. ತಾಯಿಗೆ ತನ್ನನ್ನು ಕೊಟ್ಟು ಕಾಳಿಂಗನನ್ನು ಸಿರಿಸಂಪಿಗೆಗೆ ದಾನ ಮಾಡಿದ ಶಿವನಾಗದೇವ ಎಂದೆಂದೂ ಒಂದಾಗದಂತೆ ಇಲ್ಲವಾಗುತ್ತಾನೆ. ಅವನು ಸಿರಿಸಂಪಿಗೆಯನ್ನು ಪ್ರೀತಿಸಿದ್ದರೆ - ಪರಕೀಯವನ್ನು ಸ್ವಕೀಯವಾಗಿಸಿಕೊಂಡಿದ್ದರೆ - ಕಾಳಿಂಗನನ್ನು ತನ್ನಲ್ಲಿಯೇ ಕರಗಿಸಿಕೊಳ್ಳಬಹುದಾಗಿತ್ತು. ಶಿವನಾಗದೇವ ಕಾಳಿಂಗನ ಬೆನ್ನು ಹತ್ತಿ ಅವನನ್ನು ಕೊಂದು ಸಿರಿಸಂಪಿಗೆಯನ್ನು ಕಳೆದುಕೊಳ್ಳುತ್ತಾನೆ.

ಪ್ರತಿಬಿಂಬದ ಅಸ್ತಿತ್ವ ಬಿಂಬವನ್ನು ಅವಲಂಬಿಸಿರುತ್ತದೆ; ಬಿಂಬವೇ ಸತ್ಯ, ಪ್ರತಿಬಿಂಬ ಏನಿದ್ದರೂ ಬಿಂಬದ ಅಭಾಸ ಎನ್ನುವ ನಿರ್ಣಯಕ್ಕೆ ನಾವು ಬಂದು ಮುಟ್ಟಿದ್ದೇವೆ.ಆದರೆ ಪ್ರತಿಬಿಂಬವನ್ನು ಮೂಡಿಸುವ ಕನ್ನಡಿಯ ಬಗ್ಗೆ ನಮ್ಮ ಲಕ್ಷ್ಯ ಹೋಗಿಲ್ಲ. ಈ ಮಾಯದ ಕನ್ನಡಿ ಯಾವುದು? ಈ ಪ್ರಶ್ನೆಗೆ ಉತ್ತರವನ್ನು ಈ ನಾಟಕ ಹುಡುಕುತ್ತದೆ.

ನಾಟಕದ ಎರಡನೆಯ ದೃಶ್ಯದಲ್ಲಿ ಒಬ್ಬ ಪುರಸ್ತ್ರೀ ಭಾಗವತನ್ನು ಭೆಟ್ಟಿಯಾಗಲು ಬರುತ್ತಾಳೆ. ಭಾಗವತ ಅವಳ ಹೆಸರನ್ನು ಮರೆತಿದ್ದಾನೆ ಮತ್ತೆ ಅವಳ ಹೆಸರನ್ನು ಕೇಳುತ್ತಾನೆ. ಅವಳು ತನ್ನ ಹೆಸರನ್ನು ಒಂದು ಒಗಟಿನಲ್ಲಿ ಮುಚ್ಚಿ ಹೇಳುತ್ತಾಳೆ 'ಕೆಸರು ತೌರುಮನೆ, ನೀರು ನೆಂಟರ ಮನೆ, ಬೆಳಕಿನ ಗಂಡನನ್ನು ನೋಡಿ ದಳದಳ ಅರಳುತ್ತದೆ' ಇದರರ್ಥ ಏನು ಎಂದು ಕೇಳಿದಾಗ ಅದಕ್ಕೆ ಜವಳಿ ಉತ್ತರ ಕೊಡುತ್ತಾನೆ:

ಕೆಸರು ನಿನ್ನ ತೌರುಮನೆ
ಮಳೆಯ ನೀರು ಬೀಗರ ಮನೆ
ಗಂಡು ಬೆಳಕು ಕಂದೀಲಿಗೆ
ಅರಳುವಾಕೆ ನೀನಲ್ಲವೇ?
ನಿನ್ನ ಹೆಸರು ವಂಡರಗಪ್ಪೆ! ಅಲ್ಲವೇನೇ!

ಉತ್ತರ ಸಯುಕ್ತಿಕವಾಗಿದ್ದರೂ ಅವಳು ಅಲ್ಲವೆನ್ನುತ್ತಾಳೆ. ಆಗ ಅವಳಿ ತನ್ನ ಇನ್ನೊಂದು ಉತ್ತರವನ್ನು ಕೊಡುತ್ತಾಳೆ:

ಕೆಸರಿನಲ್ಲಿ ಹುಟ್ಟುವಾಕೆ
ನೀರಿನಲ್ಲಿ ತೇಲುವಾಕೆ
ಬೆಳಕಿನಲ್ಲೇ ಅರಳುವಾಕೆ
ಹಸಿರು ಪಾಚಿ ನೀನಲ್ಲವೇ! ಎಲೆಲೆ ಹೆಣ್ಣೆ!
ಪಾಚಿ ನಿನ್ನ ಹೆಸರಲ್ಲವೇ

ಈ ಉತ್ತರವೂ ಸರಿಯಲ್ಲ. ಅವಳ ಹೆಸರು 'ಕಮಲ' ಎಂದು ಭಾಗವತ ಹೇಳುತ್ತಾನೆ. ಅವರಿಬ್ಬರಿಗಿಂತ ಭಾಗವತ ಜಾಣ, ಕಲಿತವನು.

ಆದರೆ ಇಲ್ಲಿಯ ಸಮಸ್ಯೆ ಎಂದರೆ ಅವಳಿ ಮತ್ತು ಜವಳಿ ಹೇಳಿದ್ದು ಯಾಕೆ ಸರಿಯಲ್ಲ ಎನ್ನುವುದು. ಅವಳ ಹೆಸರು ಕಮಲ ಎಂದೇ ಇರಬಹುದು. 'ಕಮಲ' ಎನ್ನುವುದು ಕೇವಲ ಹೆಸರಾಗಿದ್ದರೆ ಕಾಲ ದೇಶಗಳಿಂದ ಪ್ರಭಾವಿತವಾಗದ ಒಂದು ತತ್ವವಾಗುತ್ತದೆ. ಅದರ ಅರ್ಥ ಅದೇ ಆಗಿರುವುದರಿಂದ ಅದನ್ನು ವಿವರಿಸಿ ಹೇಳಲು ಬರುವುದಿಲ್ಲ. ಆದರೆ 'ಕಮಲ' ಶಬ್ದವಾದಾಗ ಅದಕ್ಕೊಂದು ಅರ್ಥವಿದೆ. ಅದನ್ನು ಭಾಷೆಯ ಮೂಲಕ ವಿವರಿಸಿ ಹೇಳಬಹುದು. ಪುರಸ್ತ್ರೀ ಅದನ್ನೇ ಮಾಡುತ್ತಾಳೆ. 'ಕಮಲ' ಶಬ್ದದ ಅರ್ಥವನ್ನು ಕೊಟ್ಟು ಶಬ್ದವನ್ನು ಊಹಿಸಲು ಹೇಳುತ್ತಾಳೆ. ಅರ್ಥವನ್ನಷ್ಟೇ ಪರಿಭಾವಿಸಿದಾಗ, ಅಥವಾ, ಭಾಷೆಯಲ್ಲಿ ಮೂಡಿದ ಅರ್ಥವನ್ನು ಪರಿಭಾವಿಸಿದಾಗ, ಮೂರು

ರೀತಿಯ ಊಹೆಗಳು ಮೂರು ಶಬ್ದಗಳನ್ನು ಹುಡುಕಿ ತೆಗೆಯುತ್ತವೆ. 'ವಂಡರಗಪ್ಪೆ', 'ಪಾಚಿ' ಮತ್ತು 'ಕಮಲ' ಇವು ಮೂರೂ ಸರಿಯಾದ ಉತ್ತರಗಳೇ ಆಗಿವೆ. ಭಾಗವತನ ಊಹೆ ಅವಳಿಂದ ಸ್ವೀಕೃತವಾಗುತ್ತದೆ, ಉಳಿದವರ ಊಹೆಗಳು ತಿರಸ್ಕೃತವಾಗುತ್ತವೆ. ಆದರೂ ಅವರ ಊಹೆ ತಪ್ಪಲ್ಲ. ಅವರ ಊಹೆಗಳು ತಪ್ಪಾಗಿದ್ದರೆ ಭಾಗವತನ ಊಹೆಯೂ ತಪ್ಪಾಗುತ್ತದೆ. ಭಾಗವತನ ಊಹೆ ಸರಿಯಾಗಿರುವುದು ಒಂದು ಆಕಸ್ಮಿಕ ಸತ್ಯವಾಗಿದೆ. ಜಗತ್ತನ್ನು ಆಳುವುದು ಆ ಆಕಸ್ಮಿಕ ಸತ್ಯವೇ.

ಈ ನಾಟಕದಲ್ಲಿಯೂ ಮೂವರು ನಾರ್ಸಿಸಸ್ಸರಿಗೆ - ಶಿವನಾಗದೇವ, ಅವಳಿ ಮತ್ತು ಜವಳಿ - ಮೂರು ಸತ್ಯಗಳು ದೊರಕಿವೆ. ಮೂವರನ್ನೂ ಅವರವರ ಸತ್ಯಗಳು ಕೊಂದುಹಾಕಿವೆ. ಅದಕ್ಕೆ ಕಾರಣ ಕನ್ನಡಿ, ನೀರು ಮತ್ತು ಕಾಳಿಂಗದಂಥ ಸತ್ಯದ ಮಾಧ್ಯಮಗಳು, ಸತ್ಯದ ಭಾಷೆಗಳು. ಭಾಷೆಯ ಕನ್ನಡಿ ಜಗತ್ತನ್ನು ಪ್ರತಿಬಿಂಬಿಸುತ್ತಲೇ ಇರುತ್ತದೆ. ಈಗ ಕಂಡ ಪ್ರತಿಬಿಂಬ ಮುಂದಿನ ಕ್ಷಣಕ್ಕಿಲ್ಲ. ಅಂದರೆ ನಮಗೆ ಸಿಗುವ ಜಗತ್ತುಗಳೆಲ್ಲ ಮೂಲ ಸತ್ಯದ ಪ್ರತಿಬಿಂಬಗಳು ಅಥವಾ ಮೂಲ ವಾಕ್ಯದ ಪುನರುಕ್ತಿಗಳು. ಮೂಲ ಮಾತ್ರ ಕಳೆದುಹೋಗಿದೆ. ಕಂಬಾರರ ಈ ನಾಟಕದ ಪ್ರಕಾರ ಮೂಲವನ್ನು ನುಂಗಿ ನೀರು ಹಿಡಿದವಳು ಹೆಣ್ಣು. ಹೆಣ್ಣಿನ ನೆಲೆ ನೀರಿನ ನೆಲೆಯಂತೆ ಅಗಾಧವಾದದ್ದು. ಬಹುಶಃ ಇದೇ ಈ ನಾಟಕದ ಮೂಲಕತೆಯ - ಎ.ಕೆ. ರಾಮಾನುಜನ್ ಹೇಳಿದ ಕತೆಯ - ನೀತಿಪಾಠವಾಗಿದೆ. ಆದರೆ ಕಂಬಾರರ ಈ ನಾಟಕದಲ್ಲಿ ಅದರ ಅರ್ಥ ಬದಲಾಗಿದೆ. ಆಗಲೇಬೇಕು. ಕಂಬಾರರ ಸಿರಿಸಂಪಿಗೆ ತನ್ನ ಗರ್ಭದಲ್ಲಿ ಈ ಸತ್ಯವನ್ನು ಕಾಪಾಡಿಕೊಂಡಿದ್ದಾಳೆ. ಶಿವನಾಗದೇವ ಸಾಯುವ ಮೊದಲು ಅವಳಿಗೆ ಒಂದು ಮಾತು ಹೇಳುತ್ತಾನೆ: 'ನನ್ನ ಮಗ ಸೀಳಿಕೊಳ್ಳದ ಹಾಗೆ ನೋಡಿಕೋ'. ಮಗ ಸೀಳಿಕೊಳ್ಳದ ಹಾಗೆ ನೋಡಿಕೊಳ್ಳುವುದು ತಾಯಿಯ ಜವಾಬ್ದಾರಿಯಾಗಿದೆ. ಆದರೆ ಮಗ ತಾಯಿಯಿಂದ ಸೀಳಿಕೊಂಡು ಹೋದ ಮೇಲೆ ಅವನನ್ನು ಮತ್ತೆ ಕೂಡಿಸುವವಳು ಅವನ ಹೆಂಡತಿ. ತಾಯಿ ಮತ್ತು ಹೆಂಡತಿಯ ಪರಸ್ಪರ ವಿರುದ್ಧವಾದ ಪಾತ್ರಗಳನ್ನು ನಿರ್ವಹಿಸಿದವಳು ರತಿಯಾದರೆ ಅವಳ ಇನ್ನೊಂದು ರೂಪ ಈ ಜಾನಪದ ರಮಣಿ ಸಿರಿಸಂಪಿಗೆ. ಸಿರಿಸಂಪಿಗೆಯ ವ್ಯಕ್ತಿತ್ವ ಎಂತಹದೆಂಬುದನ್ನು ನಾಟಕ ಹೇಳುವುದಿಲ್ಲ. ಅಥವಾ ಅವಳಿಗೆ ಯಾವುದೇ ಮಾನಸಿಕ ವ್ಯಕ್ತಿತ್ವವೇ ಇಲ್ಲ. ಶಿವನಾಗದೇವನ ತಾಯಿಗೆ ವಂಶದ ಘನತೆಯ ಎಚ್ಚರವಿದೆ, ಅದು ಮುಂದುವರೆಯಬೇಕೆಂಬ ಕಳಕಳಿ ಇದೆ. ಆದರೆ ಸಿರಿಸಂಪಿಗೆ ಕೇವಲ ಹೆಣ್ಣು. ಅವಳೇ ಒಂದು ಕನ್ನಡಿ; ಜಗತ್ತಿನ ಚಟುವಟಿಕೆಯನ್ನು ಲೀಲಾನೃತ್ಯವಾಗಿ ಮಾರ್ಪಡಿಸಿ ಅನುವಾದ ಮಾಡುವ ಮಾಯದ ಕನ್ನಡಿ. ಜಗತ್ತಿನೊಡನೆ ನಮ್ಮನ್ನೆಲ್ಲ ಹೊಂದಿಸುವ, ಅದರಂತೆಯೇ ಬೇರ್ಪಡಿಸುವ, ಬೇರ್ಪಡಿಸಿ ಅದರಾಚೆಗಿರುವ ಸತ್ಯವನ್ನು ತೋರಿಸುವ ಇಮ್ಮೈಯ ಚೌಕಟ್ಟಿಲ್ಲದ ಕನ್ನಡಿ.

ಇಷ್ಟೆಲ್ಲ ಹೇಳಿಯೂ ಎಲ್ಲವನ್ನೂ ಹೇಳಿದಂತಾಗುವುದಿಲ್ಲ. ಕಂಬಾರರು 'ಋಷ್ಯಶೃಂಗ', 'ಜೋಕುಮಾರಸ್ವಾಮಿ', 'ಹುಲಿಯ ನೆರಳು' ಮೊದಲಾದ ಯಶಸ್ವಿಯಾದ ನಾಟಕಗಳನ್ನು ಕೊಟ್ಟಿದ್ದಾರೆ. ಆದರೆ 'ಸಿರಿಸಂಪಿಗೆ ಅನನ್ಯವಾಗಿದೆ. ಮನುಷ್ಯ ಜೀವನದ ರಹಸ್ಯತಮವಾದ ಸತ್ಯವನ್ನು ತೆರೆದು ತೋರಿಸುವಲ್ಲಿ ಈ ನಾಟಕ ಯಶಸ್ವಿಯಾಗಿದೆ. ಈ ದೃಷ್ಟಿಯಿಂದ ಇದು ಕನ್ನಡದಲ್ಲಿಯೇ ಶ್ರೇಷ್ಠವಾದ ನಾಟಕವಾಗಿದೆ.

**ಕೀರ್ತಿನಾಥ ಕುರ್ತಕೋಟಿ**

# ವಂದನೆಗಳು

ನಮ್ಮ ಬದುಕಿಗೆ ತೀರ ಹತ್ತಿರವಾದೊಂದು ರಂಗಭೂಮಿ ನಮ್ಮಲ್ಲೇ ಇರುವಾಗ ಪಶ್ಚಿಮದ ರಂಗಭಾಷೆಯಲ್ಲಿ ನನ್ನ ಭಾವನೆ ದರ್ಶನಗಳನ್ನು ಹೇಳುತ್ತೇನೆನ್ನುವುದು ಹಾಸ್ಯಾಸ್ಪದ. ಎಲ್ಲಾ ರಂಗಭೂಮಿಗಳಿಗಿರುವಂತೆ ಯಕ್ಷಗಾನಕ್ಕೂ ಮಿತಿಗಳಿವೆ. ಸಾಧ್ಯತೆಗಳಿವೆ. ಯಕ್ಷಗಾನದ ರಂಗಸಾಧ್ಯತೆಗಳನ್ನ ಅಧ್ಯಯನ ಮಾಡುತ್ತ ಹೋದಾಗಿನ ಅನುಭವದ ಒಂದು ಪ್ರಕ್ರಿಯೆ ಪ್ರಸ್ತುತ ಸಿರಿಸಂಪಿಗೆ.

ಪಾರಂಪರಿಕ ಜನಪದ ರೂಪಕಗಳನ್ನು ಆಧುನಿಕ ರಂಗಭೂಮಿಗೆ ಅಳವಡಿಸುವ ಬಗೆಗಿನ ಫೆಲೋಶಿಪ್ ಅನ್ನು (೧೯೮೪-೮೬) ನನಗೆ ಕೊಟ್ಟ ಫೋರ್ಡ್ ಫೌಂಡೇಶನ್ ಅಧಿಕಾರಿಗಳಿಗೆ;

ಈ ನಾಟಕವನ್ನು ಪ್ರಥಮಬಾರಿಗೆ ನಿರ್ದೇಶಿಸಿದವರು ಕೆ.ವಿ. ಸುಬ್ಬಣ್ಣನವರು, ಅವರೊಂದಿಗೆ ಸಹಕರಿಸಿದವರು ಅತುಲ ತಿವಾರಿ ಅವರು, ನನ್ನೊಂದಿಗಿದ್ದು ಯಕ್ಷಗಾನದ ಧಾಟಿಗಳನ್ನು ಹಾಡಿ ಆ ಬಗೆಗಿನ ನನ್ನ ತಿಳಿವಿನ ಮೇರೆಗಳನ್ನು ವಿಸ್ತರಿಸಿದವರು ಭಾಗವತರಾದ ಪ್ರಭಾಕರ ಹೆಗಡೆ ಅವರು -

ಈ ಎಲ್ಲ ಮಹನೀಯರಿಗೂ; ಮತ್ತು

ಇದನ್ನು ಮೈಸೂರು ವಿಶ್ವವಿದ್ಯಾಲಯ ಬಿ.ಎ., ಬಿ.ಎಸ್ಸಿ. ಪದವಿಗೆ ಪಠ್ಯಪುಸ್ತಕವನ್ನಾಗಿ ಮಾಡಿದ್ದಕ್ಕೆ ಪಠ್ಯಪುಸ್ತಕ ಆಯ್ಕೆ ಸಮಿತಿಗೆ;

ವಿದ್ವತ್ಪೂರ್ಣ ಮುನ್ನುಡಿ ಬರೆದುಕೊಟ್ಟಿರುವ ಶ್ರೀ ಕುರ್ತಕೋಟಿ ಅವರಿಗೂ;

ಸುಂದರವಾಗಿ ಪ್ರಕಾಶಪಡಿಸಿದ ಮಿತ್ರ ಪ್ರಕಾಶ್ ಕಂಬತ್ತಳ್ಳಿ ಹಾಗೂ ಮುದ್ರಿಸಿದ ಸ್ವ್ಯಾನ್ ಪ್ರಿಂಟರ್ಸ್‌ನವರಿಗೂ ನನ್ನ ವಂದನೆಗಳು ಸಲ್ಲುತ್ತವೆ.

**– ಚಂದ್ರಶೇಖರ ಕಂಬಾರ**

# ಪಾತ್ರಗಳು

ರಾಜಕುಮಾರ
ಕಾಳಿಂಗ
ಅವಳಿ
ಜವಳಿ
ಹಿರಿಯರು
ತಾಯಿ
ಸಿರಿಸಂಪಿಗೆ
ಕಮಲ
ಭಾಗವತ

# ಪ್ರಾರ್ಥನೆ

ಸೊಲ್ಲಿನ ಮೊದಲೀಗೆ ಸಾವರ ಶರಣೆಂಬೆ
ಸಾವಳಗಿ ಶಿವನಿಂಗ ಮಹಾಸ್ವಾಮಿಗೆ ।
ಲೀಲೆಯಲಿ ಹೋಳಾಗಿ ಸತಿಪತಿ ತಾನಾಗಿ
ನಟಿಸಿದ ನಟರಾಜ ಅರ್ಧನಾರೀಶ್ವರಗೆ ।
ಮೈಯೆಂದು ಮನಸೆಂದು ಆತ್ಮದೇಹಗಳೆಂದು
ಎರಡಾಗಿ ಒಡೆದವಗೆ ಎರಡಳಿದ ಶಿವಗೆ ॥

# ದೃಶ್ಯ ೧

*ಭಾಗವತ ಮತ್ತವನ ಮೇಳ*

ಭಾಗವತ : **ಧರೆಯ ಮೇಗಡೆ ಮರೆವ ಶಿವಪುರ –**
**ದರಸು ನಾಗರ ರಾಯ ತೀರಲು**
**ಅರಸಿ ಮಾಯಾವತಿಯು ಧರಮ್ಮದಿ ರಾಜ್ಯವಾಳಿರಲು ॥**

*ತಾಯಿ ಮಾಯಾವತಿಯ ಪ್ರವೇಶ*

ತಾಯಿ : ಅಯ್ಯಾ, ಧರೆಯಲ್ಲಿ ಧರ್ಮದಿಂದ ಮೆರೆಯುವಂತಹ ಶಿವಾಪುರದ ಅರಸನಾದ ನಾಗನಾಯಕನ ಧರ್ಮಪತ್ನಿ ಮಾಯಾವತಿ ಎನಿಸಿಕೊಂಡವಳು ನಾನು. ಬಹುಕಾಲ ಧರ್ಮದಿಂದ ರಾಜ್ಯಭಾರ ಮಾಡಿದ ನನ್ನ ಪತಿದೇವರು ಅಕಾಲದಲ್ಲಿ ಕಾಲಾಧೀನರಾದರು. ಅನಂತರ ಪತಿದೇವರಂತೆ ನಾನು ಕೂಡಾ ಪ್ರಜಾಹಿತ ಪಾಲನೆಯಲ್ಲಿ ಎಳ್ಳಷ್ಟೂ ಕುಂದುಂಟಾಗದಂತೆ ನೋಡಿಕೊಂಡು ಬಂದಿರುವೆನು. ಇನ್ನು ನನ್ನ ಸಾಂಸಾರಿಕ ವಿಷಯಗಳನ್ನು ಸಾರಾಂಶವಾಗಿ ಹೇಳುವುದಾದರೆ ನನ್ನ ಪತಿದೇವರು ಅಗಲಿದಾಗ ಮಗನಾದ ಶಿವನಾಗದೇವನಿಗೆ ಒಂದು ವರ್ಷ ತುಂಬಿದ್ದಿತಷ್ಟೆ. ಪ್ರಜಾಪಲನೆಯ ಜೊತೆಗೆ ಆತನ ಲಾಲನೆ ಪಾಲನೆಯನ್ನು ಸುಗಮವಾಗಿ ನಡೆಸಿಕೊಂಡು ಬಂದ ನಾನು ಮಗನ ಬಾಲಲೀಲೆಗಳನ್ನು ನೋಡಿ ಸಂತೋಷಪಟ್ಟೆ. ಐದನೆಯ ವರ್ಷದಿಂದ ಗುರುಮುಖೇನ ಸಕಲ ಶಸ್ತ್ರಶಾಸ್ತ್ರ ವಿದ್ಯೆಗಳ ಬೋಧನೆ ಪಡೆದ ನನ್ನ ಕುಮಾರನು ದಿನೇ ದಿನೇ ಶುಕ್ಲ ಪಕ್ಷದ ಚಂದ್ರನಂತೆ ಬೆಳೆದು ಈಗ ಷೋಡಶಪ್ರಾಯಭರಿತನಾಗಿದ್ದಾನೆ. ತನ್ನ ತಂದೆಯ ರಾಜ್ಯ ಸಂಪತ್ತಿಗಲ್ಲದೆ ಶೌರ್ಯ, ಧೈರ್ಯ್ಯದಿ ಸದ್ಗುಣಗಳಿಗೆಊ ಒಡೆಯನಾಗಿದ್ದಾನೆ. ಪರ್ವತದಂತೆ ಬಲಶಾಲಿಯಾದ ಅವನು ರಾಜ್ಯದ ಕಾಡು ನಡಿಗೆ ಸ್ವಾಮಿಯಾಗಲು ತಕ್ಕವನಾಗಿದ್ದಾನೆ. ಅವನಿಗೆ ಪಟ್ಟಾಭಿಷೇಕವ ಮಡಿ ನಾನು ನಿಶ್ಚಿಂತಳಾಗಬೇಕೆಂದಿರುವಲ್ಲಿ ಒಂದು ದಿನ ಎಂಥಾ ಘಟನೆ ನಡೆದು ಹೋಯಿತಯ್ಯಾ!

ಭಾಗವತ : **ಕುಲದೇವರವತರಿಸಿ ಕಾರಣಿಕ ಹೇಳಿದರು**
**ಎಲಗೆ ಉಂಟಿವಗೆರಡು ದೋಷ ।**
**ಸನ್ಯಾಸಿಯಾಗುವನು ಧ್ವನಿ ಭಂಗವಾದಾಗ**
**ಅನುಜ ಸತ್ತಾಗಿವನು ಸಾವನೆಂದು ॥**

ತಾಯಿ : ಒಂದು ಹುಣ್ಣಿಮೆಯ ದಿನ ಕುಲದೇವರಿಗೆ ನೀಡುವ ಹಾಲು ಒಡೆದು ಅಪಶಕುನವಾಗೋಣವೆ? ಎಲಾ ಶಿವನೆ! ಹಿಂಗ್ಯಾಕಾಯಿತೆಂದು ಕೈ ಹೊತ್ತು ಚಿಂತಿಸುವಲ್ಲಿ ನಮ್ಮ ಕುಲದೇವರು ಅರಮನೆಯಲ್ಲಿ ಅವತರಿಸಿ ಅಪ್ಪಣೆ ಕೊಡಿಸಿದರು. ಅದೇನೆಂದರೆ:

**ಮಗಳೇ ನಿನ್ನ ಮಗನಿಗೆ ಭಾರೀ ಕಂಟಕವುಂಟು;**
**ಸ್ವರಭಂಗವಾದಾಗ ಸನ್ಯಾಸಯೋಗವಿದೆ,**
**ತಪ್ಪಿದರೆ ಭಾಗಾದಿ ಕಾರವಾಗಿ ಮರಣವಿದೆ.**

ಈ ಮಾತನ್ನು ಕೇಳಿ ಗಾಬರಿಯಿಮದ ದೈವದ ಪಾದ ಹಿಡಿದುಕೊಂಡು ಸ್ವಾಮಿ ದೈವವೇ, ಈಚಲ ರುಚಿ ನಿನಗೆ, ಪಂಚ ದೀವಟಿಗೆಯ ಸೇವೆ ನಿನಗೆ, ಶಿವದೇವರ ಬಲಭಾಗದಲ್ಲೊಂದು ಗುಡಿಕಟ್ಟಿ ಸತ್ಯದ ಪದಕಾಣಿಕೆ ಕೊಟ್ಟೇನು. ನನ್ನ ಕಂದ ಹಾಲೊಕ್ಕಲು ಚಿನ್ನದೊಕ್ಕಲಾಗಲೆಂದು ಬ್ಯಾಸರಗೊಳ್ಳದೆ ಹರಸು ಸ್ವಾಮಿ, ಎಂದೆ. ಕುಲದೇವರು ಕಿರುನಗೆ ಸೂಸಿ ಮಗನ ಸ್ವರಭಂಗವಾದಾಗ ತಡಮಾಡದೆ ಮದುವೆ ಮಾಡು. ನೀರಲ್ಲಿ ನೆರಳು ನೋಡಿಕೊಳ್ಳದ ಹಾಗೆ ನೋಡಿಕೋ. ಜಾಗ್ರತೆ' ಎಂದು ಹೇಳಿ ಮಾಯವಾದರು. ಅವನ ಜೊತೆ ಒಡಹುಟ್ಟಿದವರಿಲ್ಲವಾಗಿ ಮಗನ ಮರಣ ದೂರವಾಯಿತು. ರಾಜಕುಮಾರನು ನೀರಿನಲ್ಲಾಗಲಿ ಕನ್ನಡಿಯಲ್ಲಾಗಲಿ ಪ್ರತಿಬಿಂಬ ಕಂಡಾಗ ಅವನಿಗೆ ಐಹಿಕ ಭೋಗಭಾಗ್ಯಗಳ ಬಗ್ಗೆ ನಿರಾಸಕ್ತಿ ಉಂಟಾಗಿ ಸನ್ಯಾಸದತ್ತ ಮನಸ್ಸು ಒಲಿಯಬಹುದು. ಹಾಗಂತ ನಾನಾದರೂ ಜಾಗರೂಕತೆಯಿಂದ ಮಗನು ತನ್ನ ಪ್ರತಿಬಿಂಬ ದರ್ಶನ ಮಾಡದ ಹಾಗೆ ಬೆಳೆಸಿದ್ದೇನೆ. ಘನ ಚೆಲುವನಾದ ನನ್ನ ಮಗನು ಚಾಲೂಕಾಗಿ ನಿಂತಲ್ಲಿ ನಿಲ್ಲದೆ ಕೂತಲ್ಲಿ ಕೂರದೆ ಈಗಷ್ಟೆ ಹರೆಬಂದ ಹೋರಿಯಂತೆ ಸದಾ ಚಡಪಡಿಸುವುದನ್ನು ನೋಡಿ ಪುರದ ಹೆಣ್ಣುಗಳು ನಿಟ್ಟುಸಿರು ಬಿಡುವುದನ್ನು ನೋಡಿದ್ದೇನೆ. ಈಚೆಗಷ್ಟೇ ಅವನ ಸ್ವರಭಂಗವಾದುದರಿಂದ ಇನ್ನು ತಡಮಾಡುವಂತಿಲ್ಲ. ವಿವಾಹಕಾರ್ಯವ ನೆರವೇರಿಸಿ ಪಟ್ಟಾಭಿಷೇಕವ ಮಾಡಬೇಕೆಂದು ಸಮಸ್ತರ ಒಮ್ಮತ ಪಡೆದುದಾಗಿದೆ. ಆದರೆ ರಾಜಕುಮಾರನು ಸಲಕ್ಕೊಂದು ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದಾನೆ. ಎಷ್ಟೆಷ್ಟೋ ಕನ್ಯೆಯರನ್ನು ತೋರಿಸಿ ನಿರಾಶೆ ಹೊಂದಲಾಯ್ತು. ಈಗೀಗಂತೂ ಇವನು ಮೆಚ್ಚುವ ಕನ್ಯೆ ಭೂಮಂಡಲದಲ್ಲಿ ಇದ್ದಾಳೆಯೇ ಎಂದು ದಿಗಿಲಾಗಿದೆ. ಅವನು ನೆಪ ಹೇಳಿ ವಿವಾಹವನ್ನು ಮುಂದೂಡಿದಷ್ಟೂ ನನ್ನ ಚಿಂತೆ, ಗಾಬರಿಗಳು ಬೆಳೆಯುತ್ತಿವೆ. ಇರಲಿ, ಈಗ ರಾಜಕುಮರನನ್ನು ಕರೆಸಿ ಮದುವೆಗೆ ಒತ್ತಾಯ ಮಾಡಲೇಬೇಕು. ಅಯ್ಯಾ ಭಾಗವತರೇ….

ಭಾಗವತ : ಅಮ್ಮಾ ….

ತಾಯಿ : ರಾಜಕುಮಾರನನ್ನು ಕೂಡಲೇ ಕರೆಸಿ.

ರಾಜಕುಮಾರ : (ಪ್ರವೇಶಿಸಿ) ಅಮ್ಮಾ, ನಿಮ್ಮ ಅಡಿದಾವರೆಗಳಲ್ಲಿ ವಂದಿಸುತ್ತೇನೆ. ತಟ್ಟನೆ ಬರಬೇಕೆಂದು ಹೇಳಿ ಕಳಿಸಿದಿರಲ್ಲಾ; ಕಾರಣವೇನು ತಾಯಿ?

ತಾಯಿ : ಮಗನೆ –

ಭಾಗವತ : **ಜನನಿಯೆಂದಳು ಮಗನೆ ನಿನ್ನಯ**
**ಧ್ವನಿಯು ಬಿರಿತುದರಿಂದ ಈಗಳೆ**
**ಮದುವೆಯಗುವುದುಚಿತ ಕೇಳೈ |**
**ನಾರಿಯೋರ್ವಳ ವರಿಸಿ ಧರಣಿಯನಾಳಯ್ಯ**
**ಮಾತೆಯ ಮುದಗೊಳಿಸಿ ಬಾಳಯ್ಯ ||**

ತಾಯಿ : ಕಂದಾ ಅತಿಮುಖ್ಯವಾದ ವಿಚಾರವೊಂದನ್ನು ವಿನಿಮಯ ಮಾಡಲಿಕ್ಕಾಗಿ ನಿನ್ನನ್ನು ಕರೆಸಿದ್ದಾಯ್ತು. ಅಬಲೆಯಾಗಿ ವೃದ್ಧೆಯಾಗುತ್ತಿರುವ ನನಗೆ ಇನ್ನು ರಾಜ್ಯದ ಜವಾಬ್ದಾರಿ ನೀಗುವುದಿಲ್ಲವಾಗಿ ನಿನಗೆ ಸೂಕ್ತ ವಿಧಿಯಲ್ಲಿ ವಿವಾಹ ವಿಧಿಯ ನೆರವೇರಿಸಿ ಪಟ್ಟಾಭಿಷೇಕವ ಗೈದು ಮುಂದಿನ ಜೀವನವನ್ನು ವಿಶ್ರಾಂತವಾಗಿ ಕಳೆಯಬೇಕೆಂದು ನನ್ನ ಆಸೆ. ಅದಕ್ಕೆಂದೇ ವನಪುರಕ್ಕೆ ಪುರದ ಹಿರಿಯ ರನ್ನಟ್ಟೆ, ಅಲ್ಲಿಯ ಪುಷ್ಪರಾಜನ ಪುತ್ರಿ ಸಿರಿಸಂಪಿಗೆಯನ್ನು ನೋಡಿ ಒಪ್ಪಿ ಬಂದದ್ದಾಗಿದೆ. ಈಗ ನಿನ್ನ ಸಮ್ಮತಿ ಸಿಕ್ಕಬೇಕಷ್ಟೆ.

ರಾಜಕುಮಾರ : ತಾಯಿ, ಇಂತಹ ಸಣ್ಣ ವಿಚಾರಕ್ಕೆ ಎಷ್ಟೊಂದು ತಲೆ ಕೆಡಿಸಿಕೊಂಡಿರುವೆ-

ಭಾಗವತ : **ಜನನಿ ಬಿಡುಚಿಂತೆ ಆತುರವು ಯಾಕೆ**
**ಸಣ್ಣವನು ನಾನಿನ್ನು, ಹೆಣ್ಣ ಮೋಹವು ಬೇಕೆ?**

ರಾಜಕುಮಾರ : ಆಡಿಕೊಂಡಿರೋ ಮಗನ ಕತ್ತಿಗೊಂದು ಗುಂಡುಕಲ್ಲು ಕಟ್ಟಿದಂತೆ ನನಗೆ ಈಗಲೇ ಯಾಕಮ್ಮಾ ಮದುವೆ? ಹಿರಿಯಳಿದ್ದ ಮೇಲೆ ನನಗೆ ಯಾಕೆ ರಾಜ್ಯದ ಜವಾಬ್ದಾರಿ? ದಯವಿಟ್ಟು ಇಂಥ ನಿಷ್ಠುರ ವಿಚಾರಗಳನ್ನು ಹೆಳಿ ಹೇಳಿ ನನಗೆ ದುಃಖ ಕೊಡಬೇಡ ತಾಯಿ.

ತಾಯಿ : ಬೇಡವೆಂದು ಮತ್ತೆ ಮತ್ತೆ ಹೇಳಿ ನಮ್ಮ ಗಾಬರಿಗಳಿಗೆ ನೀರೆರೆಯಬೇಡ ಮಗನೆ. ಶಾಪಗಳಿಂದ, ನಿಟ್ಟುಸಿರುಗಳಿಂದ ಬೆಂದ ವಂಶ ನಮ್ಮದು. ಕುಲದೇವರ ಅಹಂಕಾರ ಕೊಂಕದ ಹಾಗೆ, ಕೆಟ್ಟ ದೈವಂಗಳ ದೃಷ್ಟಿ ತಾಗದ ಹಾಗೆ ತಪ್ಪಿಸಿ ಜಪ್ಪಿಸಿ ನಿನ್ನ ಬೆಳೆಸಿದ್ದಾಗಿದೆ. ಬೆವರಿಳಿಸಿ ಬೆಳೆಸಿದ ಸಸಿಯನ್ನು ಯಾವುದೋ ಸುಂಟರಗಾಳಿ ಬಂದು ಎತ್ತಿಕೊಂಡು ಹೋದರೆ ವಂಶದ ಗತಿಯೇನು ಕಂದಾ? ಇಷ್ಟು ದಿನ ಮಾಡಿದ ಹಟ ಇನ್ನು ಸಾಕು. ನಿನ್ನ ಮದುವೆಯ ಚಿಂತೆಯಲ್ಲೇ ನಿನ್ನ ತಾಯಿ ನೊಂದು ಬೆಂದು ಸಾಯುವುದು ನಿನಗಿಷ್ಟವಿಲ್ಲ ತಾನೆ?

ರಾಜಕುಮಾರ : ದಯಮಾಡಿ ಅಂತಹ ಮಾತನಾಡಬೇಡ ತಾಯಿ. ನಿನ್ನ ಮನಸ್ಸಿಗೆ ನೋವಾಗಿದ್ದರೆ ಕ್ಷಮಿಸು. ನೀವಾಯ್ದ ಕನ್ಯೆಯರಲ್ಲಿ ಒಂದಿಲ್ಲೊಂದು ಕೊರತೆ ಇದೆಯಾಗಿ ಮದುವೆ ಬೇಡವೆಂದೆನೇ ಹೊರತು ಅನ್ಯಕಾರಣವಿಲ್ಲ.

ತಾಯಿ : ಕೊರತೆಯಿಲ್ಲದ ಕನ್ಯೆ ಯಾವಳಿದ್ದಾಳೆ ಕುಮಾರ? ಅಂಥ ಕನ್ಯೆ ಬೇಕೇ ಬೇಕೆಂದರೆ ನೀನೇ ನಿನ್ನ ಹೆಂಡತಿಯಾಗಬೇಕಷ್ಟೆ.

ರಾಜಕುಮಾರ : ಕೊರತೆಯಿಲ್ಲದವಳು ಇರಲೇಬೇಕೆಂದು ನನ್ನ ನಂಬಿಕೆ ತಾಯಿ. ನನ್ನ ಸ್ವರಭಂಗವಾದಾಗಿನಿಂದ ಹಾಲಿನಲ್ಲಿರುವ ತುಪ್ಪದ ಹಾಗೆ ಅವಳೆಲ್ಲೋ ಅಡಗಿರುವಂತೆ ತೋರುತ್ತದೆ. ಮರೆಯಿಂದ ಹೊರಬರಲು ಅವಳೂ ಚಡಪಡಿಸುತ್ತಾಳೆ. ಅವಳನ್ನು ತೋರಿಸಲು ಅವಧಿ ಕೊಡಮ್ಮಾ.

ತಾಯಿ : ನೀನು ಮೆಚ್ಚಿದ ಕನ್ಯೆಯ ಹೆಸರು ಹೆಳುವುದಕ್ಕೂ ಅವಧಿ ಬೇಕೆ? ಅಥವಾ ಮದುವೆ ಮುಂದೂಡುವ ಇನ್ನೊಂದು ನೆಪ ಇದಲ್ಲ ತಾನೆ? ಆಯ್ತು. ಅವಧಿ ಕೊಟ್ಟೆ. ಇನ್ನೊಂದು ವಾರದಲ್ಲಿ ಆ ಕನ್ಯೆ ಯಾರೆಂದು ಹೇಳು. ಹೇಳಿದರೆ ಸರಿ, ಇಲ್ಲದಿದ್ದರೆ ಸಿರಿಸಂಪಿಗೆಯನ್ನು ನೀನು ಮದುವೆಯಾಗಬೇಕು. ಆದೀತೋ?

ರಾಜಕುಮಾರ : ಆಗಬಹುದು ತಾಯಿ.

# ದೃಶ್ಯ ೧

*ಅವಳಿ ಜವಳಿ ಹಾಡುತ್ತಾ ಬರುತ್ತಾರೆ.*

ಅವಳಿ ಮತ್ತು ಜವಳಿ : **ನಾನು ನೀನೂ ಭಲೆ ಭಲೆ ಜೋಡಿ**
**ಇಬ್ಬರು ಕೂಡಿ ಆಡಿ ಪಾಡಿ**
**ಅವಳಿ ಜವಳಿ ಜವಳಿ ಅವಳಿ**
**ನಕ್ಕೂ ನಗಿಸಿ ಅತ್ತೂ ಅಳಿಸಿ**
**ನಗದವರನ್ನು ನಗಿಸೋ ಜೋಡಿ**
**ಅಳದವರನ್ನು ಅಳಿಸೋ ಜೋಡಿ**
**ಹಾಸ್ಯ ಜೋಡಿ ಹಾಸ್ಯಾಸ್ಪದ ಜೋಡಿ ||**

ಅವಳಿ : ಎಂಥಾ ಭಾಗವತರಪ್ಪಾ ಇವರು? ಬಂದಂಥವರನ್ನ ಮಾತನಾಡಿಸೋದಿಲ್ಲವೆ!

ಭಾಗವತ : ಏನಂತ ಮಾತಾಡಿಸಬೇಕು?

ಜವಳಿ : ಭಳಿರೇ ಪರಾಕ್ರಮ ಕಂಠೀರವ-

ಭಾಗವತ : ಆಯ್ತಪ್ಪ ಹಾಗೇ ಹೇಳೋಣ. ಇರುವಂಥಾ ಸ್ಥಳ?

ಅವಳಿ : ಶಿವಾಪುರಕ್ಕೆ ಯಾರಂತ ಕೇಳಿದ್ದೀರಿ?

ಭಾಗವತ : ರಾಜಮಾತೆ ಮಾಯಾವತಿ ದೇವಿ ಅಂತ ಕೇಳಿದ್ದೇವೆ. ಅವರೇ ನೀವ?

ಜವಳಿ : ಅವರ ಆಸ್ಥಾನದ ವಿದೂಷಕರಾದಂಥಾ, ಅಖಿಳಾಂಡ ಬ್ರಹ್ಮಾಂಡ ಪಿಂಡಾಂಡ - ಇಂಥಾ ಅನೇಕ ಅಂಡಗಳ ಜೀವರಾಶಿಗಳನ್ನು ನಗಿಸುವಂಥಾ, ಇಲ್ಲವೇ ಅಳಿಸುವಂಥಾ-

ಅವಳಿ : ಹಾಸ್ಯ ಚಕ್ರವರ್ತಿ, ಹಾಸ್ಯಾಸ್ಪದ ಸಾರ್ವಭೌಮ, ವಿದೂಷಕ ಜೋಡಿ ಅವಳಿ ಜವಳಿ ಯಾರೆಂದು ಬಲ್ಲಿರಿ?

ಭಾಗವತ : ಗೊತ್ತಿಲ್ಲವಲ್ಲ!

ಅವಳಿ : ಅವರೇ ನಾವು.

ಭಾಗವತ : ಓಹೋ ನೀವೆಯೋ ಅವಳಿ ಜವಳಿ ಅಂದರೆ; ನಿಮ್ಮಲ್ಲಿ ಅಣ್ಣ ಯಾರು, ತಮ್ಮ ಯಾರು?

ಜವಳಿ : ನಾನು ಅಣ್ಣ, ಇವನು ತಮ್ಮ.

ಅವಳಿ : ಅಲ್ಲ ಭಾಗವತರೇ, ನಾನು ಅಣ್ಣ, ಇವನು ತಮ್ಮ.

ಭಾಗವತ : ನಿಮ್ಮಲ್ಲೇ ಏಕಾಭಿಪ್ರಾಯ ಇಲ್ಲವೆ?

ಇಬ್ಬರೂ : ಯಾಕಿಲ್ಲ? ಅದೂ ಇದೆ. ನಾನು ಅಣ್ಣ ಅಥವಾ ತಮ್ಮ ಭಾಗವತರೇ, ನಾವಿಬ್ಬರೂ ಭಾರೀ ಗಳಸ್ಯ ಕಂಠಸ್ಯ.

ಭಾಗವತ : ನಿಮ್ಮಲ್ಲಿ ಗಳಸ್ಯ ಯಾರು, ಕಂಠಸ್ಯ ಯಾರು?

ಇಬ್ಬರೂ : ನಾನು ಗಳಸ್ಯ ಅಥವಾ ಕಂಠಸ್ಯ ಭಾಗವತರೇ.

ಭಾಗವತ : ಒಗಟೊಗಟಾಗಿದೆಯಪ್ಪ!

ಅವಳಿ : ಸ್ವಾಮಿ ಭಾಗವತರೇ, ಒಂದು ಒಗಟು ಹೇಳ್ತೀನಿ, ಒಡೀತೀರಾ?

ಭಾಗವತ : ಅದೇನಪ್ಪಾ?

ಅವಳಿ : ಅದಿದ್ದರೆ ಇದಿಲ್ಲ, ಇದಿದ್ದರೆ ಅದಿಲ್ಲ. ಏನು ಹೇಳಿ?

ಭಾಗವತ : ಗೊತ್ತಾಗಲಿಲ್ಲವಲ್ಲ.

ಜವಳಿ : ಹಾಗಾದರೆ ಸೋತಿರೊ?

ಭಾಗವತ : ಸೋತೆ.

ಅವಳಿ : ಅಂದರೆ ಹೆಣ್ಣಿದೆ ಗಂಡಿಲ್ಲ, ಗಂಡಿದೆ ಹೆಣ್ಣಿಲ್ಲ ಅಂತ.

ಭಾಗವತ : ಅಂದರೆ?

ಅವಳಿ : ನಮ್ಮ ಮಿತ್ರ ರಾಜಕುಮಾರ ಇದ್ದಾನಲ್ಲಾ - ಅವನಿಗೆ ಹೆಣ್ಣಿದೆ, ಮದುವೆ ಮಾಡಿಕೋ ಕುಮಾರ ಅಂದರೆ ಆಗೋದಿಲ್ಲಾ ಅಂತಾನೆ. ನಾವಿದ್ದೀವಲ್ಲ ಗಂಡಸರು, ಮದುವೆ ಬೇಕು ಅಂತೀವಿ. ಹೆಣ್ಣು ಕೊಡೋರಿಲ್ಲ.

ಭಾಗವತ : ಒಂದು ಹೆಣ್ಣಿದೆ, ಮದುವೆ ಮಾಡಿಕೊಳ್ತೀರಾ?

ಇಬ್ಬರೂ : ಓಹೋ!

ಭಾಗವತ : ಒಂದೇ ಹೆಣ್ಣು, ಇಬ್ಬರು ಹ್ಯಾಗಪ್ಪಾ ಮದುವೆ ಆಗ್ತೀರಿ?

ಅವಳಿ : ಹೌದಲ್ಲ! ಅಣ್ಣಾ ಜವಳಿ, ನೀನೇ ಮದುವೆ ಮಾಡಿಕೊ.

ಜವಳಿ : ಸರಿ. ನಾನು ಮದುವೆ ಆದೆ ಅಂತಿಟ್ಟುಕೊಳ್ಳೋಣ. ನೀನೂ ನನ್ನ ಹಾಗೇ ಇರೋದರಿಂದ ನನ್ನ ಹೆಂಡತಿ ನಾನೇ ಅಂತ ನಿನ್ನನ್ನ ಸೇರಿಬಿಟ್ಟರೆ? ಬೇಡ, ಬೇಡ, ನೀನೇ ಮದುವೆ ಆಗು.

ಅವಳಿ : ಏನೆಂದೆ?

ಜವಳಿ : ಅದೇ, ಈಗ ನೀನು ಏನನ್ನ ಕೇಳಿಸಿಕೊಂಡೆಯೋ ಅದನ್ನ.

ಅವಳಿ : ನೀನೇ ಮದುವೆ ಆಗು ಅಂದೆ.

ಜವಳಿ : ನೀನಾಗು ಅಂದೆ.

ಅವಳಿ : (ಕೋಪದಿಂದ) ನನಗೆರಡೂ ಕೋರೆ ಹಲ್ಲು ಇದ್ದಿದ್ದರೆ ನಿನ್ನ ರಕ್ತ ಹೀರುತ್ತಿದ್ದೆ. ನಿನ್ನನ್ನ ಬಿಟ್ಟಿರೋದು ಅವಿಲ್ಲದ್ದರಿಂದ.

ಜವಳಿ : (ಕೋಪದಿಂದ) ನನಗೆರಡು ಕೊಂಬು ಇದ್ದಿದ್ದರೆ ನಿನ್ನ ಹೊಟ್ಟೆಗೆ ಇರಿಯುತ್ತಿದ್ದೆ. ನಿನ್ನನ್ನು ಬಿಟ್ಟಿರೋದು ಅವಿಲ್ಲದ್ದರಿಂದ.

*ಇಷ್ಟರಲ್ಲಿ ಪುರಸ್ತ್ರೀ ನರ್ತಿಸುತ್ತ ಬರುತ್ತಾಳೆ. ಇಬ್ಬರೂ ಜಗಳ ಮರೆತು ಮೈಮರೆಯುತ್ತಾರೆ.*

ಭಾಗವತ : ಯಾರಮ್ಮಾ ನೀನು?

ಪುರಸ್ತ್ರೀ : ಒಳ್ಳೇ ಭಾಗವತರು. ನನಗೊಂದು ವರ ಬೇಕು, ನೋಡಿ ಅಂತ ನಿಮಗೆ ಹೇಳಿದವಳು ನಾನೇ ಅಲ್ಲವ?

ಭಾಗವತ : ಓಹೋ ಹೌದಲ್ಲವೇ? ನಿನ್ನ ಹೆಸರನ್ನ ಮರೆತಿದ್ದೇನೆ ಅನ್ನೋದು ಈಗ ನೆನಪಾಯ್ತು. ಏನಮ್ಮ ನಿನ್ನ ಹೆಸರು?

ಪುರಸ್ತ್ರೀ : ಪುನಃ ಹೇಳಬೇಕೋ? ಹಾಗಿದ್ದರೆ ಕೇಳೀ: ಕೆಸರು ತೌರು ಮನೆ, ನೀರು ನೆಂಟರ ಮನೆ, ಬೆಳಕಿನ ಗಂಡನ್ನೋಡಿ ದಳ ದಳ ಅರಳುತ್ತದೆ. ಏನು ಹೇಳಿ?

ಜವಳಿ : ನಾನು ಹೇಳಲಾ ಭಾಗವತರೆ?

ಭಾಗವತ : ಹೇಳಪ್ಪಾ.

ಜವಳಿ : **ಕೆಸರು ನಿನ್ನ ತೌರುಮನೆ**
**ಮಳೆಯ ನೀರು ಬೀಗರಮನೆ**
**ಗಂಡು ಬೆಳಕು ಕಂದೀಲಿಗೆ**
**ಅರಳುವಾಕೆ ನೀನಲ್ಲವೆ?**
**ನಿನ್ನ ಹೆಸರು ವಂಡರಗಪ್ಪೆ ।**
**ಅಲ್ಲವೇನೆ ನಿನ್ನ ಹೆಸರು ವಂಡರಗಪ್ಪೆ ॥**

*ಜವಳಿಯನ್ನು ಬಿಟ್ಟು ಉಳಿದವರೆಲ್ಲ ನಗುವರು.*

ಅವಳಿ : ದಡ್ಡತನ ತೋರಿಸೋದಕ್ಕೆ ಎಷ್ಟೊಂದು ಉತ್ಸಾಹ ನೋಡಿ. ಅವನ ದಡ್ಡತನವನ್ನು ಕ್ಷಮಿಸಿ ಭಾಗವತರೆ, ನಾನು ಹೇಳಲಾ?

ಭಾಗವತ : ಆಗಲಪ್ಪಾ.

ಅವಳಿ : **ಕೆಸರಿನಲ್ಲಿ ಹುಟ್ಟುವಾಕೆ**
**ನೀರಿನಲ್ಲಿ ತೇಲುವಾಕೆ**
**ಬೆಳಕಿನಲ್ಲಿ ಅರಳುವಾಕೆ**
**ಹಸಿರು ಪಾಚಿ ನೀನಲ್ಲವೆ ।**
**ಎಲೆಲೆ ಹೆಣ್ಣೆ । ಪಾಚಿ ನಿನ್ನ ಹೆಸರಲ್ಲವೇ ॥**

*ಅವಳಿಯನ್ನು ಬಿಟ್ಟು ಉಳಿದವರು ನಗುವರು.*

ಭಾಗವತ : ಇಷ್ಟೂ ತಿಳಿಯೋದಿಲ್ಲವೇನ್ರಯ್ಯಾ, ಈಕೆಯ ಹೆಸರು ಕಮಲ.

ಅವಳಿ : ನನಗೆ ಗೊತ್ತಿತ್ತು ಭಾಗವತರೇ. ಇವಳು ನಕ್ಕಾಗ ಚೆಂದ ಕಾಣಿಸುತ್ತಾಳೆ ನೋಡಿ, ಅದಕ್ಕೇ ನಗಿಸೋಣ ಅಂತ ಹಾಗೆ ಹೇಳಿದೆ. (ಕಮಲಳ ಮುಂದೆ ಮೊಳ ಕಾಲೂರಿ) ದೇವೀ ಇಷ್ಟನ್ನು ಆಣೆಮಾಡಿ ಹೇಳುತ್ತೇನೆ; ಸತೀವ್ರತನಾಗಿ ಸತಿಸೇವೆ ಮಾಡುತ್ತ ಹೇಳಿದಲ್ಲಿ ಬಿದ್ದುಕೊಂಡಿರುವ ನಿನ್ನ ವಿನಮ್ರ ಗಂಡನಾಗೋದು ನನ್ನ ಬದುಕಿನ ಗುರಿ. ಇದನ್ನು ಈಡೇರಿಸಲಾರೆಯಾ?

ಜವಳಿ : ತ್ಯಾಗದಲ್ಲಿ ನಾನೇನು ಕಮ್ಮಿ? ಅಯ್ಯಾ ಅವಳಿ, ನಿನಗೋಸ್ಕರ ಮದುವೆ ಯಾಗಬಾರದೆಂಬ ನನ್ನ ಛಲವನ್ನೇ ತ್ಯಾಗ ಮಾಡಿ, ನಾನೇ ಇವಳನ್ನು ಮದುವೆ ಆಗ್ತೇನೆ, ಆಯ್ತು? ದೇವೀ, ನನ್ನ ಆಸೆಯನ್ನು ಈಡೇರಿಸಲಾರೆಯಾ?

*ಕಮಲಳ ಮುಂದೆ ಇವನೂ ಮೊಳಕಾಲೂರಿ ಕೂರುತ್ತಾನೆ.*

ಅವಳಿ : ನಾನು ಏನು ಹೇಳಿದರೂ ಅದನ್ನೇ ಹೇಳ್ತಿಯಲ್ಲಯ್ಯಾ.

ಜವಳಿ : ನಾನೂ ಅದನ್ನೇ ಕೇಳ್ತಿರೋದು.

ಅವಳಿ : ನನಗೆಷ್ಟು ಕೋಪ ಬಂದಿದೆ ಗೊತ್ತಾ?

ಜವಳಿ : ಎಷ್ಟು?

ಅವಳಿ : ತುಂಬ ಅಂದರೆ ವಿಪರೀತ ಅಂದರೆ ಭಯಂಕರ ಅಂದರೆ ಕೋಪದಲ್ಲಿ ಕತಕತ ಕುದೀತಿದ್ದೀನಿ.

ಜವಳಿ : ಕುದೀತಾ ಇದ್ದೀ ತಾನೆ? ಅದರಲ್ಲಿ ನನ್ನ ಬೇಳೆ ಬೇಯಿಸಿಕೊಳ್ತೇನೆ, ಅವಕಾಶ ಮಾಡಿಕೊಡಣ್ಣಾ.

ಅವಳಿ : ಹ್ಯಾಗೆ?

ಜವಳಿ : ನಾನು ಹೇಳಿದ ಹಾಗೆ ಹೇಳಿದರಾಯ್ತು. ಇಲ್ಲಿ ಹೇಳು ನೋಡೋಣ. (ತನ್ನೆದೆ ತಟ್ಟಿಕೊಳ್ಳುತ್ತ) ಕಮಲ ನನ್ನವಳು.

ಅವಳಿ : (ತನ್ನೆದೆ ತಟ್ಟಿಕೊಳ್ಳುತ್ತ) ಕಮಲ ನನ್ನವಳು.

ಜವಳಿ : (ಅವಳಿಯ ಬೆರಳಿಂದ ತನ್ನನ್ನು ತೋರಿಸುತ್ತ) ಛೇ ನಿನ್ನವಳು ಅನ್ನಪ್ಪಾ.

ಅವಳಿ : (ಜವಳಿಯ ಬೆರಳಿಂದ ತನ್ನನ್ನು ತೋರಿಸುತ್ತ) ಛೇ ನಿನ್ನವಳು ಅನ್ನಪ್ಪಾ.

ಜವಳಿ : ದಯಮಾಡಿ ಆ ಮಾತು ಬಿಟ್ಟು ಇನ್ನೇನಾದರೂ ಬೊಗಳ್ತೀಯಾ?

ಅವಳಿ : ದಯಮಾಡಿ ಇನ್ನೇನಾದರೂ ಬೊಗಳ್ತೀಯಾ?

ಜವಳಿ : ನನಗೆ ಗೊತ್ತಿತ್ತು ಭಾಗವತರೆ, ಇವನು ಅಣ್ಣ ಅಥವಾ ತಮ್ಮನಲ್ಲ; ಇಲಿ ಹೆಗ್ಗಣ ಅಂತ. ಇಬ್ಬರ ಮಧ್ಯೆ ಇದ್ದ ಸಂಬಂಧ ಸೂತ್ರಗಳನ್ನ ಎಷ್ಟು ಸಲೀಸಾಗಿ ಕಚ್ಚಿಬಿಟ್ಟ ನೋಡಿ!

ಅವಳಿ : ನನಗೆ ಗೊತ್ತಿತ್ತು ಭಾಗವತರೆ, ಇವನು ಅಣ್ಣ ಅಥವಾ ತಮ್ಮನಲ್ಲ, ತೋಳ ಅಥವಾ ನರಿ ಅಂತ. ಇಬ್ಬರ ಮಧ್ಯೆ ಇದ್ದ ಕರುಳನ್ನು ಹ್ಯಾಗೆ ತಿಂದುಬಿಟ್ಟು ನೋಡಿ! ಜಗತ್ತಿನ ಅತಿದೊಡ್ಡ ಭ್ರಾತೃದ್ರೋಹವೊಂದನ್ನು ನೋಡಿ ಸಾಯಬೇಕಂತ ಸಂಕಲ್ಪ ಮಾಡಿದ್ದೆ. ಅದನ್ನೀಗ ನೋಡಿಯಾಯ್ತು. ನಾನೀಗ ಸಾಯ ಬೇಕು. ಬರತ್ತೀನಿ ಭಾಗವತರೇ?

ಭಾಗವತ : ಸತ್ತ ಮೇಲೆ ಹೇಗಪ್ಪ ಬರುತ್ತಿ?

ಜವಳಿ : ನನ್ನ ಕೊಲೆ ಮಾಡೋದಕ್ಕೆ ಹ್ಯಾಗೋ ಬರುತ್ತಾನೆ ಭಾಗವತರೇ. ಅಕ್ಕಪಕ್ಕ ಯಾರಾದರೂ ಚಿಲ್ಲರೆ ದೇವತೆಗಳಿದ್ದರೆ ಬಂದು ಕಾಪಾಡಿಯಪ್ಪಾ.

ಭಾಗವತ : ಏನ್ರಯ್ಯಾ ಇದು? ಕಮಲ ಅಂದರೆ ಲಾಟರಿ ಅಂದುಕೊಂಡಿರಾ? ನಿಮ್ಮಿಬ್ಬರಲ್ಲಿ ತನಗೆ ಯಾರು ಇಷ್ಟ ಅಂತ ಹೇಳಬೇಕಾದವಳು ಅವಳಲ್ಲವೊ? ಕಮಲ, ಈಗ ನಿನ್ನ ಗಂಡನ್ನ ನೀನೇ ಆಯ್ದುಕೊಳ್ಳಮ್ಮಾ.

ಕಮಲ : ಹ್ಯಾಗೆ ಸಾಧ್ಯ ಭಾಗವತರೇ? ಇಬ್ಬರೂ ಒಂದೇ ಥರಾ ಇದ್ದಾರೆ. ಇಬ್ಬರೂ ದ್ವಂದ್ವಯುದ್ಧ ಮಾಡಲಿ. ಗೆದ್ದವನೇ ನನ್ನ ಆಯ್ಕೆ. ಆದೀತೊ?

ಅವಳಿ : ಒಪ್ಪಿದೆ. ಇಕೋ ಯುದ್ಧಕ್ಕೆ ಸಿದ್ಧನಾದೆ. (ಜವಳಿಗೆ) ಎಲವೆಲವೋ ಹೆಂಬೇಡಿ, ಕಂತ್ರಿನಾಯಿ, ಹಂದಿ....

ಜವಳಿ : ನಿನ್ನ ಬಿರುದಾವಳಿಗಳನ್ನ ನನ್ನ ಮುಂದೆ ಬೊಗಳಬೇಡವೊ. ಈಗಲೇ ಯುದ್ಧಕ್ಕೆ ಬಾ. ಇದೊ ಸಹಿಸಿಕೊ.

*ಹೋಗಿ ಅವನಿಗೆ ಏಟು ಹಾಕುತ್ತಾನೆ. ಅವಳಿ ಅಳುತ್ತಾನೆ.*

ಅವಳಿ : ಅಯ್ಯೊ ಅಯ್ಯೊ.... ಕುಲದೇವರೇ, ಕಾಪಾಡಪ್ಪ. ಈಗ ನೀನೇನಾದರೂ ಇಲ್ಲಿಗೆ ಬಂದರೆ ಒಂದು ವರ ಕೊಡಪ್ಪಾ. ಅದೇನೆಂದರೆ....

ಜವಳಿ : ಕಮಲ ನನ್ನ ಹೆಂಡತಿಯಾಗಲಿ.

ಕಮಲ : ತಥಾಸ್ತು *(ಎಂದು ಜವಳಿಯ ಕೈ ಹಿಡಿಯುವಳು)*

ಭಾಗವತ : ಆಯ್ತಲ್ಲ; ಸ್ವಯಂ ಕಮಲೂನೇ ಜಗಳ ಬಗೆಹರಿಸಿದಳು. ಇನ್ನು ಇಬ್ಬರೂ ನೆಮ್ಮದಿಯಿಂದ ಇರಬಹುದಲ್ಲಾ.

ಅವಳಿ : ಇನ್ನೆಲ್ಲಿಯ ನೆಮ್ಮದಿ ಭಾಗವತರೇ? ಕಾಡಿನಲ್ಲಿ ತಪಸ್ಸು ಮಾಡಿ ದೇವರಾಗಿ ತಿರುಗಿ ಬಂದು. ಇವರಿಬ್ಬರಿಗೂ ಸಾವಿನ ವರ ನೀಡುತ್ತೇನೆ. ಇಕೋ ಕಾಡಿಗೆ ಹೊರಟೆ.

ಜವಳಿ : ಇರು ಇರು. ನಮ್ಮ ಮದುವೆ ನೋಡಿ ಹೊಟ್ಟೆಕಿಚ್ಚಿನಿಂದ ಸುಟ್ಟುಕೊಳ್ಳುತ್ತ ಹೋಗು. ಭಾಗವತರೇ, ನಮಗೆ ಆಶೀರ್ವಾದ ಮಾಡಿ.

*ಜವಳಿ ಮತ್ತು ಕಮಲ ಭಾಗವತನಿಗೆ ನಮಸ್ಕರಿಸುತ್ತಾರೆ. ಭಾಗವತ ಆಶೀರ್ವದಿಸುತ್ತಾನೆ.*

ಅವಳಿ : *(ದುಃಖಿಸುತ್ತಾ)* ಅಯ್ಯಾ ಭಾಗವತರೇ,ಕೊನೆಯ ಮಾತೊಂದಿದೆಯಲ್ಲ.

ಭಾಗವತ : ಅದೇನಪ್ಪಾ?

ಅವಳಿ : ನಮ್ಮ ಮಿತ್ರ ರಾಜಕುಮಾರನ ಸೇವೆಯನ್ನು ಇಬ್ಬರೂ ಮಾಡಿಕೊಂಡು ಬಂದೆವು. ಈಗ ನಾನು ಕಾಡಿಗೆ ಹೋಗುತ್ತಿದ್ದೇನೆ. ಇವನು ಅದನ್ನ ಹೃತ್ಪೂರ್ವಕ ನಡೆಸಿಕೊಂಡು ಹೋಗುತ್ತಾನೋ ಕೇಳಿ. ಯಾಕೆಂದರೆ ನಾನಿಲ್ಲದಾಗ ರಾಜಕುಮಾರ 'ಮಿತ್ರಾ ಅವಳಿ' ಎಂದು ಕಂಗಾಲಾಗಿ ಪರಿಸಪಿಸುವುದನ್ನ ಕಲ್ಪಿಸಿಕೊಂಡರೇ ನನಗೆ ದುಃಖವುಕ್ಕಿ ಬರುತ್ತದೆ.

ಜವಳಿ : ಇವನು ಈಗಲೇ ಊರು ಬಿಡೋದಾದರೆ ಏನೇನೂ ಕೊರತೆಯಾಗದ ಹಾಗೆ ರಾಜಕುಮಾರನ ಸೇವೆ ಮಾಡುತ್ತೇನೆ ಅಂತ ಹೆಳಿ ಭಾಗವತರೇ.

ಅವಳಿ : ಹಾಗಾದರೆ ರಾಜಕುಮಾರ ಮಲಗೋ ಹೊತ್ತಾಯ್ತು. ಕಾವಲಿಗೆ ಹೋಗೆಂದು ಹೇಳಿ ಭಾಗವತರೇ.

ಜವಳಿ : ಆದರೆ ಇವನು ಊರು ಬಿಟ್ಟದ್ದು ಖಾತ್ರಿಯಾಗೋತನಕ ನಾನಿವಳನ್ನ ಖಂಡಿತ ಬಿಟ್ಟಿರಲಾರೆ ಭಾಗವತರೇ.

*ಅವಳಿ ಅಳುತ್ತ ಹೊರಡುವನು*

ಜವಳಿ : ಹೋಗಯ್ಯಾ ಅಣ್ಣ ಅಥವಾ ತಮ್ಮಾ. ನದಿ ಒಣಗಿದೆ. ಅದರ ಗುಂಟ ಕಣ್ಣೀರು ಸುರಿಸು. ತುಂಬಿ ಹರಿಯುತ್ತೋ ನೋಡೋಣ.

## ದೃಶ್ಯ ೩

*ಭಾಗವತ ಮತ್ತವನ ಮೇಳ*

ಭಾಗವತ : **ಇಂತು ಕುಮಾರನು ಇಂದ್ರ ನಿವಾಸದಿ**
**ಚಿಂತೆಯಿಂದ ಮಲಗಿರಲಾಗಿ**
**ಬಂತೇ ದೀಪದ ಪ್ರತಿಮೆಗೆ ಜೀವವು**
**ಭ್ರಾಂತಿಯಾಗುತಿದೆ ಜೀವಕ್ಕೆ**
**ಕಾಂತಾ ಎನ್ನುತ ಸನ್ನೆ ಮಾಡುತೇ-**
**ಕಾಂತಕೆ ಕರೆವುದುದ ಅಚ್ಚರಿಯೇ**

**ಒರೆಯ ಕತ್ತಿ ತಾ ಹೊರಬಗಡೆ ಬಂದಿತು**

**ಚುರುಕು ಮುಟ್ಟಿಸಿತು ತೊಡೆಗಳಿಗೆ ||**

*ಮೇಲಿನ ಹಾಡು ನಡೆಯುತ್ತಿರುವಾಗ ದೀಪ ಹಿಡಿದ ದಹೆಣ್ಣಿನ ಮೂರ್ತಿ ಜೀವಗೊಂಡು ನರ್ತಿಸುತ್ತದೆ. ರಾಜಕುಮಾರನಿಗೆ ಎಚ್ಚರವಾಗಿ ಅದನ್ನು ಹಿಡಿಯಹೋದಾಗ ಅದು ನರ್ತಿಸುತ್ತ ಅವನಲ್ಲಿ ಮಾಯವಾಗುತ್ತದೆ. ರಾಜಕುಮಾರ ವಿಪರೀತ ಉದ್ರೇಕದ ಸ್ಥಿತಿಯಲ್ಲಿದ್ದಾನೆ.*

ರಾಜಕುಮಾರ : ಎಲಾ! ಏನೀ ಅದ್ಭುತ! ಯಾವುಳೋ ಶಪಿತ ದೇವತೆ ಇಷ್ಟು ದಿನ ಕಲ್ಲಾಗಿದ್ದವಳು ಈಗ ಶಾಪಮುಕ್ತಳಾಗಿ ಜೀವ ತಳೆದಿರಬಹುದೇ?.... ಅಥವಾ ನನ್ನಲ್ಲಿ ಅನುರಾಗ ಹೊಂದಿದ ಅಪ್ಸರೆಯೊಬ್ಬಳು ಕಲ್ಲಿನಲ್ಲಿ ಹುದುಗಿ ನನಗಾಗಿ ಕಾಯುತ್ತಾ ಈಗ ಕಲ್ಲಿನ ಮುಚ್ಚುಮರೆಯಿಂದ ಅರಳಿ ಹೊರ ಬಂದಿರಬಹುದೇ? ಸುಡುವ ಬೆಳಕನ್ನೇ ಅಂಗೈಯಲ್ಲಿ ಇಟ್ಟುಕೊಂಡು ಕುಣಿದಾಡುತ್ತ ಮಿಂಚಾಗಿ ಸಂಚರಿಸುತ್ತ ನನ್ನ ಮೈಯಲ್ಲಿ ಅಡಗಿದಳಲ್ಲ! ನನ್ನನ್ನು ಹೊರತುಪಡಿಸಿ ಮದುವೆ ಮಾಡಿಕೋ ಎಂಬುದಾಗಿ ಸೂಚಿಸಿರಬಹುದೇ? ಹೌದು. ಬಹುದಿನಗಳಿಂದ ನಾನು ಬಯಸುತ್ತಿದ್ದ ಕಾಮಿನಿ ಇವಳೇ ಇರಬಹುದು. ಹಾಗಿದ್ದರೆ ನನ್ನ ಹೆಣ್ಣು ಸಿಕ್ಕಳು! ಮಿತ್ರಾ ಎದ್ದೇಳು ಸಿಕ್ಕಳು.

ಜವಳಿ : (ಎಚ್ಚತ್ತು) ನಿದ್ದೆ ಕೂಡ ಮಾಡೋದಕ್ಕೆ ಬಿಡೋದಿಲ್ಲವಲ್ಲೋ ಮಾರಾಯಾ.

ರಾಜಕುಮಾರ : ಬೇಗ ಎಚ್ಚರಾಗು.

ಜವಳಿ : ಇನ್ನೂ ಹ್ಯಾಗೆ ಎಚ್ಚರಾಗೋದು.

ರಾಜಕುಮಾರ : ಸಿಕ್ಕಳು!

ಜವಳಿ : ಯಾರು ಸಿಕ್ಕರು? ನಾನು ಇಲ್ಲೇ ಇದ್ದೇನೆ.

ರಾಜಕುಮಾರ : ಛೇ! ನಾನು ಹೇಳೋದು ನಿನಗರ್ಥವಾಗುತ್ತಿಲ್ಲ.

ಜವಳಿ : ಅರ್ಥವಾಗುವ ಹಾಗೆ ಹೇಳು ಮಾರಾಯಾ. ಯಾವಾಕೆ ಸಿಕ್ಕಳು? ಎಲ್ಲಿದ್ದಾಳೆ? ಮಂಚದ ಕೆಳಗೆ ಅಡಗಿಸಿಟ್ಟಿದ್ದೀಯೋ?

ರಾಜಕುಮಾರ : ಚೇಷ್ಟೆ ಮಾಡಬೇಡ ದಯಮಾಡಿ ಕೇಳು....

ಜವಳಿ : ದಯಮಾಡಿ ಹೇಳು.

ರಾಜಕುಮಾರ : ನನ್ನ ಪಾಡಿಗೆ ನಾನು ಘನವಾದ ನಿದ್ದೆಯಲ್ಲಿದ್ದಾಗ ಅಖಂಡವಾದ ಅರಮನೆಯ ಗೋಡೆ ಬಿರಿದಂತಾಯ್ತು. ಒರೆಯ ಖಡ್ಗವನ್ನು ಹಿರಿದು ಯಾರೋ ನನ್ನ ತೊಡೆಗೆ ಚುರುಕು ಮುಟ್ಟಿಸಿದರು. ತಕ್ಷಣ ಎಚ್ಚರವಾಯ್ತು. ಎದ್ದು ಕೂತೆ. ನೋಡಿದರೆ ಮೂಲೆಯಲ್ಲಿ ಬಚ್ಚಿಟ್ಟ ಕನಸುಗಳು ಪ್ರತ್ಯಕ್ಷವಾದ ಹಾಗೆ ಅಕೋ ಆ ಮೂಲೆಯಲ್ಲಿ ದೀಪದ ಮೊಲ್ಲೆ ಇತ್ತಲ್ಲ ಅದಕ್ಕೆ ಜೀವ ತುಂಬಿತು. ಯೌವನದಿಂದ ಕುಸುಮಿಸಿದ ಮುಖವನ್ನು ಅರಳಿಸುತ್ತ ನಸುನಗುತ್ತಿದ್ದಳು. ಅದು.... ಅಲ್ಲ ಅವಳು.... ನೋಡು ನೋಡುತ್ತಿದ್ದಂತೆ ಅಂಗೈಯಲ್ಲಿ ಆರತಿ ಹಿಡಿದು ನನ್ನ ಸುತ್ತು ಕುಣಿಯಲಾರಂಭಿಸಿದಳು. ಕುಣಿಯುತ್ತಾ ನನ್ನ ಅಂಗಾಂಗಗಳ ಮೇಲೆ ತನ್ನ ದೃಷ್ಟಿಗಳ ಸುರಿಸುತ್ತಾ ಮೈತುಂಬಾ ಹರುಷದ ಬಳ್ಳಿ ಹಬ್ಬಿಸುತ್ತಾ ಗಟ್ಟಿಯಾಗಿ- ಉಸಿರುಗಟ್ಟಿ ಒದ್ದಾಡುವಷ್ಟು ಗಟ್ಟಿಯಾಗಿ-ತಬ್ಬಿಕೊಂಡು ನನ್ನಲ್ಲಿ ಐಕ್ಯವಾದಳು!

ಜವಳಿ : ನೀನು ಹೇಳೋದನ್ನು ಕೇಳಿದರೆ ಇದ್ಯಾವುದೋ ಹೆಣ್ಣು ಭೂತದ ಚೇಷ್ಟೆ ಇದ್ದಿರಬೇಕು ಅನ್ನಿಸುತ್ತದೆ. ಮಿತ್ರಾ, ಮಲಗುವಾಗ ನೀನು ತುಂಬಿದ ಚೊಂಬನ್ನು ತಲೆದಿಂಬಿಗೆ ಇಟ್ಟುಕೊಳ್ಳುವುದು ಒಳ್ಳೆಯದು. ಯಾಕಂತಿಯೊ? ಭೂತಗಳು ಹತ್ತಿರ ಸುಳಿಯೋದಿಲ್ಲ.

ರಾಜಕುಮಾರ : ಅದು ಭೂತವಲ್ಲಯ್ಯ. ನಿನಗೆ ಹ್ಯಾಗೆ ಹೇಳೋದು? ಅಗೋ ಆ ಮೂಲೆಯಲ್ಲಿ ದೀಪದ ಮೊಲ್ಲೆ ಇತ್ತಲ್ಲ ನೆನಪಿದೆಯಾ?

ಜವಳಿ : ಹೌದು. ಅದೆಲ್ಲಿಗೆ ಹೋಯ್ತು?

ರಾಜಕುಮಾರ : ಹೇಳಲ್ಲಿಲ್ಲವೇ ಅದಕ್ಕೆ ಜೀವತುಂಬಿ ಕುಣಿಯುತ್ತಾ ನನ್ನಲ್ಲಿ ಐಕ್ಯವಾಯಿತು ಅಂತ. ನನ್ನ ಪುಳಕವಿನ್ನೂ ಹಾಗೆಯೇ ಇದೆ. ಈಗಲೇ ತಾಯಿಯ ಬಳಿಗೆ ಓಡು. ಬೆಳಿಗ್ಗೆ ಸಮಸ್ತರ ಓಲಗ ಕೂಡಿಸುವಂತೆ ಹೇಳು.

ಜವಳಿ : ಬೆಳಗಾದರೂ ಆಗಲಿ ಮಾರಾಯ.

ರಾಜಕುಮಾರ : ಛೇ, ಆಗಿರೋ ಬೆಳಗೂ ನಿನ್ನ ಕಣ್ಣಿಗೆ ಕಾಣಿಸುವುದಿಲ್ಲವಲ್ಲ. ತಾಯಿ ಆತಂಕದಲ್ಲಿದ್ದಾಳೆ. ಬೇಗನೆ ಹೋಗಿ, ರಾಜಕುಮಾರ ಮದುವೆಗೆ ಕೆಲವು ಕರಾರುಗಳ ಮೇರೆಗೆ ಒಪ್ಪಿಕೊಂಡಿದ್ದಾನೆ ಅನ್ನು.

ಜವಳಿ : ಏನು? ಮದುವೆಗೆ ಒಪ್ಪಿಕೊಂಡಾಯ್ತಾ? ಯಾವಳಪ್ಪ ಆ ಚೆಲವೆ?

ರಾಜಕುಮಾರ : ಹೇಳ್ತೀನಿ, ಮೊದಲು ಹೋಗಿ ಹೇಳು.

*ಜವಳಿ ಹೋಗುವನು.*

## ದೃಶ್ಯ ೬

*ಕಮಲ ಮತ್ತು ಜವಳಿ ತಮ್ಮ ಮನೆಯಲ್ಲಿ*

ಕಮಲ : ಸ್ವಾಮೀ ಮದುವೆಯಾದಾಗಿನಿಂದ ಒಂಥರಾ ಇದ್ದೀರಲ್ಲ, ಯಾಕೆ?

ಜವಳಿ : ಮದುವೆ? ಯಾರ ಮದುವೆ? ನನ್ನದೋ ಮಹಾರಾಜನದೋ? ಅಥವಾ ಅವಳೀದೋ?

ಕಮಲ : ನಮ್ಮ ಮದುವೆ, ಅಂದರೆ ನನ್ನ ಮತ್ತು ನಿಮ್ಮ ಮದುವೆ.

ಜವಳಿ : ಓಹೋ ಹೌದಲ್ಲವೆ! ಪ್ರಿಯೆ. ನಿನ್ನೆ ಕನಸಿನಲ್ಲಿ ನಾನು ನಿನ್ನನ್ನು ಒಂದು ಹಕ್ಕಿಗೆ ಹೋಲಿಸುತ್ತಿದ್ದೆ. ಆದರೆ ಆ ಹೋಲಿಕೆ ಸರಿಬರಲಿಲ್ಲ. ಯಾಕೆಂದರೆ ಅವಳಿ ಆಗಲೇ ತನ್ನ ಕನಸಿನಲ್ಲಿ ನಿನ್ನನ್ನ ಹಕ್ಕಿಗೆ ಹೋಲಿಸಿ ಒಂದು ಪದ್ಯ ಬರೆದಿದ್ದ. ದಯಮಾಡಿ ನೀನು ಅವನನ್ನು ಜಾಸ್ತಿ ಜ್ಞಾಪಿಸಿಕೊಳ್ಳಬೇಡ. ಯಾಕೆಂದರೆ ಕನಸಿನಲ್ಲಿ ಬರುತ್ತಾನೆ.

ಕಮಲ : ಸ್ವಾಮೀ ನೀವ್ಯಾಕೆ ನಿಮ್ಮ ಅಣ್ಣನನ್ನ-

ಜವಳಿ : *(ಅಸಹನೆಯಿಂದ)* ಅಣ್ಣ ಅಲ್ಲ ತಮ್ಮ.

ಕಮಲ : ಸ್ವಾಮೀ ನೀವ್ಯಾಕೆ ನಿಮ್ಮ ತಮ್ಮನನ್ನ-

ಜವಳಿ : ತಮ್ಮ ಅಲ್ಲ ಅಣ್ಣ.

ಕಮಲ : ಅವಳಿ ನಿಮಗೇನಾಗಬೇಕು?

ಜವಳಿ : ಅಣ್ಣ ಅಥವಾ ತಮ್ಮ.

ಕಮಲ : ಸರಿ, ನಿಮ್ಮಣ್ಣ ಅಥವಾ ತಮ್ಮ ಇಲ್ಲಿಲ್ಲ. ಅದ್ಯಾಕೆ ನೀವು ಅವನನ್ನ ಅಷ್ಟೊಂದು ದ್ವೇಷಿಸುತ್ತೀರಿ?

ಜವಳಿ : ನಾನು ಅವಳಿಯನ್ನು ದ್ವೇಷಿಸುತ್ತೇನೆಯೆ? ಸಾಧ್ಯವಿಲ್ಲವಲ್ಲಾ! ನಿಜ ಹೇಳಬೇಕೆಂದರೆ ಒಂದು ಕಣ್ಣಲ್ಲಿ ನಿನ್ನನ್ನ, ಇನ್ನೊಂದರಲ್ಲಿ ಅವನನ್ನಿಟ್ಟುಕೊಂಡು ಇಬ್ಬರನ್ನೂ ಸಮಾನವಾಗಿ ನೋಡ್ತೀನಿ, ಗೊತ್ತ? ಅಣ್ಣ ಅಥವಾ ತಮ್ಮ, ಅಕ್ಕ ಅಥವಾ ಪಕ್ಕ ಇಲ್ಲದ್ದರಿಂದ ನನಗೆಷ್ಟು ಭಯವಾಗುತ್ತಿದೆ ಅಂದರೆ ಈಗ ಏನು ಹೇಳಬೇಕಂತ ತೋಚೋದೇ ಇಲ್ಲ.

ಕಮಲ : ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಿ. *(ಹಾಗೇ ಮಾಡುತ್ತಾನೆ)* ಈಗ ಹೇಳೋದಕ್ಕೇನೂ ತೋಚುತ್ತಿಲ್ಲವೆ?

ಜವಳಿ : ತೋಚುತ್ತಿದೆ. ಆದರೆ ಒಂದು ಕಣ್ಣಲ್ಲಿ ನಾನು. ಇನ್ನೊಂದರಲ್ಲಿ ಆಣ್ಣ ಅಥವಾ ತಮ್ಮ ಮೂಡಿದ್ದಾನೆ.

ಕಮಲ : *(ಒಂದು ಕಣ್ಣು ಮುಚ್ಚಿಕೊಂಡು)* ಈಗ ನೋಡಿ. ಯಾರು ಮೂಡಿದ್ದಾರೆ?

ಜವಳಿ : ಅವಳಿ ಮೂಡಿದ್ದಾನೆ.

ಕಮಲ : *(ಮುಚ್ಚಿದ್ದ ಕಣ್ಣು ತೆರೆದು ಇನ್ನೊಂದನ್ನು ಮುಚ್ಚಿ)* ಈಗ?

ಜವಳಿ : ಇದರಲ್ಲೂ ಅವನೇ!

ಕಮಲ : ಏನು ಮಾಡ್ತಿದಾನೆ?

ಜವಳಿ : ನಿನ್ನ ಎದೆ ನೋಡಿ ಉಸಿರು ಹಾಕ್ತಿದನೆ.

ಕಮಲ : ನಿಮಗೆ ಅವಳಿ ಭೂತವಾಗಿ ಕಾಡಿಸ್ತಿದಾನೆ.

ಜವಳಿ : ಭೂತವಲ್ಲ, ತೋಳ; ಹಸಿದ ತೋಳ.

ಕಮಲ : ಹಾಗಿದ್ದರೆ ನಾನು ಹುಲಿ ಅಂತ ತಿಳಿದಕೊಳ್ಳಿ. ತೋಳ ಓಡಿಹೋಗುತ್ತದೆ.

ಜವಳಿ : ಅಯ್ಯಯ್ಯೋ ಬೇಡ ಬೇಡ. ನೀನು ಕಮಲವಾಗೇ ಇರು. ಹುಲಿ ಕಂಡರೆ ನನಗಿನ್ನೂ ಭಯ.

ಕಮಲ : ಹೀಗೆ ಎದ್ದರೆ ಕೂತರೆ ಅವಳಿ ಅನ್ನೋರು ಅವನನ್ಯಾಕೆ ಸುಮ್ಮನೆ ಬಿಟ್ಟಿರಿ?

ಜವಳಿ : ಅವನನ್ನು ಮುಗಿಸೋಣ ಅಂತಲೇ ಇದ್ದೆ. ಏನು ಮಾಡೋದು. ಹಾಳಾದೋನು ನನ್ನ ಹಾಗೇ ಇದ್ದಾನೆ ನೋಡು, ನನಗಾದರೂ ಗೌರವ ಕೊಡೋಣ ಅಂತ ಸುಮ್ಮನೆ ಬಿಟ್ಟೆ.

ಕಮಲ : ಇದ್ಯಾಕೊ ವಿಪರೀತಕ್ಕಿಟ್ಟುಕೊಂಡಿತಲ್ಲಾ! ಭಾಗವತರೇ -

ಭಾಗವತ : ಏನಮ್ಮ?

ಕಮಲ : ನೀವೇ ನಿಂತು ಮದುವೆ ಮಾಡಿದಿರಿ. ಪ್ರೀತಿ ಮಾಡೋಣ ಅಂದರೆ ತನ್ನಣ್ಣ ಅಥವಾ ತಮ್ಮನನ್ನ ಜ್ಞಾಪಿಸಿಕೊಂಡು ಒಂದೇ ಸಮ ಕೊರಗ್ತಿದ್ದಾರೆ.

ಭಾಗವತ : ಏನಯ್ಯಾ ಜವಳಿ, ಸಜ್ಜನ ಅಂತ ಮದುವೆ ಮಾಡಿದರೆ ಹೀಗೆಲ್ಲ ಮಾಡಬಹುದ? ನೀನು ಹೀಗೆ ಮಾಡುತ್ತಾ ಹೋದರೆ ನಾನು ನಿನ್ನ ಬಗೆಗಿನ ಅಭಿಪ್ರಾಯ ಬದಲಿಸಬೇಕಾಗುತ್ತದೆ, ಅಷ್ಟೆ.

ಜವಳಿ : ಏನು ಮಾಡಲಿ ಭಾಗವತರೇ, ಪ್ರೀತಿ ಮಾಡೋಣ ಅಂತ ಕಮಲಳನ್ನು ನೋಡೋದೇ ತಡ ಇವಳ ಎರಡೂ ಕಣ್ಣಲ್ಲಿ ನನ್ನಣ್ಣ ಅಥವಾ ತಮ್ಮನೇ ಮೂಡಿಬರತ್ತಾನೆ! ದೀಪ ಕಳೆದು ಕಣ್ಣುಮುಚ್ಚಿ ಪ್ರೀತಿ ಮಾಡೋಣ ಅಂದರೆ ಕಣ್ಣಲ್ಲಿ ಅಡಗಿದ್ದವನು ಯಾವಾಗ ಎದ್ದು ಬರುತ್ತಾನೋ ಅಂತ ಗಾಬರಿ ಆಗುತ್ತದೆ. ಅದಕ್ಕೇ ನನಗೀಗ ಪ್ರೀತಿ ಅಂದರೆ ಕಣ್ಣುರಿ ಭಾಗವತರೇ.

ಭಾಗವತ : ಹಾಗಂತ ಕಮಲಳ ಜೀವನ ಹಾಳಾಗಬಾರದಲ್ಲ. ಇವತ್ತು ಸೋಮವಾರ. ಇಬ್ಬರೂ ಹೋಗಿ ಕುಲದೇವರನ್ನಾದರೂ ಕೇಳಿಕೊಂಡು ಬನ್ನಿ.

ಜವಳಿ : ಇವತ್ತು ಬೇಡ. ರಾಜಮಾತೆಯವರು ನನಗೊಂದು ತುರ್ತಿನ ಕೆಲಸ ಹೇಳಿದ್ದಾರೆ.

ಭಾಗವತ : ಅದೇನಪ್ಪ?

ಜವಳಿ : ನನ್ನ ಮಿತ್ರ ಮಹಾರಾಜ ಯಾವಾಗೆಂದರೆ ಆವಾಗ ಕದ್ದು ಹೊರಗಡೆ ಹೋಗೋ ವಿಚಾರ ನಿಮಗೆ ಗೊತ್ತಲ್ಲ?

ಭಾಗವತ : ಕೇಳಿ ಬಲ್ಲೆವು.

ಜವಳಿ : ಮಹಾರಾಜ ಕದ್ದು ಹೊರಗಡೆ ಹೋಗುವಾಗ ಹಿಂದಿನಿಂದ ಹೋಗಿ, ಎಲ್ಲಿಗೆ ಹೋಗ್ತಾರೆ, ಏನು ಮಾಡ್ತಾರೆ - ಎಲ್ಲ ಪತ್ತೆ ಮಾಡಿಕೊಂಡು ಬಾ ಅಂತ ರಾಜಮಾತೆ ನನಗೆ ಹೇಳಿದ್ದಾರೆ. ನಾನಲ್ಲಿಗೆ ಹೋಗಿ ಬಂದ ಮೇಲೆ ಇನ್ನೊಂದು ದಿನ ಕುಲದೇವರನ್ನು ಕೇಳೋಣ. ಅಲ್ಲೀ ತನಕ ನೀವಿಬ್ಬರೂ ದಯಮಾಡಿ ನನ್ನ ಬಗೆಗೆ ಸದಭಿಪ್ರಾಯ ಇಟ್ಟುಕೊಂಡಿರಬೇಕಂತ ಪ್ರಾರ್ಥನೆ.

ಭಾಗವತ : ಸರಿಯಪ್ಪ.

*ಜವಳಿ ಹೋಗುವನು. ಕಮಲ ಇನ್ನೊಂದು ಕಡೆ ಹೋಗುವಳು.*

# ದೃಶ್ಯ ೭

*ಅರಮನೆಯಲ್ಲಿ ತಾಯಿ ಮತ್ತು ಹಿರಿಯರು*

ಭಾಗವತ : **ಮದುವೆಯಾದನು ಸಂಪಿಗೆ ಜೊತೆ**
**ಆದರೂ ಸಂತೃಪ್ತಿ ಕಾಣದೆ**
**ಹೋದಬಂದಲ್ಲೆಲ್ಲ ಹುಡುಕುತಲಿದ್ದ ಮೊಲ್ಲೆಯನೆ ||**
**ಅಧಿಕವಾದವು ಹುಚ್ಚು ಕುವರನ**
**ತಾಯಿ ಮಡಿದಳಧಿಕ ಚಿಂತೆಯ**
**ಯಾವ ದೇವರು ಯಾವ ದೈವದ ರಕ್ಷೆ ತನಗೆಂದು ||**
**ಕುಲವ ಪೊರೆವವರಾರು ಬಳಿಕೆ –**
**ನ್ಯಾರು ಗತಿ ಮಹಾರಾಣಿ ಸಂಪಿಗೆ**
**ದೇವಿಯರ ಮುಖಕಮಲವನು ನೋಡುವುದು ಹ್ಯಾಗೆಂದು ||**

ತಾಯಿ : ಏನಿದ್ದದ್ದು ಏನಾಯ್ತು ಹಿರಿಯರೆ? ಮಗನ ರಾಜ್ಯಭಾರ ಮತ್ತು ಸಂಸಾರಗಳನ್ನು ಕಣ್ತುಂಬ ನೋಡುತ್ತಾ ಆಯುಷ್ಯದ ಕೊನೆಯ ದಿನಗಳನ್ನು ಮೊಮ್ಮಕ್ಕಳೊಂದಿಗಿನ ಆಟಪಾಠಗಳಲ್ಲಿ ಕಳೆಯಬೇಕೆಂದ ನನಗೆ ಶಿವನು ಇಂಥಾ ಶಿಕ್ಷೆ ಕೊಡಬಹುದೆ? ಮದುವೆಯಾದ ಮೇಲೆ ಮಗ ಹಡೆದವಳ ಬಿಟ್ಟು ಕೂಡಿದವಳ ಮಾಯೆಗೆ ಒಳಗಾಗುತ್ತಾನೆ ಎಂದು ಹೇಳುತ್ತಾರೆ. ಹಾಗೂ ಆಗಲಿಲ್ಲ. ಗಂಡ ಹೆಂಡತಿ ಕೂಡಿ ನಗಾಡಿದ್ದನ್ನು ನಾನು ಒಂದು ಬಾರಿಯೂ ನೋಡಲಿಲ್ಲ. ಮದುವೆಯಾದ ಮೊದಲನೆಯ ದಿನದಿಂದಲೇ ಯಾವಾಗೆಂದರೆ ಆವಾಗ ನಾಪತ್ತೆ ಆಗುತ್ತಾನೆ. ಯಾವಾಗೆಂದರೆ ಅವಾಗ ವಾಪಸಾಗುತ್ತಾನೆ. ಕಳೆದುಕೊಂಡದ್ದನ್ನು ಹುಡುಕುವವರ ಹಾಗೆ ಹೋಗುತ್ತಾನೆ. ಸಿಕ್ಕದವರ ಹಾಗೆ ನಿರಾಶೆಯಿಂದ ಮರಳಿ ಬರುತ್ತಾನೆ. ಯಾರ ಜೊತೆಗೂ ಮಾತಿಲ್ಲ, ಕಥೆ ಇಲ್ಲ. ಕುಲ ದೇವರನ್ನು ಕೇಳಿದರೆ ಬಿಕ್ಕಿ ಬಿಕ್ಕಿ ಸುಮ್ಮನಾಯಿತೇ ಹೊರತು ಬಾಯಿ ಬಿಡಲಿಲ್ಲ. ಸದಾ ಅಳುವ ಸೊಸೆಯ ಮುಖ ನೋಡಲಾಗುತ್ತಿಲ್ಲ. ಮಗನ ಮುಖ ಕಾಣುತ್ತಿಲ್ಲ. ನೀವೇ ಹೇಳಿ ಸಮಸ್ತರೆ, ಈಗೇನು ಮಾಡಬೇಕು?

ಹಿರಿಯ ೧ : ರಾಜರು ಕಾಲಕಾಲಕ್ಕೆ ಊಟ ಮಾಡುತ್ತಾರೆಯೇ ತಾಯಿ?

ತಾಯಿ : ಮಾಡಿದರೆ ಮಾಡಿದ, ಇಲ್ಲದಿದ್ದರೆ ಇಲ್ಲ. ನನ್ನ ಕಂಡರೆ ತಪ್ಪಿತಸ್ಥರ ಹಾಗೆ ಮುಖ ತಿರುಗಿಸುತ್ತಾನೆ. ಕುಲದೇವರ ಕೋಪಶಾಪವೋ, ಪಿಶಾಚಿಗಳ ಕಾಟವು ಒಂದೂ ತಿಳಿಯದಾಗಿದೆ.

ಹಿರಿಯ ೨ : ಅವರೆಲ್ಲಿಗೆ ಹೋಗುತ್ತಾರೆ ಎಂಬುದೇನಾದರೂ ಗೊತ್ತೇ ತಾಯಿ?

ತಾಯಿ : ಎಲ್ಲಿಗೋ ಗೊತ್ತಿಲ್ಲ. ಆದರೆ ಕೆಸರಲ್ಲಿ ಉರುಳಾಡಿದ ಹಾಗೆ ಮೈ-ಕೈ ಕೊಳೆ ಮಾಡಿಕೊಂಡು ಬರುತ್ತಾನೆ.

ಹಿರಿಯ ೩ : ಶಾಸ್ತ್ರ ಕೇಳಿದಿರಾ ತಾಯಿ?

ತಾಯಿ : ಮೋಹಿನಿ ಬಾಧೆ ಅನ್ನುತ್ತಾರೆ. ನಿಜ ಇರಬಹುದೋ ಏನೋ. ಯಾಕೆಂದರೆ ಸೀಳಿಕೊಳ್ಳುವ ಮುನ್ನಾದಿನ ಇಂದ್ರ ನಿವಾಸದ ದೀಪದ ಮೊಲ್ಲೆ ರಾತ್ರಿ ಜೀವ ತುಂಬಿ ಕುಣಿದಾಡಿ ಇವನನ್ನೇ ಐಕ್ಯವಾಯಿತೆಂದು ಹೇಳಿದ. ಆಶ್ಚರ್ಯವೆಂದರೆ ಅಂದಿನಿಂದ ಆ ವಿಗ್ರಹವೂ ಮಾಯವಾಗಿದೆ.

ಹಿರಿಯ ೩ : ಮಹಾಲಕ್ಷ್ಮಿಯಂತಿರುವ ಮಹಾರಾಣಿಯವರನ್ನು ರಾಜರು ಒಮ್ಮೆಯಾದರೂ ನೋಡಿದ್ದಾರೆಯೇ ತಾಯಿ? ನೋಡಿದ್ದರೆ ಈ ಸಮಸ್ಯೆಯೇ ಇರುತ್ತಿರಲಿಲ್ಲ.

ತಾಯಿ : ನೀವು ಅಂದುಕೊಂಡಿದ್ದಕ್ಕಿಂತ ಸಮಸ್ಯೆ ಆಳವಾಗಿದೆ ಹಿರಿಯರೆ....

ಭಾಗವತ : **ಒಮ್ಮೆ ದೀಪದ ಮೊಲ್ಲೆಯನು**
**ಸಂಪಿಗೆ ಕಣ್ಣಲಿ ಕಾಣಲಾರದೆ**
**ನಾನು ಬಯಸುವ ಹೆಣ್ಣು ನೀ ತೆಗೆ ಅಲ್ಲ ಹೋಗೆಂದ ||**

ತಾಯಿ : ಒಂದು ಬಾರಿ ಅದೂ ಒಂದೇ ಬಾರಿ ಸಿರಿಸಂಪಿಗೆಯ ಮುಖವನ್ನ ತದೇಕ ದೃಷ್ಟಿಯಿಂದ ನೋಡತೊಡಗಿದನಂತೆ. ಅವಳು ನಾಚಿ ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡರೆ ಅವನು ರಭಸದಿಂದ ಬಂದು ಅವಳ ಕೈ ಕೊಸರಿ ಮುಖವನ್ನ ಅಂಗೈಯಲ್ಲಿ ಹಿಡಿದು ಕಣ್ಣಲ್ಲಿ ಕಣ್ಣಿಟ್ಟು ನೋಡಿದನಂತೆ. ತಕ್ಷಣ ತಿರಸ್ಕಾರದಿಂದ ಮುಖವನ್ನು ನಿವಾರಿಸುತ್ತ ನಿನ್ನ ಕಣ್ಣಲ್ಲಿ ದೀಪದ ಮೊಲ್ಲೆ ಇಲ್ಲ ದೇವಿ ಎಂದು ಹೇಳಿ ಹೊರಟು ಹೋದನಂತೆ. ಸದ್ಯ ಆಕೆಯ ಕಣ್ಣಲ್ಲಿ ದೀಪದ ಮೊಲ್ಲೆ ಕಾಣಲಿಲ್ಲ. ಕಂಡಿದ್ದರೆ ಕಣ್ಣನ್ನೇ ಕಿತ್ತುಬಿಡುತ್ತಿದ್ದನೋ ಏನೋ. ಅವನಿಗೆ ಗೊತ್ತಾಗದ ಹಾಗೆ ಹಿಂದಿನಿಂದ ಹೋಗಿ ಎಲ್ಲಿ ಹೋಗುತ್ತಾನೆ, ಏನು ಮಾಡುತ್ತಾನೆಂದು ತಿಳಿಯಲು ಜವಳಿಯನ್ನು ಕಳಿಸಿದ್ದೆವು ಅಗೋ ಅವನೇ ಬಂದ.

*ರಾಜಮಾತೆಗೆ ಜವಳಿ ಅಡ್ಡ ಬೀಳುತ್ತಾನೆ.*

ತಾಯಿ : ಬಾ ಮಗನೆ. ಎಷ್ಟು ಜನ ಸೇವಕರನ್ನಟ್ಟಿದರೂ ಕಂಡಿರಲಾರದ ಗುಟ್ಟು ನಿನಗೆ ತಿಳಿದಿರಲು ಸಾಧ್ಯ. ಹೇಳು ರಾಜಕುಮಾರ ಈಗ ಎಲ್ಲಿದ್ದಾನೆ? ಏನು ಮಾಡುತ್ತಿದ್ದಾನೆ? ಕೇಳುವುದಕ್ಕೆ ಕಾತರಳಾಗಿದ್ದೇನೆ. ವಿವರವಾಗಿ ಹೇಳು ಅವನನ್ನು ಕೊನೆಯತನಕ ಬೆನ್ನಟ್ಟಿ ಹೋಗುವುದು ಸಾಧ್ಯವಾಯಿತೇ?

ಜವಳಿ : ಸಾಧ್ಯವಾಯಿತು ತಾಯಿ. ಆದರೆ ಅಲ್ಲಿ ನಾನು ಕಂಡದ್ದು ಮಾತ್ರ ವಿಪರೀತ.

ತಾಯಿ : ಅದನ್ನೇ ಕೇಳುತ್ತಿದ್ದೇನೆ, ಹೇಳು.

ಭಾಗವತ : **ಮೊಲ್ಲೆ ಮೊಲ್ಲೇ ಎಂದು ಹಲುಬುತ**
**ಬೆಟ್ಟಗುಡ್ಡಗಳಲ್ಲಿ ಅಲೆಯುತ**
**ನೀರು ಕುಡಿಯಲು ಕೆರೆಗೆ ಬಂದನು ಬಹಳ ಬಾಯಾರಿ!**
**ಅರರೆ ನೀರಲಿ ನೀರೆ ಯಾರಿವ–**
**ಳಾರು ದೀಪದ ಮೊಲ್ಲೆಯಲ್ಲವೆ?**
**ದೊರಕಿ ಬಿಟ್ಟಳು ಎನುತ ಬಿಂದಬದ ಮೋಹದಲಿ ಬಿದ್ದ ||**

ಜವಳಿ : ತಮ್ಮ ಆಜ್ಞೆಯಂತೆ ನಿನ್ನೆ ರಾತ್ರಿ ಮಹಾರಾಜರ ಹಿಮದಿನಿಂದ ನಾನು ಹೋಗಿದ್ದೆ. ಪ್ರಯಾಣದ ಸಿದ್ಧತೆ ಇಲ್ಲದೆ ಬೀಳ್ಕೊಡುವವರಿಲ್ಲದೆ ಎಲ್ಲಿಗೋ ಹೊರಟಂತಿದ್ದರು ರಾಜರು. ಹೆದರಿ ಹೆದರಿ ಹಿಂದಕ್ಕೆ ನೋಡುತ್ತಾ ದಾರಿ ನೋಡದೆ ಎರವುತ್ತಾ ಮರೆ ಸಿಕ್ಕಲೆಲ್ಲಾ ಅಡಗುತ್ತಾ ಹೊರಟಿದ್ದರು. ಅವರನ್ನ ಆಗ ನೋಡಿದವರು ತಕ್ಷಣ ಹೇಳಬಹುದಿತ್ತು - ಇವನು ಯಾರನ್ನೋ ವಂಚಿಸಿ ಓಡಿಹೋಗುತ್ತಿರುವ ಅಪರಾಧಿ, ಪರಾಗಿ ಆಗುತ್ತಿದ್ದಾನೆ ಅಂತ. ಬಾಯಾರಿ ಅಡವಿಯ ಬಳಿಯ ಸರೋವರಕ್ಕೆ ಹೋದರು.

ಬೆಳದಿಂಗಳಿತ್ತು. ಸರೋವರದಲ್ಲಿ ಆಕಾಶ ಮೂಡಿತ್ತು. ಮೋಡ ಮೂಡಿದ್ದವು. ಅವುಗಳಾಚೆಯ ನಿರಾಳವೂ ಮೂಡಿತ್ತು. ಹಿಂದೆ ಕದ್ದು ನಿಂತಿದ್ದ ನನ್ನನ್ನು ಗಮನಿಸದೆ ಸರೋವರದಲ್ಲಿ ಹಣಿಕಿ ಹಾಕಿದರು. ಇವರ ಉಸಿರಿನ ಸ್ಪರ್ಶಕ್ಕೆ ರೇಗಿಕೊಂಡಂತೆ ಸರೋವರದ ನೀರು ನಡುಗಿ ತೆರೆ ಎಬ್ಬಿಸಿತು. ಬಿಂಬಿಸಿದ ಮೋಡಗಳನ್ನು ಮುರಿದು ಮುರಿದು ಮೂಡಿಸಿತು. ವಿಕಾರವಾದ ಚೂರಿಗಳಿಂದ ಎಂಬಂತೆ ಮೂಡಿದ್ದ ಆಳವಾದ ನೀಲಿ ಆಕಾಶವನ್ನು ಕತ್ತಿರಿಸಿ ಕತ್ತಿರಿಸಿ ತೋರಿಸಿತ್ತು. ಆದರೂ ನನ್ನ ಮಿತ್ರನಾದ ಮಹಾರಾಜ ಹಿಂದೆಗೆಯಲಿಲ್ಲ. ನೀರಿನ ಆಟ ಮುಗಿಯುವ ತನಕ ಸುಮ್ಮನಾಗಿ ಆಮೇಲೆ ಮತ್ತೆ ನೀರಿನಲ್ಲಿ ನೋಡಿಕೊಂಡರು. ಹೆಣದ ಹಾಗೆ ತೇಲುತ್ತಾ ಅವರ ಪ್ರತಿಬಿಂಬ ಬಂತು. ನೋಡಿದೊಡನೆ ಅವರ ಮುಖ ಕಳೆಕಳೆಯಾಯಿತು. ಆನಂದದ ಕಣ್ಣೀರು ಬಂದವು. ಉನ್ಮಾದದಲ್ಲಿ ಅವರ ಬಾಯಿಂದ ಮಾತುಗಳೇ ಬರಲಿಲ್ಲ. ಮೌನವಾಗಿ ಆ ಹೆಣದೊಂದಿಗೆ ಮಾತಾಡುತ್ತಿರುವಂತೆ ಸುಮ್ಮನೆ ಕೂತರು.

ತಾಯಿ : ಆಶ್ಚರ್ಯ! ಆಮೇಲೆ?

ಜವಳಿ : ಮೂಡಿದ ಪ್ರತಿಬಿಂಬವನ್ನು ತಮ್ಮ ಬೊಗಸೆಯಲ್ಲಿ ಹಿಡಿದು ನೋಡಿದರು. ಬೆರಳ ಸಂದಿಯಿಂದ ನೀರು ಸೋರಿತು. ಮತ್ತೆ ಹಿಡಿದರು. ಮತ್ತೆ ಸೋರಿತು. ಆಮೇಲೆ ಇಡೀ ಕಾಡು ರೋದಿಸುವ ಹಾಗೆ ಮೊಲ್ಲೆ ಮೊಲ್ಲೇ ಅಂತ ದನಿ ತೆಗೆದು ಆನಂದದಿಂದ ಅತ್ತರು.

ತಾಯಿ : ಮೊಲ್ಲೆ ಎಂದು ಹೇಳಿದನೆ?

ಜವಳಿ : ಹೌದು.

ತಾಯಿ : ಅತ್ತನೆ?

ಜವಳಿ : ಹೌದು ತಾಯಿ.

ತಾಯಿ : ವಿಷಯ ಕೇಳಿ ಕಳವಳವಾಗುತ್ತಿದೆ ಮಗನೆ. ಯಾವುದು ಆಗಬಾರದೆಂದು ಹದಿನಾರು ವರ್ಷಗಳಿಂದ ಎಚ್ಚರವಾಗಿದ್ದೆನೋ ಅದು ನನ್ನ ಕಣ್ಣ ಮರೆಯಲ್ಲಿ ನಡೆದೇ ಹೋಗಿದೆ. ಒಂದೇ ವ್ಯತ್ಯಾಸವೆಂದರೆ, ಪ್ರತಿಬಿಂಬ ನೋಡಿ ಸನ್ಯಾಸಿಯಾಗಬೇಕಿದ್ದವನು ದೀಪಕ ಮೊಲ್ಲೆಯನ್ನು ಸ್ಮರಿಸುತ್ತಿದ್ದಾನೆ.

ಹಿರಿಯ ೧ : ಇದು ಕಂಡು ಕೇಳರಿಯದ ವಿಚಿತ್ರವಾದ ಹುಚ್ಚು ಎನ್ನುವುದರಲ್ಲಿ ಸಂದೇಹವಿಲ್ಲ.

ಹಿರಿಯ ೨ : ನೀರಿನ ಪ್ರತಿಬಿಂಬವನ್ನು ಈ ಪರಿ ಪ್ರೀತಿಸಿದವರುಂಟೆ?

ತಾಯಿ : ಆ ಪ್ರತಿಬಿಂಬಕ್ಕಿಂತ ನನ್ನ ಸೋಸೆ ಸಾವಿರಪಟ್ಟು ಚೆಲುವೆಯಲ್ಲವೆ?

ಹಿರಿಯ ೩ : ಹುಚ್ಚಿನ ಮುಂದೆ ತರ್ಕ ನಿಲ್ಲುವುದಿಲ್ಲ ತಾಯಿ. ಮಹಾರಾಜರು ಏರು ಜವ್ವನಿಗರಾದ್ದರಿಂದ ಸ್ತ್ರೀ ವ್ಯಾಮೋಹ ಅಂಟುವುದು ತಡವಾಗಲಿಕ್ಕಿಲ್ಲ. ಕಾದು ನೋಡುವುದು ಒಳ್ಳೆಯದು ತಾಯಿ.

ಸೇವಕ : ಮಹಾರಾಜರು ಬರುತ್ತಿದ್ದಾರೆ ತಾಯಿ.

ತಾಯಿ : ಬರಲಿ. ಜವಳಿ, ನೀವಿಬ್ಬರೂ ಓರಗೆಯ ಸ್ನೇಹಿತರು. ಮನಸ್ಸು ಬಿಚ್ಚಿ ಮಾತನಾಡಬಹುದು. ಹುಚ್ಚಿಗೆ ಕಾರಣ ತಿಳಿಯುವುದಕ್ಕೆ ಪ್ರಯತ್ನಮಾಡು.

ಜವಳಿ : ಆಗಲಿ ತಾಯಿ.

*ಜವಳಿಯನ್ನು ಬಿಟ್ಟು ಎಲ್ಲರೂ ಹೋಗುವರು. ರಾಜನ ಪ್ರವೇಶ. ಜವಳಿಯನ್ನು ನೋಡಿ ಆಗಲೇ ಅವನ ಮನಸ್ಸು ಯೋಚನೆಗೀಡಾಗಿದೆ.*

ರಾಜ : ನನಗೆ ಹುಚ್ಚು ಹತ್ತಿದೆ ಅಂತಲ್ಲವಾ ನೀವೆಲ್ಲ ಯೋಚನೆ ಮಾಡೋದು? ಆದರೆ ಖಂಡಿತಾ ಹೇಳುತ್ತೇನೆ : ಇದು ಹುಚ್ಚಲ್ಲ. ನನ್ನ ಕಷ್ಟ ಏನೆಂದರೆ ನೀವೆಲ್ಲಾ ಮೋಸಗಾರರು ಅನ್ನೋದನ್ನು ಸಾಬೀತು ಮಾಡಲಿಕ್ಕೆ ಆಗುತ್ತಿಲ್ಲ.

ಜವಳಿ : ಮೋಸ? ಏನಪ್ಪ ಮೋಸ ಮಾಡಿದ್ವಿ?

ರಾಜ : ದೀಪದ ಮೊಲ್ಲೆ ಎಲ್ಲೂ ಇಲ್ಲ ಅಂತ ಅಲ್ವೆ ನೀವು ಹೇಳಿದ್ದು?

ಜವಳಿ : ಹೌದು ಸಿಗಲಿಲ್ಲವಲ್ಲ.

ರಾಜ : ಅಂದರೆ ನಾನು ಸುಳ್ಳು ಹೇಳಿದೆ ಅಂತಲ್ಲೋ ಇದರರ್ಥ.

ಜವಳಿ : ಸುಳ್ಳು ಅಂತಲ್ಲ. ತೋರಿಸಲಿಕ್ಕಾಗಲಿಲ್ಲವಲ್ಲ.

ರಾಜ : ಆದರೆ ಅವಳಿದ್ದಾಳೆ. ನಾನು ದಿನಾಲು ಅವಳನ್ನು ಕಂಡುಬರುತ್ತೇನೆ ಗೊತ್ತಾ?

ಜವಳಿ : ಹಾಗಾ? ವಿವರವಾಗಿ ಹೇಳು ಕೇಳೋಣ.

ರಾಜ : ಚೇಷ್ಟೆ ಮಾಡುವುದಿಲ್ಲ ತಾನೆ?

ಜವಳಿ : ಮಿತ್ರನ ಬಗ್ಗೆಯೂ ಈ ಬಗೆಯ ಸಂದೇಹವೇ?

ಭಾಗವತ : **ತೇಲಿ ಬಂದಳು ನೀರಿನಲ್ಲಿ**
**ಈಜಿ ಬಂದಳು ಚೆಲುವೆ ತೆರೆಗಳಲ್ಲಿ**
**ಗಾಳ ಹಾಕುತ ಇವಳ ಎಳೆದುಕೊಳ್ಳಲಿ ಬಳಿಗೆ**
**ಮೆಲ್ಲ ಮೆಲ್ಲಗೆ ನಡುಗುವೀಕೆಯ**
**ಲೀಲೆಯಲಿ ಪರಮಾರ್ಥ ಕಂಡೆನು ||**

ರಾಜ : ಹಾಗಿದ್ದರೆ ಕೇಳು : ನಾನಿವೊತ್ತು ಸರೋವರದ ಬಳಿಗೆ ಹೋಗಿದ್ದೆ. ಅದರಲ್ಲಿ ಅವಳಿದ್ದಳು. ತೆರೆತೆರೆಯಲ್ಲಿ ಚಿಳಿಮಿಳಿ ಮೀನಿನಂತೆ ಪುಟ್ಟ ಪುಟ್ಟದಾಗಿ ಕೈಯಾಡಿಸುತ್ತಾ ಈಜಾಡುತ್ತಿದ್ದಳು. ಗಾಳ ಹಾಕಿ ಹಿಡಿಯೋಣ ಅನಿಸಿತು. ಬೇಡ ಕೈಯಲ್ಲಿ ಹಿಡಿಯೋಣಾಂತ ಬೊಗಸೆ ಒಡ್ಡಿದೆ. ಬೊಗಸೆಯಲ್ಲಿದ್ದಾಗ ನನ್ನ ಉಸಿರು ತಾಗಿ ಪ್ರೀತಿಯಿಂದ ನಡುಗಿದಳು ಗೊತ್ತಾ? ಮೆಲ್ಲಗೆ ಬೆರಳಿಂದಗೋರಿ ಮತ್ತೆ ಕೆಳಗಿಳಿದಳು. ಹುಚ್ಚು ಹುಡುಗಿ ಅಂತ ನಾನವಳ ಕೆನ್ನೆ ಚಿವುಟಿದೆ. ಅವಳು ತೆರೆತೆರೆಯಲ್ಲಿ ಗೆರೆಗೆರೆಯಾಗಿ ಹ್ಯಾಗೆ ನಕ್ಕಳು ಅಂತೀಯಾ? ಅವಳನ್ನು ನೋಡಿ ನಾನೂ ನಕ್ಕೆ. ನಾನು ಮಾತಾಡಿದೆ. ಅವಳೂ ಅದೇ ಮಾತಾಡಿದಳು. ನಾನು ಮಾಡಿದ್ದನ್ನೆಲ್ಲಾ ಅವಳು ಮಾಡಿದಳು. ಅಥವಾ ಅವಳು ಮಾಡಿದ್ದನ್ನೆಲ್ಲಾ ನಾನು ಮಾಡಿದೆ. ಅಥವಾ ನಮ್ಮಿಬ್ಬರಲ್ಲಿ ಎಷ್ಟು ಸಾಮರಸ್ಯ ಇತ್ತು ಎಂದರೆ ನಾವಿಬ್ಬರೂ ಎರಡರ್ಧ ಸೇರಿ ಒಂದಾಗಿದ್ದೆವು. ಬರುಬರುತ್ತಾ ನಾವಿಬ್ಬರೂ ಸೇರಿ ಅಖಂಡವಾದ ಸೊನ್ನೆಯಾಗಿ

ನಿರಾಕಾರ ಶಿವಲಿಂಗವಾಗಿ ದೇವರಾಗಿದ್ದೆವು. ದೋಷ, ದುಗುಡಗಳ ನೆರಳು ಕೂಡ ಈ ಹೊಸ ದೇವರ ಸುತ್ತ ಸುಳಿಯುತ್ತಿರಲಿಲ್ಲ. ನಾವಿಬ್ಬರೂ ಸೇರಿದ ಈ ಹೊಸ ದೇವರು - ಆಹಾ ಗಾಳಿಯ ಹಾಗಿದ್ದ. ಬೆಳಕಿನ ಹಾಗಿದ್ದ. ಬಾನ ನೀಲಿಯ ಹಾಗಿದ್ದ. ಖಾಲಿ ಸ್ಥಳದಂತಿದ್ದ. ಅಥವಾ ದೈಹಿಕವಾದ ಯಾತರಿಂದಲೂ ಆತನನ್ನು ಮುಟ್ಟುವುದು ಸಾಧ್ಯವಿಲ್ಲವೆನಿಸಿತು. ಆ ದೇವರನ್ನು ಕಂಡ ಮೇಲೆ ಯಾವುದು ಸುಂದರ, ಯಾವುದು ಕುರೂಪ ಅಂತ ಗೊತ್ತಾಯಿತು. ಇದ್ದಕ್ಕಿದ್ದ ಹಾಗೆ ನಾವು ವಾಸಿಸುತ್ತಿರೋ ಈ ಪ್ರಪಂಚದಲ್ಲಿ ಎಲ್ಲಾ ಕಡೆ ಕೊರತೆ ಇದೆ ಅನ್ನಿಸಿತು. ಎಲಾ ದೇವರೆ! ಕೊರತೆ ಇರೋ ಈ ಲೋಕದಲ್ಲಿ ನಾವು ಹ್ಯಾಗೆ ಬದುಕಿದ್ದೇವೆ ಅಂತ ಆಶ್ಚರ್ಯವಾಯಿತು.

ಜವಳಿ : ಮಿತ್ರಾ ಆ ದೇವರಿಗೆ ಎಳೆಮೀಸೆ ಬಂದಿವೆಯೇ?

ರಾಜ : ಹೌದು.

ಜವಳಿ : ಒಳಗಡೆ ಕೆನ್ನೆಯ ಮೇಲೆ ಒಂದು ಕಪ್ಪು ಕಲೆ ಇದೆಯೇ?

ರಾಜ : ಹೌದು. ನಿನಗೆ ಹ್ಯಾಗೆ ಗೊತ್ತಾಯಿತು?

ಜವಳಿ : ಗೊತ್ತಾಗದೆ ಏನು? ನೀನು ನೋಡಿದ್ದು ನಿನ್ನ ಪ್ರತಿಬಿಂಬವನ್ನು.

ರಾಜ : ಛೇ! ನಿಮ್ಮಂಥ ಅಜ್ಞಾನಿಗಳ ಜೊತೆ ವಾದ ಮಾಡುತ್ತೇನಲ್ಲಾ, ನನ್ನ ದಡ್ಡ ತನಕ್ಕೆ ಧಿಕ್ಕಾರ. ಪ್ರತಿಬಿಂಬ ನೋಡೋದು ಅದರೊಂದಿಗೆ ಒಂದಾಗೋದು ಅಂದರೆ ಆತ್ಮಸ್ವರೂಪ ನೋಡಿಕೊಳ್ಳೋದು. ಅಂದರೆ ಇವೆಲ್ಲಾ ನಿಮಗೆ ಅರ್ಥವಾಗೋದಿಲ್ಲ. ನೀವೆಲ್ಲಾ ದೇಹಕ್ಕಂಟಿದವರು. ಅದರಾಚೆಯದನ್ನು ನೋಡುವುದಕ್ಕೆ ತಿರಸ್ಕರಿಸಿದವರು. ನಿಮಗೆ ಇದೆಲ್ಲಾ ತಿಳಿಯುವುದಿಲ್ಲ.

ಜವಳಿ : ನನ್ನ ಪ್ರಕಾರ ದೇಹ ಅಂದರೆ ಖಾಲಿ ಹೊಟ್ಟೆ; ಆತ್ಮ ಅಂದರೆ ತುಂಬಿದ ಹೊಟ್ಟೆ. ಏನಂತೀ?

ರಾಜ : ಚೇಷ್ಟೆ ಮಾಡುತ್ತೀಯೇನು?

*ರಾಜಕುಮಾರ ಜವಳಿ ಚೇಷ್ಟೆ ಮಾಡುತ್ತಿದ್ದಾನೆಂಬ ಅಸಮಾಧಾನದಿಂದ ಸ್ವಲ್ಪ ಹೊತ್ತು ಅವನನ್ನು ನೋಡಿ ತಿರಸ್ಕಾರದಿಂದ ಹೋಗುತ್ತಾನೆ. ಜವಳಿಯೂ ಬೆನ್ನು ಹತ್ತಿ ಹೋಗುತ್ತಾನೆ.*

## ದೃಶ್ಯ ೮

*ಕಾಳಿಂಗನ ಪ್ರವೇಶ*

ಭಾಗವತ : **ಎಲ್ಲಿ ಹೋದನು ಎಂದು ಕೇಳಬ್ಯಾಡಿರಿ ನಾಗ**
**ಮನದಾಳದಲ್ಲಿ ಮನೆ ಮಾಡಿರುವನೇ**
**ಎತ್ತ ಹೋದನು ಎಂದು ಹುಡುಕಬ್ಯಾಡಿರಿ ನಿಮ್ಮ**
**ಚಿತ್ತವೆಂಬೋ ಹುತ್ತದಲ್ಲಿರುವನೇ.**

ಭಾಗವತ : ಭಳೀರೇ ಸರ್ಪ ಕುಲೋದ್ಧಾರಕ.

ಕಾಳಿಂಗ : ಪಾತಾಳಲೋಕಕ್ಕೆ ಯಾರಂತ ಕೇಳಿದ್ದೀರಿ?

ಭಾಗವತ : ಕಾಳಿಂಗಸ್ವಾಮಿ ಎಂದು ಬಲ್ಲೆವು.

ಕಾಳಿಂಗ : ನಾವೇ ಸರಿ.

ಭಾಗವತ : ಥಟ್ಟನೆ ಬಂದಂಥ ಕಾರಣ?

ಕಾಳಿಂಗ : ಓಹೋಯ್, ಅಷ್ಟ ದಿಕ್ಕುಗಳನ್ನು, ಹದಿನಾಲ್ಕು ಲೋಕಗಳನ್ನು ಸಂಚರಿಸುತ್ತಾ ಮಹಾಪರಾಕ್ರಮ ಎನಿಸಿಕೊಂಡಿರುವ ನಾವು ದಿನನಿತ್ಯದಂತೆ ನಮ್ಮ ಕರ್ತವ್ಯಗಳನ್ನು ಮುಗಿಸಿ ಪಾತಾಳಲೋಕದ ನಮ್ಮ ಅರಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿರುವಲ್ಲಿಗೆ ಮ್ಯಾಲೆ ಭೂಲೋಕದಲ್ಲಿರುವಂಥಾ ಹೆಣ್ಣೊಂದು ನಮ್ಮನ್ನ ದನಿ ಮಾಡಿ ಕರೆದಂತಾಯಿತಲ್ಲಾ! ಇದೇನಪ್ಪ ಬ್ರಹ್ಮಚಾರಿಯ ಅರಮನೆಯಲ್ಲಿ ಹೆಣ್ಣಿನ ಧ್ವನಿ ಕೇಳಿಸಿತಲ್ಲ ಅಂತ ನೋಡಿದರೆ ಅವಳು ಕೊಳ್ಳೆ ಹೊಡೆಯಲೋ ಎಂಬಂತೆ ನಮ್ಮ ಲೋಕಕ್ಕೇ ಇಳಿದು ಬಂದು ಪ್ರತ್ಯಕ್ಷವಾದಳು. ನಾವು ನಮಗೇ ಗೊತ್ತಾಗದಂತೆ ಆಕೆಯ ಮುಂದೆ ಮೊಣಕಾಲೂರಿ ಕುಳಿತಿದ್ದೆವು. ಇದು ಕನಸೋ ನನಸೋ! ಹೀಗೂ ಒಮ್ಮೊಮ್ಮೆ ಆಗಬಹುದೆಂದರೆ ಹಾಗೂ ಅಲ್ಲ. ಅದೇ ಕನಸು ದಿನಾಲೂ ಕಾಣಿಸುತ್ತದೆ. ಯಾವಳೋ ಪರನಾರಿ; ನಮಗ್ಯಾಕೆ ಆ ಗೊಡವೆ ಅಂದರೆ ಹಾಗೂ ಅಲ್ಲ. ಆಕೆ ನಮ್ಮ ಹಕ್ಕಿನ ಮಡದಿಯಾಗಿ ಬಹು ದಿನಗಳ ಪರಿಚಯದವಳಾಗಿ ತೋರುತ್ತಾಳೆ. ಅವಳ ಕಂಡಾಗಿನಿಂದ ನಮ್ಮಲ್ಲಿ ಮದನ ಬಯಕೆಗಳು ಉದಯವಾಗುತ್ತಿವೆ. ಇರಲಿ, ಆಕೆ ಎಲ್ಲಿದ್ದಾಳೆಂದು ಶೋಧನೆ ಮಾಡುತ್ತಾ ಹೋಗುತ್ತೇನೆ.

*ಸಿರಿಸಂಪಿಗೆ ಕಾಣಿಸಿಕೊಳ್ಳುತ್ತಾಳೆ.*

ಭಾಗವತ : **ಓಹೋ ಇವಳೇನೆ ಈ ಚೆಲುವೆ ಸುಂದರಿ**
**ಕನಸಿನಲಿ ಪ್ರತ್ಯಕ್ಷವಾದವಳು ಇವಳೇನೆ**
**ಇವಳ ಸೇರದ ನನ್ನ ಬಾಳು ವ್ಯರ್ಥವೆ**
**ನನ್ನ ಪ್ರಾಣ ಹೋದರೂ ಸರಿಯೆ ಬಿಡಲಾರೆ.**

ಕಾಳಿಂಗ : ಓಹೋಯ್. ನನ್ನ ಮನಸ್ಸು ಸೆಳೆದ ಹುಡುಗಿ ಎಲ್ಲಿರಬಹುದೆಂದು ಹುಡುಕುತ್ತಾ ಹುಡುಕುತ್ತಾ ಭೂ ಪ್ರದೇಶಗಳನ್ನೆಲ್ಲಾ ನಾನು ಸುತ್ತುತ್ತಿದ್ದರೆ ಅವಳು ಇಲ್ಲಿಯೇ ಶಿವಾಪುರದ ಇಂದ್ರನಿವಾಸದ ಹಿತ್ತಿಲಲ್ಲೇ ಇದ್ದಾಳೆ. ಅದೋ, ಅಲ್ಲಿ ಕಾಣಿಸುತ್ತಿದ್ದಾಳಲ್ಲಾ ಅವಳಲ್ಲವೇ ನನ್ನ ಮನಸ್ಸನ್ನು ಕದ್ದವಳು? ಅಷ್ಟು ದೂರದಿಂದಲೂ ಹರಗಿದ ಹೊಲದಂತೆ ನಾರುತ್ತಿರುವ ಅವಳ ಮೈ ವಾಸನೆಯಿಂದ ಪುಳಕಿತನಾಗಿದ್ದೇನೆ. ಆಹಾ ಕೊಂಚದವಳಲ್ಲ ಇವಳು. ಸೀಮೆಯಲ್ಲೇ ಸುಂದರಿ! ಇರಲಿ. ಅವಳ ಸಮೀಪ ಹೋಗಿ ಕಾಣಿಸಿಕೊಳ್ಳುತ್ತೇನೆ.

ಭಾಗವತ : **ಏರಿ ಬರುವವನಾರು ಮೈಮ್ಯಾ**
**ಲೇರಿ ಬರುವವನಾರು ಈತನ**
**ಗುರುತು ಇಲ್ಲದೆ ದಾಖಲಾದನು ನಮ್ಮ ಮನದೊಳಗೆ ||**
**ಹೋದ ಹೋದೆಡೆ ಉದಯವಾಗುತ**
**ನಿಂತ ಈತನ ರೂಪ ನೋಡುವ**
**ಮದನ ತಾಪಗಳುದಿಸಿ ನಮ್ಮನು ಘಾಸಿ ಮಾಡುತಿವೆ ||**

ಸಂಪಿಗೆ : ಯಾರು ಈತ? ಪಂಚಭೂತಗಳೇ ಕೂಡಿ ಒಂದಾಗಿ ಆಕಾರಗೊಂಡಂತೆ ಹುತ್ತದ ಕಡೆಯಿಂದ ನಡೆದು ಬಂದನಲ್ಲಾ. ಸುಮಾರು ಸಮಯದಿಂದ ನನ್ನ ಬೆನ್ನಟ್ಟಿ ಬರುತ್ತಿದ್ದಾನೆ. ಹೋದ ಹೋದಲ್ಲೆಲ್ಲಾ ನನ್ನನ್ನೇ ಹಸಿದ ಕಣ್ಣುಗಳಿಂದ ನೋಡುತ್ತಿದ್ದಾನೆ. ಇವನು ಕಾಲಿಟ್ಟಲ್ಲೆಲ್ಲಾ ಚಕಮಕಿಬೆಂಕಿ ಹರಿದಾಡುವಂತೆ ಕಾಣುತ್ತಿದೆಯಲ್ಲ! ನನಗೆ ಗೊತ್ತಿಲ್ಲದ ಹಾಗೆ ನನ್ನ ಮನಸ್ಸಿನಲ್ಲಿ ದಾಖಲಾಗಿರುವ ಇವನ ರೂಪ ನೋಡುತ್ತಿದ್ದಂತೆ ನಮ್ಮ ತಾಪಗಳು ಮ್ಯಾಲೇರಿ ಬರುತ್ತಿವೆ. ಈತನಕ ನಮಗೆ ಗೊತ್ತಿಲ್ಲದ ಕೊರತೆಗಳು ಈಗ ಬಾಯಿ ತೆರೆದು ನಿಂತಿವೆ. ಯಾರೀತ?

ಭಾಗವತ : **ಭಾಗ್ಯ ಸಿಕ್ಕವರಂತೆ ಹಿಗ್ಗಿದನು ಕಾಳಿಂಗ**
**ಉಬ್ಬಿದನು ಕರಣಗಳ ಕೊಬ್ಬಿನಲ್ಲಿ**
**ಯಾರಿವಳು ಕನ್ನೆಯೋ ಮಡದಿಯೋ ಈಕೆಯನು**
**ಸೇರಿ ಸುಖಗಳ ಸೂರೆಗೊಳ್ಳಬೇಕೆಂದ.**

ಕಾಳಿಂಗ : ಆಹಾ, ನನ್ನ ಆಸಕ್ತ ಇಂದ್ರಿಯಗಳಿಗೆ ಹಬ್ಬವಾಗಿರುವ ಇವಳ ದೇಹ ಕೈಮಾಡಿ ಕರೆಯುವಂತಿದೆಯಲ್ಲಾ! ಘನ ನಿತಂಬ ಘನಘನ ಸ್ತನ! ಸಣ್ಣ ನಡು, ಸುಖ ಮಾಡು! ಬೇಟೆಯಲ್ಲಿ ತರಬೇತಿಗೊಂಡ ನೋಟಗಳು. ಕನ್ಯೆಯಾಗಿರಲಿ, ಮಡದಿಯಾಗಿರಲಿ, ಇವಳಿಗಾಗಿ ನನ್ನ ಹರಣ ಹಾರಿದರೂ ಸರಿ. ಇವಳನ್ನು ಸೇರದ ನನ್ನ ಜೀವನ ವ್ಯರ್ಥ.

ಭಾಗವತ : **ಕ್ಷುದ್ರ ಆಸೆಗೆ ಮನವ ತೆರಬಾರದೀತನಿಗೆ**
**ಬುದ್ಧಿಹೇಳುವುದು ಬಲು ಉಚಿತವೆಂದು**
**ಓಡಿ ಬಂದವನನ್ನು ತಡೆದಾಗ ನೋಡಿದರೆ**
**ಗಾಡಿಕಾರನ ಮೋಡಿಗೊಳಗಾದಳು.**

ಸಂಪಿಗೆ : ಬಿರುಗಾಳಿಗೆ ಸಿಕ್ಕು ತಲೆಕೆಳಗಾದ ದೋಣಿಯ ಹಾಗಾಗಿದ್ದೇನೆ. ಹದಿಹರೆಯದ ನನ್ನ ಎದೆಯ ಕದಗಳನ್ನು ಯಾರೋ ತೆಗೆದು ಮಲಗಿರುವ ಆಸೆಗಳನ್ನೆಲ್ಲ ತಿವಿದು ಎಬ್ಬಿರುವಂತಿದೆಯಲ್ಲ. ಛೇ, ಇಂಥಾ ಕ್ಷುದ್ರ ಆಸೆಗಳಿಗೆ ನನ್ನ ವಿವೇಕವನ್ನು ಬಲಿಕೊಡಬಾರದು. ಪರನಾರಿಯನ್ನು ಬಯಸಿ ಬರುತ್ತಿರುವ ಅವನನ್ನು ಮಾತಾಡಿಸಿ ಛೀಮಾರಿ ಹಾಕಿ ಕಳಿಸುತ್ತೇನೆ.

*ಅವಳು ಮುಂದಾಗಿ ಅಡಗಿದಾಗ ಕಾಳಿಂಗನೂ ಅಲ್ಲಿಗೆ ಓಡಿ ಬರುತ್ತಾನೆ. ಸಂಪಿಗೆ ಬಾಗಿಲು ಹಾಕಿ, ನಿಲ್ಲುತ್ತಾಳೆ.*

ಸಂಪಿಗೆ : ಯಾರಿಲ್ಲದ ಸಮಯ ಸಾಧಿಸಿ ಹೋದ ಹೋದಲ್ಲಿ ನನ್ನ ಬೆನ್ನಟ್ಟಿ ಬರುವಾತ ಯಾರು ನೀನು? ನಾಡಿನ ಮಹಾರಾಣಿಯನ್ನು ಕೆಣಕುವ ಧೈರ್ಯ ಮಾಡುವವನು ನೀನ್ಯಾವನೋ ದೊಡ್ಡ ಪುಂಡನೇ ಇರಬೇಕು.

ಕಾಳಿಂಗ : ಆಹಾ ನಿನ್ನ ಸೊಲ್ಲು ಬೆಲ್ಲದಂತಿದೆ ಚೆಲುವೆ. ನಿನ್ನ ಕೋಪದ ನುಡಿಗಳು ಕೂಡ ಆನಂದ ವಾಕ್ಯಗಳಾಗಿ ಕೇಳಿಸುತ್ತಿವೆ. ನಿನ್ನ ಬಾಯಿಂದ ಬಂದ ಮಾತುಗಳನ್ನು ಅವು ಹುಟ್ಟುತ್ತಿರೋ ಸ್ಥಳದಲ್ಲೇ ಹಿಡಿದು ಮುದ್ದಿಸೋಣ ಅನ್ನಿಸುತ್ತಿದೆ.

ಸಂಪಿಗೆ : ಕೇಳಿದ ಪ್ರಶ್ನೆಗೆ ಉತ್ತರ ಕೊಡು. ಭಂಡಾಟ ಮಾಡಿದರೆ ಅರಸನಿಗೆ ಹೇಳಿ ಕೋಳ ಹಾಕಿಸಿ ಬೀದಿಯಲ್ಲಿ ಎಳೆದೊಯ್ಯುವ ಹಾಗೆ ಮಾಡೇನು.

ಕಾಳಿಂಗ : ನಿನ್ನ ಉದ್ದವಾದ ಕೂದಲಿನಿಂದ ನನ್ನ ಹೃದಯ ಮನಸ್ಸುಗಳನ್ನು ಆಗಲೇ ಕಟ್ಟಿ ಹಾಕಿರುವೆ ಹೆಣ್ಣೆ. ಇನ್ನು ನಿನ್ನ ನಳಿದೋಳುಗಳಿಂದ ಈ ದೇಹಕ್ಕೆ ಕೋಳ ಹಾಕುವುದೊಂದೇ ಬಾಕಿ. ಅದಕ್ಕಾಗಿ ಸಿದ್ಧನಾಗೇ ಇದ್ದೇನೆ.

ಸಂಪಿಗೆ : ಯೌವನದ ಪಿತ್ಥ ನೆತ್ತಿಗೇರಿದ ನಿನಗೆ ನಾಗರಿಕ ಮಾತುಗಳು ತಿಳಿಯುವಂತೆ ಕಾಣುವುದಿಲ್ಲ. ತಾಳು, ತಾಯೇ…. *(ಎಂದು ಕರೆಯುವಳು)*

ಕಾಳಿಂಗ : ಒಳ್ಳೇ ಅಭಿನೇತ್ರಿ ನೀನು. ನಾನು ಬಂದೊಡನೆ ಬಾಗಿಲಿಕ್ಕಿದವಳು ಈಗ ರಕ್ಷಣೆಗೆ ಯಾರನ್ನೋ ಕೂಗಿದಂತೆ ಅಭಿನಯಿಸುತ್ತೀಯೆ. ನಿನ್ನ ಜಾತಿಯ ಹೆಣ್ಣಿಗೆ ಬಲಾತ್ಕಾರ ಬಲು ಇಷ್ಟವೆಂದು ಬಲ್ಲೆ. ಇಕೋ-

ತಾಯಿ : *(ಹೊರಗಿನಿಂದ)* ಸಿರಿಸಂಪಿಗೆ….

ಸಂಪಿಗೆ : ರಾಜಮಾತೆ  ಬಂದಳು. ಜೀವದಾಸೆ ಇದ್ದರೆ ಅಡಗಿಕೋ.

ಕಾಳಿಂಗ : ಧಿಮಾಕಿನ ಮಾತಾಡಬೇಡವೆ. ನನ್ನ ರಕ್ಷಣೆ ನಾನು ಮಾಡಿಕೊಳ್ಳಬಲ್ಲೆ. ಧೈರ್ಯ ಇದ್ದರೆ ಬಾಗಿಲು ತೆರೆ.

ಸಂಪಿಗೆ : ನನ್ನ ಶೀಲ ನನ್ನ ಕೈಯಲ್ಲಿರುವಾಗ ಯಾರ ಹೆದರಿಕೆ ಏನು? ಇಕೋ ಬಾಗಿಲು ತೆಗೆಯುತ್ತೇನೆ. ರಕ್ಷಿಸಿಕೋ.

ಬಾಗಿಲು ತೆರೆಯುವಳು. ತಾಯಿ ಬರವಳು. ಕಾಳಿಂಗ ತಕ್ಷಣ ರೂಪು ಬದಲಿಸಿ ರಾಜನಾಗುವನು.

ತಾಯಿ : ಆಶ್ಚರ್ಯ, ಗಂಡ-ಹೆಂಡತಿ ಕೂಡಿ ನಲಿದಾಡುವುದನ್ನು ನೋಡುವುದಕ್ಕಾಗಿ ಹಗಲಿರುಳು ತಪಸ್ಸು ಮಾಡುತ್ತಿದ್ದ ನನ್ನ ಕಣ್ಣಿಗೆ ಏನು ಕಾಣುತ್ತಿದೆ ಮಗನೆ! ಆನಂದಗಳು ಬತ್ತಿ ಹೋದ ನನ್ನ ಕಣ್ಣುಗಳಿಗೆ ಹೊಸ ಆನಂದದ ಮಳೆಯನ್ನೇ ಸುರಿಸಿಬಿಟ್ಟೆ. ಇರು, ಇರು, ಈಗಲೇ ಕುಲದೈವಕ್ಕೆ ಎಂಟು ಕಾಲಿನ ಪ್ರಾಣಿಯ ಬಲಿ ಕೊಡುತ್ತೇನೆ. ಮಗನೇ, ಸಿರಿಸಂಪಿಗೆ ತುಂಬಾ ಕೋಮಲೆ. ನಿನ್ನ ಒರಟು ತನದಿಂದ ಅವಳು ಇನ್ನೊಮ್ಮೆ ಕಿರುಚುವ ಹಾಗೆ ಮಾಡಬೇಡ ತಿಳಿಯಿತೆ?

ಕಾಳಿಂಗ : *(ಸಂಪಿಗೆಯ ಭುಜದ ಮೇಲೆ ಕೈಯಿಡುತ್ತಾನೆ. ಅವಳು ದೂರ ಸರಿಯುತ್ತಾಳೆ)* ಪಳಗಿಸುತ್ತೇನೆ ಚಿಂತೆ ಬಿಡು ತಾಯೆ. ಸಂಪಿಗೆ ನಿನ್ನ ಕೂಗಿದ್ದು ಚೇಷ್ಟೆಗಾಗಿ ಅಷ್ಟೆ. ಅಲ್ಲವೇ ದೇವಿ?

ಸಂಪಿಗೆ : ಹೌದು. ಅಲ್ಲಲ್ಲ. ನಿಜವಾಗಿ ಕೂಗಿದ್ದು. *(ಸ್ವಗತ)* ಸ್ಪರ್ಶ ಮಾತ್ರದಿಂದಲೇ ಇಷ್ಟೊಂದು ಹರ್ಷ ಉಕ್ಕಿಸುವನಲ್ಲ. ನನ್ನನ್ನು ಲೂಟಿ ಮಾಡಬಂದ ಮಾಟಗಾರ ಯಾರು ಈತ?

ತಾಯಿ : ಕುಮಾರ, ನಿನ್ನ ಒರಟುತನ ಸಾಕುಮಾಡು. ಸಿರಿಸಂಪಿಗೆ ಆಗಲೇ ಹೂಬಿಡುವ ಬಳ್ಳಿಯ ಹಾಗೆ ನಡುಗುತ್ತಿದ್ದಾಳೆ.

ಕಾಳಿಂಗ : ಎಂಟು ಕಾಲಿನ ಪ್ರಾಣಿ ಯಾವುದು ತಾಯಿ?

ತಾಯಿ : ಬಸುರಿಯಾದ ಪ್ರಾಣಿ ಎಂದರ್ಥ. ಬಲಿ ಯಾಕೆಂದರೆ ನಮ್ಮ ಸಿರಿಸಂಪಿಗೆ ಬೇಗ ಮೊಮ್ಮಗನ ಕೊಡಲಿ ಎಂದು. ಅವಳ ಬಟ್ಟಲುಗಣ್ಣಲ್ಲಿ ಆಗಲೇ ನಾಳೆಯ ಕನಸು ಹೊಂಬಣ್ಣ ಚೆಲ್ಲಿ ಹೊಳೆಯುತ್ತಿದೆ. ಹೀಗೇ ನಿಂತರೆ ಸೊಸೆ ಮುದ್ದಿಗೆ ನನ್ನ ಹಾಳು ದೃಷ್ಟಿ ತಾಗೀತು. ಬಾಗಿಲಿಕ್ಕಿಕೊಳ್ಳಿ. *(ಹೋಗುವಳು)*

ಸಂಪಿಗೆ : ನನಗೆ ಹುಚ್ಚು ಹತ್ತುವ ಮುನ್ನ ದಯಮಾಡಿ ನೀನು ಯಾರೆಂದಾದರೂ ಹೇಳು. ಆಗ ಭುಸುಗುಡುವ ಹಾವಿನಂತಿದ್ದೆ. ಈಗ ರಾಜನಂತಾಗಿರುವೆ. ನಿನಗೆ ಅಸ್ತಿತ್ವಗಳೆಷ್ಟು?

ಕಾಳಿಂಗ : ನಿನಗೆಷ್ಟು ಬೇಕೋ ಅಷ್ಟು. ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡು ಹೆಣ್ಣೆ. ನಾನು ನಿನ್ನ ರಾಜನಂತಿದ್ದೇನೆಯೇ?

ಸಂಪಿಗೆ : ನಿಜ, ನೋಡೋದಕ್ಕೆ ರಾಜ ಸ್ವಲ್ಪ ಹೆಣ್ಣಿಗ.

ಕಾಳಿಂಗ : ಸ್ವಲ್ಪ ಏಕೆ, ಹೆಚ್ಚಿಗೇನೆ.

ಸಂಪಿಗೆ : ಹೌದು. ತನ್ನೊಳಗಿನ ಹೆಣ್ಣನ್ನು ಹುಡುಕುವುದಕ್ಕಾಗಿಯೇ ಅಲ್ಲವೇ, ಆತ ತನ್ನನ್ನು ತಾನು ಸೀಳಿಕೊಂಡದ್ದು?

ಕಾಳಿಂಗ : ಹಾಗಿದ್ದರೆ ಈಗ ಹೇಳು. ನಾನು ನಿನಗೆ ಅಪರಿಚಿತನೇ? ನೀನು ಪಲ್ಲಂಗದ ಮೇಲೆ ಹಸಿ ಕೊರಡಿನಂತೆ ಬಿದ್ದ ಗಂಡನೊಂದಿಗೆ ಇದ್ದಾಗ ಕೆಳಗೆ ಚಿತ್ತದ ಪಾತಾಳದಲ್ಲಿ ನಿನ್ನ ಮುಂದೊಬ್ಬ ರಾಜ ಮೊಳಕಾಲೂರಿ ಪ್ರೇಮ ಭಿಕ್ಷೆ ಬೇಡುತ್ತಿದ್ದನಲ್ಲವೇ?

ಸಂಪಿಗೆ : ಹೌದು.

ಕಾಳಿಂಗ : ಅವನೇ ನಾನು. ನಿನ್ನ ರಾಜನ ಅರಮನೆಯ ಆಳದಲ್ಲಿರುವ ಪಾತಾಳ ಲೋಕದ ಸಾರ್ವಭೌಮ ಕಾಳಿಂಗ ರಾಜ. ಗುರ್ತು ಸಿಕ್ಕಿತೇ?

ಸಂಪಿಗೆ : ಹೌದು. ಇಲ್ಲಿಲ್ಲ. ನೀನು ಯಾರೆಂದು ಗೊತ್ತಿಲ್ಲ.

ಕಾಳಿಂಗ : ಆದರೆ ನೀನು ನನಗೆ ಗೊತ್ತು. ನಿನಗೆ ಬಿದ್ದ ಕನಸುಗಳನ್ನ ಕೂಡ ಹೇಳಬಲ್ಲೆ ನಾನು. ಇಂದಿನಿಂದ ನಿನಗೆ ಬೀಳಬೇಕಾದ ಕನಸುಗಳನ್ನು ಹೇಳಿಕೊಡೋನೂ ನಾನೇ. ಎಲ್ಲಿ ಈಗ ಕನಸು ಕಾಣು ನೋಡೋಣ. ಕಾಡಿದೆ, ಕಾಡಿನಲ್ಲಿ ಹೂವಿದೆ, ಚಿಗುರಿದೆ, ಹಣ್ಣು ಬಿಡುವ ಮರಗಳಿವೆ….

ಸಂಪಿಗೆ : ಹೌದು ಕಾಡಿದೆ. ಕಾಡಿನಲ್ಲಿ ಹೂವಿದೆ, ಚಿಗುರಿದೆ, ಹಣ್ಣು ಬಿಡುವ ಮರಗಳಿವೆ….

ಕಾಳಿಂಗ : ಹೊಂಬಿಸಿಲಲ್ಲಿ ಚಿನ್ನದ ದನದಿ ಹರಿಯುತ್ತಿದೆ….

ಸಂಪಿಗೆ : ನದಿ ಹರಿಯುತ್ತಿದೆ.

ಕಾಳಿಂಗ : ನೀರಿಗಂತ ನೀನು ಬಂದಿದ್ದೀಯಾ.

ಸಂಪಿಗೆ : ಹೌದು ನೀರಿಗಂತ ನಾನು ಬಂದಿದ್ದೇನೆ. ಇಲ್ಲಿ ನೆಲದಲ್ಲೊಂದು ಬಿಲದಂಥ ಬಾಗಿಲಿದೆಯಲ್ಲ!
ಕಾಳಿಂಗ : ಒಳಕ್ಕಿಳಿ.

ಸಂಪಿಗೆ : ಆಹಾ ಈ ಲೋಕ ಎಷ್ಟು ಚೆಂದಾಗಿದೆ. ಪಾತಾಳದಲ್ಲಿ ಎಷ್ಟೊಂದು ಹೊನ್ನಿನ ಕೊಪ್ಪರಿಗೆಗಳು! ಮೂಲೆ ಮೂಲೆಯ ಮುಚ್ಚುಮರೆಯಲ್ಲಿ ಹೆಸರಿಲ್ಲದ ಸುಖಗಳೆಷ್ಟೋ ಮಲಗಿವೆ. ಅಯ್ಯೋ, ಏಳು ಹೆಡೆಯ ಸರ್ಪ ಗುಟ್ಟಿಗೇ ಗುರಿ ಹಿಡಿದು ಹೆಡೆ ಎತ್ತ ದೀಪದ ಕಂಬದ ಹಾಗೆ ನಿಂತಿದೆಯಲ್ಲ, ಏನು ಮಾಡಲಿ?

ಕಾಳಿಂಗ : *(ನಿಜರೂಪದಲ್ಲಿ ಬಂದು)* ಹೆದರಬೇಡ ಹೆಣ್ಣೆ ನಾನಿದ್ದೇನೆ.
*ತಬ್ಬಿಕೊಳ್ಳುವನು.*

# ದೃಶ್ಯ ೬

*ಜವಳಿ ಮತ್ತು ಭಾಗವತ*

ಜವಳಿ : ಓಹೋಯ್ ಭಾಗವತರೇ-

ಭಾಗವತ : ಏನಯ್ಯಾ?

ಜವಳಿ : ಒಂದು ಕಣ್ಣು ಮುಚ್ಚಿ ನನ್ನ ಕಡೆ ನೋಡಿ.

ಭಾಗವತ : ನೋಡಿದೆ.

ಜವಳಿ : ಎಷ್ಟು ಜನ ಇದ್ದೀವಿ?

ಭಾಗವತ : ಒಬ್ಬನೇ.

ಜವಳಿ : ಸರಿ. ಈಗ ಎರಡೂ ಕಣ್ಣು ತೆರೆದು ನೋಡಿ. ಎಷ್ಟು ಜನ ಇದ್ದೀವಿ ಹೇಳಿ.

ಭಾಗವತ : ಒಬ್ಬನೇ.

ಜವಳಿ : ಏನು ಭಾಗವತರೇ. ನೀವೂ ಚೇಷ್ಟೆ ಮಾಡುತ್ತೀರಲ್ಲಾ. ಒಂದು ಕಣ್ಣಿಗೆ ಒಬ್ಬ ಕಂಡರೆ ಎರಡೂ ಕಣ್ಣಿಗೆ ಇಬ್ಬರು ಕಾಣಿಸಬೇಕಲ್ಲವೊ?

ಭಾಗವತ : ಹೌದಾ? ಹಾಗಾದರೆ ನಿನ್ನ ಕಣ್ಣಿಗೆ ನಾನೆಷ್ಟು ಜನವಾಗಿ ಕಾಣಿಸುತ್ತೇನೆ?

ಜವಳಿ : ಇಬ್ಬರು.

ಭಾಗವತ : ಹ್ಯಾಗೆ?

ಜವಳಿ : ನೀವು ಮತ್ತು ನಾನು. ನೀವು ಮತ್ತು ನಿಮ್ಮ ನೆರಳು. ನಾನು ಮತ್ತು ಅವಳಿ. ಅದಕ್ಕೇ ನನಗೆ ಒಮ್ಮೊಮ್ಮೆ ನಾಲ್ಕು ಕಾಲಿದ್ದ ಹಾಗೆ ಅನ್ನಿಸುತ್ತದೆ ಭಾಗವತರೇ, ನಿಮಗೆ?

ಭಾಗವತ : ನೀನು ಭಾಗ್ಯವಂತನಪ್ಪ. ನಾನು ದುರ್ದೈವಿ. ನನಗೆರಡೇ ಕಾಲು.

ಜವಳಿ : ನೀವೂ ಭಾಗ್ಯವಂತರೇ ಭಾಗವತರೇ. ಯಾಕಂತೀರೋ-ನಿಮ್ಮೆದುರಿಗೆ ಎರಡೂ ದಾರಿ ಇವೆ ಅಂತಿಟ್ಟುಕೊಳ್ಳಿ ಒಂದೊಂದು ದಾರೀಲಿ ಒಂದೊಂದು ಕಾಲಿಟ್ಟು ಕೊಂಡು ಎರಡೂ ದಾರಿ ನಡೀಬಹುದೋ!

ಭಾಗವತ : ಭಲೆ ಭಲೆ ನನಗಿದು ಗೊತ್ತೇ ಇರಲಿಲ್ಲವೆ! ಹಾಗಾದರೆ ನೀನು ನಾಲ್ಕು ದಾರಿಯಲ್ಲಿ ಏಕಕಾಲದಲ್ಲಿ ನಡೆಯುತ್ತಿರುವೆಯೇನಯ್ಯಾ?

ಜವಳಿ : ನಾನು? ಇಲ್ಲ ಭಾಗವತೇ. ಆದರೆ ಏಕಕಾಲಕ್ಕೆ ಒಬ್ಬನೇ ವ್ಯಕ್ತಿ ಎರಡು ದಾರಿಗಳಲ್ಲಿ ನಡೆದದ್ದನ್ನು ಕಣ್ಣಾರೆ ನೋಡಿದ್ದೇನೆ ಭಾಗವತರೇ.

ಭಾಗವತ : ಹೌದಾ? ಯಾರಪ್ಪಾ ಆ ಪುಣ್ಯಾತ್ಮ?

ಜವಳಿ : ನಮ್ಮ ರಾಜ. ಮಹಾರಾಣಿಯ ಜೊತೆಗೆ ಅಂತಃಪುರದಲ್ಲೂ ಇರುತ್ತಾನೆ. ಮೊದಲಿನ ಹಾಗೆ ನೀರಿನಲ್ಲಿ ಪ್ರತಿಬಿಂಬದ ದೇವರನ್ನು ನೋಡಿಕೊಳ್ಳುತ್ತಾ ಕೆರೆಯ ಬಳಿಯೂ ಇರುತ್ತಾನೆ.

ಭಾಗವತ : ಒಳ್ಳೇದಾಯ್ತಲ್ಲ.

ಜವಳಿ : ನನ್ನ ಗತಿ ಹೇಳಿ ಭಾಗವತರೇ. ಒಂದೊಂದು ಸಲ ಗುರುತು ಹಿಡಿಯುತ್ತಾನೆ. ಇನ್ನೊಮ್ಮೆ ಅಪರಿಚಿತರ ಹಾಗೆ ಮುಖ ತಿರುಗಿಸುತ್ತಾನೆ. ಅಂತಃಪುರದಲ್ಲಿ ಸಿಕ್ಕರೆ ತಬ್ಬಿಬ್ಬಾಗಿ ಯಾರು ನೀನು ಅಂತಾನೆ. ಕೆರೆ ಹತ್ತಿರ ಹೋದರೆ ಮಿತ್ರಾ ಅಂತ ತಬ್ಬಕೊಳ್ತಾನೆ. ಅರಮನೆಯಲ್ಲಿ ಗುರುತೆ ಹಿಡಿಯಲಿಲ್ಲವಲ್ಲ ಮಿತ್ರಾ ಎಂದರೆ ಅರಮನೆಗೆ ನಾನು ಹೋಗಲೇ ಇಲ್ಲ ಅನ್ನುತ್ತಾನೆ! ಒಂದು ಕೈ ಮಾಡಿದ್ದು ಇನ್ನೊಂದು ಕೈಗೆ ಗೊತ್ತಾಗಲಿಕ್ಕಿಲ್ಲ ಅನ್ನೋಣ. ಒಂದು ಕಾಲು ನಡೆದ ದಾರಿ ಇನ್ನೊಂದು ಕಾಲಿಗೆ ಗೊತ್ತಾಗೋದಿಲ್ಲ ಅಂದರೆ ಆಶ್ಚರ್ಯ ವಲ್ಲವೇ?

ಭಾಗವತ : ಆಶ್ಚರ್ಯವೇ!

ಜವಳಿ : ಮಹಾರಾಣಿಯವರಾಗಲೇ ಫಲವತಿಯಾಗಲಿದ್ದು, ಇನ್ನೇನು ಯುವರಾಜನ ತಂದೆಯಾಗಲಿದ್ದೀಯಪ್ಪ, ನಿನ್ನ ಬಡಮಿತ್ರನಿಗೊಂದು ರುಚಿಕರವಾದ ಬೇಟೆಯೂಟ ಹಾಕಯ್ಯ ಅಂದರೆ ಕಣ್ಣು ಕಿಸಿದು ಹರಿದು ತಿನ್ನುವವರ ಹಾಗೆ ನನ್ನ ಕಡೆ ನೋಡಿದನೆ!

ಭಾಗವತ : ಎಂಥ ಸಂತೋಷದ ಸುದ್ದಿ ಹೇಳಿದೆಯಪ್ಪ! ಮಹಾರಾಣಿಯವರು ಗರ್ಭವತಿಯಾಗಿದ್ದಾರೋ? ಕೊನೇ ಪಕ್ಷ ಭಾಗವತರು ಅಂತ ನನಗಾದರೂ ಸಿಹಿ ಹಂಚಬಹುದಿತ್ತಲ್ಲ?

ಜವಳಿ : ತಂದಿದ್ದೀನಲ್ಲ ಸ್ವಾಮಿ, ತಗೊಳ್ಳಿ. ಹಾಗೇ ಹೋಗುಬರೋರಿಗೆಲ್ಲಾ ಹಂಚುತ್ತಿರಿ ಅಂತ ರಾಜಮಾತೆ ಹೇಳಿದ್ದಾರೆ. ನಾನು ಪೂಜಾ ಸಾಮಗ್ರಿ ತಗೊಂಡು ಬರುತ್ತೇನೆ.

ಭಾಗವತ : ಪೂಜಾ ಸಾಮಗ್ರಿ ಯಾಕಪ್ಪ?

ಜವಳಿ : ಅಗೋ ನನ್ನ ಹೃದಯಕಮಲವೇ ಅರಳಿ ಈ ಕಡೆ ಬರುತ್ತಿದೆ. ಅವಳನ್ನೇ ಕೇಳಿ.

*ಜವಳಿ ಹೋಗುತ್ತಾನೆ. ಕಮಲ ಬರುತ್ತಾಳೆ. ಹಿಂದಿನಿಂದ ಬಂದ ಅವಳಿ ಯಾರಿಗೂ ಗೊತ್ತಾಗದಂತೆ ನಿಲ್ಲುತ್ತಾನೆ.*

ಕಮಲ : ಅಯ್ಯೋ ಭಾಗವತರೇ, ಮದುವೆಯಾಗಿ ಸುಮಾರು ದಿನಗಳಾದರೂ ಪತಿದೇವರಲ್ಲಿ ನನ್ನ ಬಗ್ಗೆ ಪ್ರತಿಯುಂಟಾಗಲಿಲ್ಲ. ಪ್ರೀತಿಯಿಲ್ಲದೆ ಮಕ್ಕಳ ಫಲಪುತ್ರ ಸಂತಾನ ಉಂಟೆ? ಮನೆಯ ಕಂಬಗಳಲ್ಲಿ ಒಂದೊಂದು ಕಂಬಕ್ಕೆ ಒಂದೊಂದು ವಾರ ಒರಗಿ ನಿಂತು ಕಾಪಾಡು ದೇವರೇ ಅಂತ ನಿಟ್ಟುಸಿರಿಟ್ಟೆ. ಮೊನ್ನೆಯ ದಿನವಷ್ಟೆ ಕುಲದೇವರ ಕರುಣೆಯಾಯಿತು. ಸ್ವಪ್ನದಲ್ಲಿ ಕಾಣಿಸಿ, ಮಗಳೇ ಊರಾಚೆಯ ಆಲದ ಮರದಡಿಯ ಹುತ್ತದಲ್ಲೊಂದು ಅರಳುಮಲ್ಲಿಗೆ ಬಳ್ಳಿಯಿದೆ. ಪೂಜೆ ಮಾಡಿ, ಹೂ ಹರಿದು ಮಾಲೆಮಾಡಿ ಗಂಡನಿಗೆ ಹಾಕಿದರೆ ಅವನು ಸರ್ಪವಾಗಿ ಪರಿವರ್ತನೆಗೊಂಡು ನಿನ್ನ ಸೇರುತ್ತಾನೆ. ಹಾಗೆ ಸೇರಿದರೆ ಸಂತಾನವುಂಟು; ಇಲ್ಲದಿದ್ದರಿಲ್ಲ ಎಂದು ಅಪ್ಪಣೆ ಕೊಡಿಸಿದರು. ಅದಕ್ಕೇ ಹೊರಟಿದ್ದೇವೆ.

ಭಾಗವತ : ಆಯಿತಮ್ಮ ನಿಮ್ಮ ಇಚ್ಛೆ ಈಡೇರಲಿ.

*ಹೊರಡುವಳು. ಅವಳಿ ಎದುರಾಗುವನು.*

ಅವಳಿ : ದೇವಿ, ನಿನ್ನಲ್ಲಿ ಒಂದು ವಿನಂತಿ.

ಕಮಲ : ಇನ್ನೂ ಇಲ್ಲೇ ನಿಂತಿದ್ದೀರಲ್ಲಾ. ಬಿಲ್ವಪತ್ರೆ ತಂದಿರಿ ತಾನೆ?

ಅವಳಿ : ನೀನು ಹೇಳಲೇ ಇಲ್ಲವಲ್ಲ.

ಕಮಲ : ಇಗೋ ಪುನಃ ಮೂಲ ಹುಚ್ಚು ಕೆರಳಿತು; ಈಗೇನು ಪತ್ರೆ ತರುತ್ತೀರೋ ಇಲ್ಲವೊ?

ಅವಳಿ : ಇಲ್ಲೆಲ್ಲೂ ಪತ್ರೆ ಮರವೇ ಇಲ್ಲವಲ್ಲ.

ಕಮಲ : ಸ್ವಾಮೀ ನಮ್ಮ ಮನೆಯ ಪೂರ್ವದ ಗವಾಕ್ಷದ ಬಳಿ ಪತ್ರೆ ಮರ ಇಲ್ಲವೆ?

ಅವಳಿ : ನಮ್ಮ ಮನೆಯ ಪೂರ್ವ ಯಾವುದು?

*ಹುಡುಕುತ್ತ ಹೋಗುವನು. ಇನ್ನೊಂದು ಬದಿಯಿಂದ ಜವಳಿ ಪತ್ರೆ ತರುತ್ತಾನೆ.*

ಕಮಲ : ಈಗೆಲ್ಲಿಂದ ಬಂತು? ಸರಿಸರ. ವಿವರಣೆ ಬೇಡ. ಫಲ ಪುಷ್ಪ ತಗೊಂಬನ್ನಿ.

ಜವಳಿ : ಓಹೋ ಅಗತ್ಯವಾಗಿ.

*ಹೋಗುವನು. ಅವಳಿ ಬರುವನು.*

ಅವಳಿ : ಇಗೋ ಬಿಲ್ವಿಪತ್ರೆ.

ಕಮಲ : ಅದನ್ನು ತಂದಾಯ್ತಲ್ಲ; ನಾನು ಹೇಳಿದ್ದು ಫಲಪುಷ್ಪ.

ಅವಳಿ : ಇಗೋ ತಂದೆ.

*ಹೊರಡುವನು. ಎದುರು ದಿಕ್ಕಿನಿಂದ ಜವಳಿ ಬರುವನು. ಇಬ್ಬರೂ ಎದುರುಬದುರಾದದ್ದನ್ನು ಕಮಲ ನೋಡಿ ದಿಗಿಲುಗೊಳ್ಳುವಳು.*

ಇಬ್ಬರೂ : ಅರೆ! ನನ್ನ ಎದುರಿಗೆ ಕನ್ನಡಿ ಇದೆಯಲ್ಲ!

*ಇಬ್ಬರೂ ಬಿಂಬ ಪ್ರತಿಬಿಂಬದ ಹಾಗೆ ನಟಿಸುವರು*

ಅವಳಿ : ಕನ್ನಡಿಯೆ ಕನ್ನಡಿಯೆ ಕಣ್ಣಿವೆಯೆ ನಿನಗು?
ಇಲ್ಲವೆ । ಕನ್ನಡಿಯಾಗಿವೆಯೆ ನನ್ನ ಕಣ್ಣು ॥

ಜವಳಿ : ನೀ ನೋಡುತ್ತಿರುವೆಯ ನನ್ನ।
ಇಲ್ಲವೆ । ನಾ ನೋಡುತ್ತಿರುವೆನೆ ನಿನ್ನ ॥

ಅವಳಿ : ನಾ ನಿನ್ನ ಬಿಂಬವೋ? ನೆರಳೋ?
ಇಲ್ಲವೆ । ನೀ ನನ್ನ ಬಿಂಬವೊ ನೆರಳೊ ॥

ಜವಳಿ : ನಾನಿರದೆ ನೀನಿಲ್ಲ ಹೌದೆ?
ಇಲ್ಲವೆ ! ನೀನಿರದೆ ನಾನಿಲ್ಲ ಹೌದೆ ॥

ಅವಳಿ : ಇರಬಹುದು ಇಬ್ಬರೂ ಬೇರೆ
ಆದರೂ ! ಒಳಗಿಳಿದ ಮರದ ಬೇರೊಂದೆ ॥

ಜವಳಿ : ಇಬ್ಬರ ನಡುವಿದೆ ಗಾಜು
ಒಡೆದರೆ । ನಾವಿಬ್ಬರೊಂದೆ ಎರಡಳಿದು ॥

ಅವಳಿ : ಎರಡಳಿದರೊಂದಾಗಬಹುದೆ?
ಇಲ್ಲವೆ ! ಒಂಟಿಯಾಗುವೆವಂತೆ, ಹೌದೆ?

ಜವಳಿ : ಕರಗಿದರೆ ಒಬ್ಬರೊಬ್ಬರಲಿ
ಉಳಿವೆವೆ । ಗಾಜು ಇಲ್ಲವೆ ನೆನಪಿನಲ್ಲಿ?

ಅವಳಿ : ಕೇಳಿರುವ ಮಾತು ಈತನಕ

ಜವಳಿ : ನೀ ಹೇಳು । ಸಂವಾದವೋ ಅಥವಾ ಸ್ವಗತ?

ಇಬ್ಬರೂ : *(ಗುರುತಿಸಿ)* ನೀನು ನನ್ನ ಅಣ್ಣ ಅಥವಾ ತಮ್ಮನಲ್ಲವೆ?

ಅವಳಿ : ಹ್ಯಾಗಿದ್ದೀ ತಮ್ಮಣ್ಣ?

ಜವಳಿ : ಕಮಲ ನೀನು ತಕ್ಷಣ ಒಳಕ್ಕೆ ಹೋಗು. ನಾನಿವನನ್ನ ಮಾತಾಡಿಸಿ ಬರುತ್ತೇನೆ.

ಭಾಗವತ : ಓಹೊ ನಿಮ್ಮಲ್ಲೊಬ್ಬ ಅವಳಿ ಅಲ್ಲವೇನ್ರಯ್ಯಾ? ನೀನೂ ಇಲ್ಲೇ ಇದ್ದಿಯೇನಯ್ಯಾ ಅವಳಿ? ಏನು ಮಾಡಿಕೊಂಡಿದ್ದೆ?

ಜವಳಿ : ಏನೇನು ಕೆಟ್ಟದ್ದು ಸಾಧ್ಯವೊ ಅದನ್ನ ಮಾಡಿಕೊಂಡಿದ್ದಾನೆ. (ಅವಳಿಗೆ) ಈಗೇನು ಹೊರಟು ಹೋಗುತ್ತಿಯೊ? ಇಲ್ಲಾ ನಿನ್ನ ಕೊಬ್ಬಿನ ರುಚಿ ನೋಡಬೇಕೋ?

ಅವಳಿ : ಈ ಮನೆ ಮತ್ತು ಕಮಲಳ ಮೇಲೆ ನಿನ್ನಷ್ಟೇ ನನಗೂ ಅಧಿಕಾರವಿದೆ.

ಜವಳಿ : ಇವನಿಗೆ ಹೇಳಿ ಭಾಗವತರೇ - ನೀನು ಶಿವಪೂಜೆಯಲ್ಲಿ ಬಿಟ್ಟ ಕರಡಿ ಅಂತ.

ಅವಳಿ : ಹೇಳಿ ಭಾಗವತರೇ - ಇದು ಮೂರ್ಖತನದ ಪರಮಾವಧಿ ಅಂತ.

ಭಾಗವತ : ಆದರೆ ನಿಮ್ಮಲ್ಲಿ ಅವಳಿ ಯಾರು ಜವಳಿ ಯಾರು ಅಂತ ನನ್ನಲ್ಲೇ ಗೊಂದಲ ಶುರುವಾಗಿದೆಯಲ್ಲಪ್ಪ. ಯಾರಿಗಂತ ಹೇಳಲಿ? ಅಮ್ಮಾ ಕಮಲ, ನೀನು ಹೇಳು. ಇವರಿಬ್ಬರಲ್ಲಿ ನಿನಗೆ ತಾಳಿ ಕಟ್ಟಿದ ಗಂಡ ಯಾರು?

ಕಮಲ : ನನಗೂ ಗೊಂದಲವಾಗುತ್ತಿದೆ. ಕಂಡುಹಿಡಿಯೋದಕ್ಕೆ ನೀವೇ ಒಂದು ಉಪಾಯ ಹೇಳಿ ಭಾಗವತರೇ?

ಭಾಗವತ : ಹಾಗಿದ್ದರೆ ಹೀಗೆ ಮಾಡು: ಪ್ರೀತಿಸುವವರ ಹೃದಯ ಜೋರಾಗಿ ಬಡಿದುಕೊಳ್ಳುತ್ತದೆ ಅಂತ ಹಿರಿಯರು ಹೇಳಿದ್ದಿದೆ. ಇಬ್ಬರ ಎದೆಗೂ ಕಿವಿ ಹಚ್ಚಿ ನೋಡು. ಯಾರ ಹೃದಯ ಜೋರಾಗಿ ಬಡಿದುಕೊಳ್ಳುತ್ತದೋ ಅವನೇ ನಿನ್ನ ಗಂಡ

*ಕಮಲ ಹಾಗೇ ಮಾಡುವಳು.*

ಕಮಲ : ಇಬ್ಬರ ಹೃದಯಗಳೂ ನಿಮ್ಮ ಚಂಡೆ ಥರ ಬಡಿದುಕೊಳ್ತಾ ಇವೆ ಭಾಗವತರೇ.

ಜವಳಿ : ಸರಿ ಬಿಡಿ; ಇನ್ನೊಂದು ದ್ವಂದ್ವ ಯುದ್ಧವೇ ನಿರ್ಧರಿಸಲಿ. ಎಲವೆಲ್ಲವೋ ಕದ್ದು ಹೊಕ್ಕು ನನ್ನ ತೋಟದ ಕಬ್ಬು ಮೆಲ್ಲಬಂದ ನರಿಯೇ, ನಿನ್ನ ಬೇಟೆಯಾಡಲು ಸಿದ್ಧನಾಗಿದ್ದೇನೆ. ಇಕೋ ಎದುರಿಸು.

ಅವಳಿ : *(ಹೆದರಿ ಹಿಂಜರಿದು)* ಪ್ರತಿ ಸಾರಿ ಯುದ್ಧವೇ ನಿರ್ಧರಿಸೋದಾದರೆ ಹ್ಯಾಗೆ?

ಜವಳಿ : *(ವಿಜಯಶಾಲಿಯಾಗಿ)* ಪ್ರಿಯೆ, ಗೊತ್ತಾಯಿತೆ ನನ್ನ ಶೌರ್ಯ ಧೈರ್ಯಾದಿ ಗುಣಸಂಪನ್ನತೆ? ಅಥವಾ ನಿನಗೂ ಒಂದು ಕೈ ತೋರಿಸಬೇಕೋ?

ಕಮಲ : ಗೊತ್ತಾಯಿತು ಸ್ವಾಮಿ.

ಜವಳಿ : ಹಾಗಿದ್ದರೆ ಪೂಜೆಗೆ ನಡೆ, ಹುತ್ತದ ಕಡೆ.

*ಕಮಲ ಮತ್ತು ಜವಳಿ ಹೋಗುವರು.*

ಭಾಗವತ : ತಪಸ್ಸು ಮಾಡೋದಕ್ಕೆ ಅಂತ ನೀನು ಹೋಗಿರಲಿಲ್ಲವೇನಯ್ಯ?

ಅವಳಿ : ಹೋಗಿದ್ದೆ. ತಪಸ್ಸೂ ಮಾಡಿದೆ. ದೇವರನ್ನು ನೋಡಿಕೊಂಡು ತಿರುಗಿ ಬಂದೆ

ಭಾಗವತ : ಹೌದೆ? ಹ್ಯಾಗಿದ್ದಾನಪ್ಪಾ ದೇವರು? ಎಲ್ಲ ಕುಶಲವ?

ಅವಳಿ : ದೇವರು ಅಂದರೆ ಮಹಾ ಅಹಂಕಾರದ ಅಗ್ನಿಕುಂಡ ಭಾಗವತರೇ. ಅಣುರೇಣು ತೃಣಕಾಷ್ಠಗಳೇನು, ಸೂರ್ಯಚಂದ್ರಾದಿಗಳೂ ತನ್ನ ನಿಯಂತ್ರಣದಲ್ಲಿದ್ದಾರೆಂಬ ಅಹಂಕಾರ. ಭಕ್ತಾದಿಗಳು ಭಕ್ತಿಯ ತುಪ್ಪ ಸುರೀತಿರಬೇಕು. ಈ ಅಗ್ನಿಕುಂಡ ಸದಾ ನಿಗಿನಿಗಿ ಉರಿಯುತ್ತಿರಬೇಕು. ಚಕ್ರವರ್ತಿಗಳಿಗೂ ದೇವರಿಗೂ ಆಗಾಗ ಸ್ಪರ್ಧೆ ಏರ್ಪಡುತ್ತಲ್ಲ - ಅದು ಕ್ಷುದ್ರ ಅನ್ನಿಸಿ ವಾಪಸು ಬಂದೆ.

ಭಾಗವತ : ಭಾಗ್ಯವಂತನಪ್ಪ! ದೊಡ್ಡ ಅರಿವು ಪಡೆದುಕೊಂಡು ಬಂದೆ.

ಅವಳಿ : ಭಾಗವತರೇ, ನನಗೊಂದು ಎಮ್ಮೆ ಬೇಕು. ನಿಮ್ಮ ಮೇಳದಲ್ಲಿದೆಯೆ?

ಭಾಗವತ : ಊರಲ್ಲಿ ಬೇಕಾದಷ್ಟಿವೆ. ಎಮ್ಮೆ ಯಾಕಪ್ಪಾ?

ಅವಳಿ : ಒಂದು ಮಡಿಕೆ ಹಾಲು ಬೇಕಾಗಿದೆ.

ಭಾಗವತ : ಹಾಲು ಯಾಕಪ್ಪಾ?

ಅವಳಿ : ಆ ನನ್ನ ತಮ್ಮಣ್ಣನಿಗೆ ಚಳ್ಳಹಣ್ಣು ತಿನ್ನಿಸಿ ಹಾಲು ಕುಡಿಸೋದಕ್ಕೆ.

*ಹೋಗುವನು.*

## ದೃಶ್ಯ ೧೦

ಭಾಗವತ : **ಬೊಗಸೆಯಲ್ಲಿಯ ನೀರು ಸೋರಲು**
**ನಗುತ ಮೂಡಿದ ದೇವರೂ ಸಹ**
**ಸೋರಿ ಹೋಗಲು ನೀರನಾಳಕೆ ರಾಜ ಮರುಳಾದ**
**ಬರಿಯ ಕೈಯಲಿ ಬರಲು ತನ್ನ ಶರೀರ ಸಡಗರಿಸುತ್ತ ನಿಂತರೆ**
**ಗುರುತು ಹತ್ತದೆ ಯಾರು ಯಾರೆಲ್ಲ ದುರುಳ ನೀನೆಂದ**

*ರಾಜ ಕಂಗಾಲಾಗಿ ಬರುತ್ತಾನೆ.*

ರಾಜ : ನಾನು ಮುಟ್ಟಿದ್ದೆಲ್ಲ ಮೂರ್ಖತನವಾಗುತ್ತಿದೆ. ಕಂಡದ್ದೆಲ್ಲಾ ಮೋಸವಾಗುತ್ತಿದೆ. ವಿದೂಷಕನೇ ನನ್ನನ್ನು ನೋಡಿ ನಗುವಂತಾಗಿದೆ.

ಸಂಪಿಗೆ : (ಪ್ರವೇಶಿಸಿ) ತಾವು ಖಿನ್ನರಾಗಿರುವಂತೆ ತೋರುತ್ತೀರಿ ಪ್ರಭು.

ರಾಜ : ಹೌದು. ದೇವರನ್ನು ಕಂಡೇ ಕಾಣುತ್ತೇನೆಂತ ಕಣ್ಣಲ್ಲಿ ದೀಪ ಹೊತ್ತಿಸಿಕೊಂಡು ಹೋದವನು ಕಗ್ಗತ್ತಲಲ್ಲಿ ವಾಪಸಾಗಿದ್ದೇನೆ. ದೇವರು ಮಾತ್ರ ಕಣ್ಣೀರು ಸುರಿಸುವಂಥ ನೋವು ಕೊಡುತ್ತಾನೆ ಅಂತಿದ್ದೆ. ಆದರೆ ಇಲ್ಲಿ ನೋಡಿದರೆ ಎಲ್ಲಾ ಶಕ್ತಿಗಳು ಕತ್ತಲೆಯ ಕುಹಕಗಳಿಗೆ ಶಾಮೀಲಾಗಿ ಬೆಳಕು ನನ್ನ ಹತ್ತಿರ ಸುಳಿಯದ ಹಾಗೆ ಮಾಡಿವೆ.

ಸಂಪಿಗೆ : ನೀವು ಪ್ರೀತಿಯನ್ನು ತಿರಸ್ಕರಿಸಿರಬಹುದು. ಆದರೆ ಹಿಂದಿನದನ್ನೆಲ್ಲ ಮರೆತು ಮತ್ತೆ ನಿಮ್ಮನ್ನು ಸ್ವೀಕರಿಸಲಿಕ್ಕೆ ನನ್ನ ತೋಳುಗಳು ತೆರೆದುಕೊಂಡೇ ಇವೆಯಲ್ಲಾ.

ರಾಜ : ನಿನ್ನ ಮುಖ ಎಷ್ಟು ಮುಗ್ಧವಾಗಿದೆ ದೇವಿ! ಒಂದು ಕಣದಷ್ಟೂ ಕೆಸರಿನ ಲೇಪವಿಲ್ಲದ, ಈಗಷ್ಟೇ ಅರಳಿದ ಕಮಲ ನಿನ್ನ ಮುಖ. ನನ್ನ ಮುಖ ನೋಡು, ನೀರಿನಲ್ಲಿಯ ದೇವರನ್ನು ಪರಿಭಾವಿಸಿ ತಳದ ಕೆಸರೆಲ್ಲ ಮುಖಕ್ಕೆ ರಾಚಿ ರಾಡಿ ರಾಡಿಯಾಗಿದೆ. ದೇಹ ಪರಿಶುದ್ಧವಾದುದು ದೇವಿ. ಆತ್ಮ ಕೊಳಕಾದದ್ದು. ಆತ್ಮಕ್ಕೆ ಪಾಪಗಳು ಕಾಣಿಸುತ್ತವೆ.

ಸಂಪಿಗೆ : ತಮಗೆ ವಿಶ್ರಾಂತಿ ಬೇಕು ಪ್ರಭು. ಸ್ವಲ್ಪ ನಿದ್ರೆ ಮಾಡಿದರೆ ಸುಂದರ ಸ್ವಪ್ನ ಕಂಡು....

ರಾಜ : ನಾನಿನ್ನೂ ಕಣ್ಣು ಮುಚ್ಚಿರಬೇಕಂತ ತಾನೆ ನೀನು ಹೇಳುವುದು? ಭಲೇ! ನಿನಗೆ ಕನಸುಗಳಿವೆ ದೇವಿ. ಸುದೈವಿ ನೀನು. ನಿಜದಲ್ಲಿ ರಾಣಿಯಾಗಿರುತ್ತ, ಕನಸಿನಲ್ಲಿ ಪ್ರೇಯಸಿಯಾಗಿರುತ್ತ ಎರಡೂ ಲೋಕಗಳ ಅಹಂಕಾರಗಳನ್ನು ನಿಭಾಯಿಸಬಲ್ಲೆ. ಆದರೆ, ನಾನು? ದೇವರು ಕೈಕೊಟ್ಟ ದಿನವೇ ನನ್ನ ಕನಸು ಗಳನ್ನೂ ಕಳೆದುಕೊಂಡೆ ದೇವಿ.

ಸಂಪಿಗೆ : ಹಾಗೆಂದರೇನು ಪ್ರಭು?

ರಾಜ : ದೇಹವನ್ನು ತಿರಸ್ಕರಿಸಿ ನಿನ್ನ ಬಳಿ ಬಿಟ್ಟು, ದೇವರನ್ನು ಕಾಣೋದಕ್ಕಾಗಿ ಸರೋವರಕ್ಕೆ ಹೋದೆ. ನೀರಿನಲ್ಲಿ ತೇಲಿ ಬರುತ್ತಿದ್ದದ್ದು ಮೊಲ್ಲೆಯೂ ಅಲ್ಲ, ದೇವರೂ ಅಲ್ಲ, ನನ್ನ ಪ್ರತಿಬಿಂಬ ಕೂಡ ಅಲ್ಲ. ದೇವಿ ಅದು ನನ್ನ ಹೆಣ. ಅದನ್ನೇ ದಿನಾ ತೊಡೆಯ ಮೇಲಿಟ್ಟುಕೊಂಡು ತಿನ್ನುತ್ತಿದ್ದೆ. ತಿಂದಷ್ಟು ಹಸಿವೆಯಾಗುತ್ತಿತ್ತು. ಮತ್ತೆ ಮತ್ತೆ ತಿನ್ನುತ್ತಿದ್ದೆ. ಅದು ಹೆಣವೆಂದು ತಿಳಿಯುವಷ್ಟರಲ್ಲಿ ನನ್ನ ಕಾಲ ಮೀರಿಹೋಗಿತ್ತು. ಪಶ್ಚಾತ್ತಾಪ ಪಟ್ಟು ತಿರುಗಿ ಬಂದು ನೋಡಿದರೆ ನನ್ನ ದೇಹವೇ ನಾಪತ್ತೆ. ಅದರಲ್ಲಿ ಯಾರೋ ಸೇರಿ ಅಪಹರಿಸಿಬಿಟ್ಟಿದ್ದಾರೆ. ನಾನೀಗ ಬರೀ ಗಾಳಿ ದೇವಿ. ನಿನ್ನ ಚರ್ಮಕ್ಕೆ ಸ್ಪರ್ಶ ಕೂಡ ಮಾಡಲಾರದ, ಅಸ್ತಿತ್ವವಿಲ್ಲದೇ ಬರೀ ಮಾತಾಡುವ ಗಾಳಿ. ನಾನು ಪ್ರಕಟವಾಗೋದಕ್ಕೆ ಒಂದು ದೇಹ ಬೇಕು. ಬದುಕಿನ ಬಗೆಗಿನ ನನ್ನ ಹಸಿವು ಹೆಚ್ಚಾಗುತ್ತಿದೆ. ದೇವಿ, ನನಗೊಂದು ದೇಹ ಬೇಕು. ದಯಮಾಡಿ ನನಗೆ ಸಹಾಯ ಮಾಡು.

ಸಂಪಿಗೆ : ನಾನು ನಿಮ್ಮ ಚರಣ ದಾಸಿ ಪ್ರಭು.

ರಾಜ : ಅದೆಲ್ಲ ಬೇಡ. ಪ್ರಾಮಾಣಿಕವಾಗಿ ಸಹಾಯ ಮಾಡಿದರೆ ಸಾಕು. ಸಹಕರಿಸಲಾರೆಯಾ?

ಸಂಪಿಗೆ : ಖಂಡಿತ ಸಹಕರಿಸುತ್ತೇನೆ ಪ್ರಭು.

ರಾಜ : ಮಾತಿಗೆ ತಪ್ಪಬಾರದು.

ಸಂಪಿಗೆ : ಇಲ್ಲ ಪ್ರಭು.

ರಾಜ : ನಿಜವಾಗಿ ?

ಸಂಪಿಗೆ : ನಿಜವಾಗಿ.

ರಾಜ : ನನ್ನಾಣೆಯಾಗಿಯೂ?

ಸಂಪಿಗೆ : ತಮ್ಮಾಣೆಯಾಗಿ.

ರಾಜ : ಹಾಗಿದ್ದರಿಗೋ.... (ಒದರಿ ಕರೆಯುತ್ತ) ಎಲಾ ಯಾರಲ್ಲಿ?

ಸಂಪಿಗೆ : ಎಲ್ಲರೂ ಮರಗಿರೋವಾಗ ಯಾರು ಬರಬೇಕು ಪ್ರಭೂ?

ರಾಜ : ಕರೆಯುತ್ತಿರೋನು ಈ ನಾಡಿನ ಮಹಾರಾಜ. ಎಲಾ ಯಾರಲ್ಲಿ?

ಸಂಪಿಗೆ : ಇದು ಮಧ್ಯರಾತ್ರಿ ಪ್ರಭು.

ರಾಜ : ಆದರೆ ಈ ನಾಡಿನ ಪ್ರಭುವಿಗೆ ಮಹಾ ಸತ್ಯ ಗೋಚರಿಸಿದ ಗಳಿಗೆ ಇದು. ಎಲಾ ಯಾರಲ್ಲಿ?

ಸಂಪಿಗೆ : ಕೇಳಿದವರೇನಂದಾರು? ನಿಲ್ಲಿಸಿ ಪ್ರಭು.

ರಾಜ : ಈ ಸತ್ಯದ ಪಾಲುಗಾರ್ತಿ ನೀನು, ಸುಮ್ಮನಿರು. ಯಾರಲ್ಲಿ?

*ತಾಯಿ ಮತ್ತು ಸೇವಕನ ಪ್ರವೇಶ.*

ಸೇವಕ : ಏನಪ್ಪಣೆ ಪ್ರಭು?

ತಾಯಿ : ಏನಿದು ರಾಜಕುಮಾರ?

ರಾಜ : ಬಾ ತಾಯೇ. ಸೇವಕಾ ಈಗಿಂದೀಗಲೇ ಡಂಗೂರ ಸಾರು. ಮಧ್ಯರಾತ್ರಿಯೆಂದು ನನಗೆ ಗೊತ್ತಿದೆ. ವಾದ, ಮಾಡಬೇಡ. ಆದರೂ ಸಾರು. ನಾಳೆ ಬೆಳಗ್ಗೆ ಎಲ್ಲ ಪ್ರಜೆಗಳು, ಸಮಸ್ತರು ನಾಗಲಿಂಗ ದೇವಸ್ಥಾನದಲ್ಲಿ ಸೇರಬೇಕು. ಮಹಾರಾಣಿ ಸಂಪಿಗೆದೇವಿಯವರು ದಿವ್ಯ ಕೊಡುತ್ತಾರೆ.

*ಸೇವಕ ಹೋಗುವನು.*

ಸಂಪಿಗೆ : ದಿವ್ಯ, ಯಾಕೆ?

ರಾಜ : ಅಕ್ರಮವಾಗಿ ಗರ್ಭಿಣಿಯಾದ ನಿಜ ಹೇಳಲಿಕ್ಕೆ.

ತಾಯಿ : ರಾಜಕುಮಾರ, ನಿನ್ನ ಮೈಮೇಲೆ ಪ್ರಜ್ಞೆ ಇದೆಯೋ ಇಲ್ಲವೊ? ಯಾರೆದುರು ಇಂಥ ಮಾತಾಡುತ್ತಿದ್ದೀಯಾ?

ರಾಜ : ಮಹಾರಾಣಿಯ ಸುಳ್ಳು ನಂಬಿದ ತಾಯಿಯ ಎದುರಿಗೆ ಮತ್ತು ಸ್ವಯಂ ಮಹಾರಾಣಿ ಸಂಪಿಗೆ ದೇವಿಯ ಎದುರಿಗೆ.

ತಾಯಿ : ಸಂಪಿಗೆ ಯಾವ ಸುಳ್ಳನ್ನೂ ಹೇಳಿಲ್ಲವಲ್ಲ.

ರಾಜ : ನನ್ನ ಉದ್ಧಟತನವನ್ನು ಕ್ಷಮಿಸು ತಾಯಿ. ಇವಳ ಗರ್ಭದ ಪಿಂಡ ನನ್ನದಲ್ಲ. ಆ ವಿಷ ಯಾರದೆಂಬ ನಿಜ ಹೊರಬರಬೇಕು.

ತಾಯಿ : ಅದು ನಿನ್ನದೇ ಅಂತ ನಾನು ಹೇಳುತ್ತೇನೆ.

ರಾಜ : ಇದು ನಿಜ ಅಲ್ಲ ತಾಯಿ, ಮೋಸ.

ತಾಯಿ : ನಿಜ ನಿನಗೆಷ್ಟು ತಿಳಿದೀತು? ನೀನು ನನ್ನ ಮಗ ಎನ್ನುವದೆಷ್ಟು ನಿಜವೋ ಆ ಗರ್ಭ ನಿನ್ನದೆನ್ನುವುದೂ ಅಷ್ಟೇ ನಿಜ.

ರಾಜ : ಎಷ್ಟೊಂದು ನಿಜಗಳನ್ನು ನಿಭಾಯಿಸ್ತ ಇದ್ದೀ ತಾಯಿ! ನನಗೆ ಒಂದು ಸತ್ಯವೂ ದಕ್ಕಲೊಲ್ಲದು. ಪಿಂಡಕ್ಕೆ ನನ್ನ ಹೆಸರಿರೋದರಿಂದ ಅಂತಿಮ ಪ್ರಮಾಣ ನಾನು ತಾಯೀ.

ತಾಯಿ : ಅರೆ ಹುಚ್ಚಿನಲ್ಲಿರೋ ನಿನಗೆ ಪ್ರಮಾಣವಾಗುವ ಯೋಗ್ಯತೆಯೆಲ್ಲಿದೆ ರಾಜಕುಮಾರ?

ರಾಜ : ಅದಕ್ಕೇ ಹೇಳಿದ್ದು ಹತ್ತು ಸಮಸ್ತರ ಮುಂದೆ ಇದು ತೀರ್ಮಾನವಾಗಲಿ ಎಂದು.

ತಾಯಿ : ಹುಚ್ಚನ್ನು ಎಲ್ಲೆಲ್ಲಿಗೋ ವಿಸ್ತರಿಸುತ್ತಾ ಇದ್ದೀಯಾ. ಖಾಸಗಿ ವಿಷಯವನ್ನು ಸಾರ್ವಜನಿಕಗೊಳಿಸ್ತಾ ಇದ್ದೀಯಾ.

ರಾಜ : ನ್ಯಾಯದ ಮುಂದೆ ಎಲ್ಲರೂ ಸಮಾನರು ತಾಯಿ.

ತಾಯಿ : ಇದು ಹುಚ್ಚಿನ ಉಲ್ಬಣಾವಸ್ಥೆ. *(ವೇದನೆಯಿಂದ)* ನನ್ನ ರೆಪ್ಪೆಯ ಮೇಲಾಗಲೇ ಬದುಕಿನ ಭಾರ ಹೆಚ್ಚಾಗಿದೆ ಮಗನೇ, ನಾನಿದನ್ನು ತಡೆಯಲಾರೆ.

ರಾಜ : ನನಗೂ ವಯಸ್ಸಾಯ್ತಲ್ಲ ತಾಯೀ. ನಾನು ಯಾವಾಗಲೂ ಎರಡಿದ್ದೆ ಅಂತ ಅನ್ನಿಸುತ್ತಿದೆ. ಒಂದನ್ನು ಅಂದರೆ ಅರ್ಧವನ್ನು ಎಲ್ಲೋ ಮರೆತಿದ್ದೇನೆ. ಅದು ನನ್ನ ಅಣ್ಣ ಆಗಿರಬೇಕು, ಇಲ್ಲವೆ ವೈರಿ ಆಗಿರಬೇಕು. ಅವನಿರುವ ಗುಟ್ಟನ್ನು ನೀನು ನನ್ನಿಂದ ಬಚ್ಚಿಟ್ಟಿದ್ದೀಯೆ; ಇವಳು ತನ್ನ ಗುಟ್ಟನ್ನು ಗರ್ಭದಲ್ಲಿಟ್ಟುಕೊಂಡು ಮೇಲೆ ಸೀರೆ ಸುತ್ತಿಕೊಂಡಿರೋ ಹಾಗೆ ನೀನೂ ಮಾಡಿರಬಹುದು.

ತಾಯಿ : ಕುಮಾರ, ನೀನು ಅಂದುಕೊಂಡಂಥ ಪ್ರಳಯವೇನೂ ಆಗಿಲ್ಲ. ಅನಗತ್ಯ ದ್ವೇಷದಲ್ಲಿ ವಿವೇಕ ಕಳೆದುಕೊಳ್ಳಬೇಡ.

ರಾಜ : ಈಗ ನನ್ನ ದ್ವೇಷ ಕೂಡ ಎರಡಾಗಿದೆ ತಾಯಿ. ಇಡಿಯಾಗಿ ರಾಣಿಯನ್ನು ದ್ವೇಷಿಸಲಾರೆ ನಾನು. ಅವನು- ನಾನಿಲ್ಲದಾಗ ಅಕ್ರಮವಾಗಿ ಬಂದು ಇವಳನ್ನು ಸೇರಿದವನು, ಯಾರಿಗೂ ಗೊತ್ತಿಲ್ಲದ ಹಾಗೆ ನಿಕ್ಷೇಪ ತಂದು ಇವಳ ಗರ್ಭದಲ್ಲಿ ಬಚ್ಚಿಟ್ಟವನು - ಆತನ ಬಗ್ಗೆ ಕೂಡ ನನಗೆ ಇಡೀ ದ್ವೇಷವಿಲ್ಲ ತಾಯಿ, ಮೆಚ್ಚುಗೆ ಅಸೂಯೆ ಕೂಡ ಇದೆ. ಆದರೆ ನನಗವನು ಬೇಕು. ಅದಕ್ಕಾಗಿ ನಾಳೆ ಬೆಳಿಗ್ಗೆ ರಾಣಿಯ ಕಪಟ ಪ್ರಕಟವಾಗಲೇ ಬೇಕು. ರಾಜನಾಗಿ ನನ್ನ ನಿರ್ಧಾರ ಹೇಳಿಯಾಗಿದೆ. ನಾಳೆ ಬೆಳಿಗ್ಗೆ ತಾವೂ ಬರೋಣವಾಗಬೇಕು.

*ನಿರ್ಗಮಿಸುವನು.*

# ದೃಶ್ಯ ೧೧

*ನಾಗಲಿಂಗ ದೇವಸ್ಥಾನದಲ್ಲಿ, ತಾಯಿ, ಸಂಪಿಗೆ, ರಾಜ, ಹಿರಿಯರು*

ಭಾಗವತ : **ಧರೆಗೆ ದೊಡ್ಡವರೆಲ್ಲ ಬರಲು ಸತ್ಕರಿಸಿ**
**ಅರಸು ಹೇಳಿದನಿಂತು ಬಾಗಿ |**
**ಅರಮನೆಯ ನೀತಿಗಳ ಮುರಿದು ಸಂಪಿಗೆ ಗರ್ಭ**
**ಧರಿಸಿದ್ದು ನ್ಯಾಯವೇ ಹೇಳಿ ||**

ರಾಜ : ಧರೆಗೆ ದೊಡ್ಡವರಾದ ತಾವು ದೊಡ್ಡ ಮನಸ್ಸು ಮಾಡಿ ಬಂದದ್ದಕ್ಕೆ ಭಕ್ತಿಯ ನಮಸ್ಕಾರ.

ಹಿರಿಯ ೧ : ತಮ್ಮ ವಿನಯದಿಂದ ಸನ್ಮಾನಿತರಾದೆವು ಪ್ರಭು.

ರಾಜ : ಕಿರಿಯನಾದ ನನಗೆ ಧರ್ಮಸಂದಿಗ್ಧ ಬಂದಿರೋದರಿಂದ ದೈವಸಮಾನರಾದ ತಮ್ಮ ಮಾರ್ಗದರ್ಶನ ಬೇಕಾಗಿ ಕರೆಸಬೇಕಾಯಿತು.

ಹಿರಿಯ ೨ : ಹಿರಿಯರ ಸಾಕ್ಷಿಕದಲ್ಲಿ ಮಹಾರಾಜರು ತೆಗೆದುಕೊಳ್ಳುವ ತೀರ್ಮಾನಕ್ಕೆ ಕುಲದೈವವೂ ಬದ್ಧವಾಗಿರುತ್ತದೆ. ನಮ್ಮ ಅಂತಃಸಾಕ್ಷಿಯಿಂದ ನಿಜ ಮತ್ತು ಉಚಿತವನ್ನೇ ನುಡಿಯುತ್ತೇವೆ. ಅಪ್ಪಣೆಯಾಗಲಿ ಪ್ರಭು.

ರಾಜ : ಗಂಡನ್ನ ಬಿಟ್ಟು ಅಕ್ರಮವಾಗಿ ಇನ್ನೊಬ್ಬನೊಂದಿಗೆ ಸೇರಿ ಗರ್ಭವತಿಯಾದವಳಿಗೆ ಏನು ಶಿಕ್ಷೆಯಾಗಬೇಕೆಂಬ ಬಗ್ಗೆ ಕಡೆಯ ನುಡಿಯಾಗಲಿ.

ಹಿರಿಯ ೧ : ಓಂ ಪ್ರಥಮದಲ್ಲಿ ಅದು ಅಕ್ರಮ ಗರ್ಭವೆಂದು ಸಾಬೀತಾಗಬೇಕು ಪ್ರಭು.

ರಾಜ : ಸಾಬೀತು ಮಾಡುವುದಕ್ಕೆ ಪ್ರಮಾಣವೇನು?

ಹಿರಿಯ ೨ : ಗಂಡ -ಹೆಂಡತಿಯರ ಅಂತಃಸಾಕ್ಷಿಯೇ ಪ್ರಮಾಣ.

ರಾಜ : ಅಂತಃಸಾಕ್ಷಿಗೂ ಮೋಸ ಮಾಡುವವರಿದ್ದರೆ....?

ಹಿರಿಯ ೧ : ಎಲ್ಲರ ಸಮಕ್ಷಮದಲ್ಲಿ ನಿರ್ಧರಿಸುವ ದಿವ್ಯವೇ ಅಂತಿಮ ಪ್ರಮಾಣ.

ರಾಜ : ಹಾಗಿದ್ದರೆ ನಿರ್ಧರಿಸಿ. ಇಲ್ಲಿ ಅಕ್ರಮ ಗರ್ಭವತಿಯಾಗಿ ಅಪರಾಧ ಮಾಡಿದವಳು ನಾಡಿನ ಮಹಾರಾಣಿ. ನ್ಯಾಯ ಕೇಳುತ್ತಿರೋನು ನಾಡಿನ ಮಹಾರಾಜ. *(ಎಲ್ಲರಿಗೂ ಆಘಾತವಾಗುತ್ತದೆ.)*

ಹಿರಿಯ ೧ : ಮಹಾರಾಜ, ತಮ್ಮ ದೇಹಸ್ಥಿತಿ ಸ್ವಸ್ಥವಾಗಿಲ್ಲವೆಂದು ಕೇಳಿದ್ದೇವೆ. ಹಾಗಿದ್ದಲ್ಲಿ ಮನಸ್ಸಿಗೂ ಕಿರಿಕಿರಿ ಇರೋದು ಸಹಜ. ಕುಲಗೌರವದ ಮಾತುಗಳನ್ನು ನಮಗೆಲ್ಲ ಕುಲದೇವದಂತಿರುವ ರಾಜಮಾತೆಯ ಪ್ರತ್ಯಕ್ಷದಲ್ಲಿ ಬಗೆಹರಿಸಿ ಕೊಳ್ಳಬಹುದಲ್ಲ. ಇದು ಸಾಮಾಜಿಕವಲ್ಲದ ಸಮಸ್ಯೆಯೆಂದು ನಮ್ಮ ಭಾವನೆ.

ರಾಜ : ಪ್ರಜೆಗಳಿಗೆ ಅನ್ಯಾಯವಾದಾಗ ನ್ಯಾಯ ಕೊಡುವವನು ರಾಜ. ರಾಜನಿಗೇ ಅನ್ಯಾಯವಾದಾಗ ಸಮಸ್ತರು ನ್ಯಾಯಕೊಡಬೇಕಾದ್ದು ಧರ್ಮ.

ಹಿರಿಯ ೨ : ರಾಜ ಇಬ್ಬರನ್ನಾಳುತ್ತನೆ. ಭೂಮಿಯನ್ನು ಮತ್ತು ಹೆಂಡತಿಯನ್ನು. ಅದ್ದರಿಂದ ಇಬ್ಬರ ನ್ಯಾಯಾನ್ಯಾಯಗಳ ಅಧಿಕಾರಿಯೂ ಅವನೆ.

ರಾಜ : ನ್ಯಾಯದ ಕಣ್ಣಲ್ಲಿ ಎಲ್ಲರೂ ಸಮಾನರಾದ್ದರಿಂದ, ಸ್ವತಃ ರಾಜನಿಗೇ ನ್ಯಾಯ ಬೇಕಾಗಿರುವುದರಿಂದ ಕೇಳುತ್ತಿದ್ದೇನೆ. ಈಗ ಹಿಂದೆಗೆದರೆ ಅದು ನಿಮ್ಮ ಹಿರಿತನದ ಕೇಡು.

ಹಿರಿಯ ೨ : ತಮ್ಮ ಮೈ ಮತ್ತು ಮನಸ್ಸಿನ ಅಸ್ವಸ್ಥತೆಯನ್ನು ಸಮಸ್ತರ ಮೇಲೆ ಹೇರುವುದು ತಪ್ಪು ಪ್ರಭು. ಈಗಲೂ ಕಾಲ ಮಿಂಚಿಲ್ಲ. ರಾಜಮಾತೆಯವರೊಂದಿಗೆ ತಾವು ಮಾತಾಡಿ ಉಚಿತ ರೀತಿಯಲ್ಲಿ ತೀರ್ಮಾನಿಸಬೇಕೆಂದು ನಮ್ಮ ನಮ್ರ ಪ್ರಾರ್ಥನೆ.

ರಾಜ : ನಮ್ಮ ಮೈಮನಸ್ಸಿನ ಅಸ್ವಸ್ಥತೆಗೆ ಆಧಾರವೇನು?

ತಾಯಿ : ಆಡಬಾರದ ನುಡಿಗಳನ್ನು ಅವಗಡಿಸಿ ನುಡಿಯುತ್ತಿರುವುದೇ ಸಾಲದೇ? ಕುಲದ ಚರಿತ್ರೆಯ ಮೇಲೆ ಮಸಿ ಚೆಲ್ಲುತ್ತಿರುವುದು ಸಾಲದೇ? ಮಹಾರಾಣಿಯ ಮೈಗೂ ಒಡೆಯ, ಮನಸ್ಸಿಗೂ ಒಡೆಯ ನೀನು. ಎರಡನ್ನೂ ಅರಿಯದ ಹೊಣೆಗೇಡಿತನ ಸಾಲದೆ?

ರಾಜ : ಇವೆಲ್ಲಾ ಅನ್ಯಾಯಕ್ಕೆ ಒಳಗಾದವನ ಸಂಕಟದ ಮಾತಗಳೆಂದು ಯಾಕೆ ತಿಳಿಯುತ್ತಿಲ್ಲ ನೀವು?

ಹಿರಿಯ ೧ : ತಾವು ಮಧ್ಯೆ ಬಾಯಿ ಹಾಕಿ ಮಾತನಾಡಿದ್ದು ಸಾರ್ಥಕವಾಯಿತು ತಾಯಿ. ಹಿಂದೊಮ್ಮೆ ಪ್ರಭುಗಳನ್ನು ಸೀಳುವುದಕ್ಕೆ ಸಾಕ್ಷಿಕರಾಗಿ ನಮ್ಮ ಕಣ್ಣು ಮನಸ್ಸಿಗೆ ಬೇಕಾದಷ್ಟು ದೊಡ್ಡ ಗಾಯ ಮಾಡಿಕೊಂಡಾಗಿದೆ. ಈಗ ಈ ಹುಚ್ಚಿಗೆ ಸಾಕ್ಷಿಕರಾಗಿ ನಮ್ಮ ಆತ್ಮಗಳಿಗೆ ಗಾಯ ಮಾಡಿಕೊಳ್ಳಲು ನಮಗಿಷ್ಟವಿಲ್ಲ - ಇಗೋ ಹೊರಟೆವು.

ರಾಜ : ಒಂದು ಹೆಜ್ಜೆ ಮುಂದಿಟ್ಟರೆ ನಿಮಗೆ ಕುಲದೈವದಾಣೆ.

ಹಿರಿಯ ೨ : ಹಿರಿಯರಾದ ತಪ್ಪಿಗೆ ತಾವು ಮಾಡುವ ಪಾಪಗಳಿಗೆಲ್ಲ ನಾವು ಪಾಲುದಾರರಾಗಬೇಕೋ....

ತಾಯಿ : ಸತ್ಯದೇವತೆಗಳನ್ನು ಚಿತ್ತದಲ್ಲಿ ಸ್ಮರಿಸಿ ಹೇಳುತ್ತೇನೆ: ಹಟ್ಟಿಯ ಸಮಸ್ತರಿಗೆ ಸನ್ಮಂಗಳವಾಗಲಿ. ಸತ್ಯವನ್ನು ಕಷ್ಟದಿಂದ ಕಾಪಾಡಬೇಕಿದೆ ಹಿರಿಯರೆ. ಒಂದು ಕ್ಷಣ ಮೈಮರೆತರೂ ಅಂಗೈ ಒಳಗಿನ ಸತ್ಯ ಹಾರಿ ಸಾವಿರ ವರ್ಷಗಳ ಕುಲ ಕುಸಿಯುತ್ತದೆ. ವಿವೇಕವನ್ನು ಅಹಂಕಾರಕ್ಕೆ ಹರಾಜು ಹಾಕುವ ಗಂಡಿಗೆ, ಮೈಮರೆತು ತನ್ನ ಕ್ರಿಯೆಗಳನ್ನು ಮರೆಯುವ ಗಂಡಿಗೆ - ಹೆಣ್ಣಿನ ಸತ್ಯ ಗೋಚರವಾಗುವುದು ಕಷ್ಟ. ಎಲ್ಲರ ಸತ್ಯಗಳು ಅವರವರ ಮೂಗಿನ ನೇರಕ್ಕೇ ಇದ್ದಿದ್ದರೆ ಏನಾಗುತ್ತಿತ್ತೋ? ಸದ್ಯ ಹಾಗಿಲ್ಲವಲ್ಲ. ಪರಾಮರ್ಶಿಸಿ ತೀರ್ಮಾನಿಸುವ ನಿಮ್ಮಂಥ ಹಿರಿಯರಿದ್ದೀರಿ. ಅದೇ ನಮ್ಮ ಪುಣ್ಯ. ಇದು ಹೆಣ್ಣಿಗಾದ ಅವಮಾನವೆಂದು ತಿಳಿದೂ ಹೇಳುತ್ತಿದ್ದೇನೆ. ನನ್ನ ಸೊಸೆಯ ಸತ್ಯ ಸಾಬೀತು ಮಾಡುವುದಕ್ಕೆ ಕುಲದೈವದ ಆಶೀರ್ವಾದವಿದೆ. ದಯಮಾಡಿ ದಿವ್ಯ ಹೇಳಿರಿ. ಆಮೇಲಾದರೂ ಮಗನ ಹುಚ್ಚು ವಾಸಿಯಾದೀತು.

ಹಿರಿಯ ೧ : ರಾಜಮಾತೆಯವರ ಮಾತಿಗೆ ಎರಡಿಲ್ಲವೆಂದು ನಾವು ಹೇಳುತ್ತೇವೆ. ನಮ್ಮ ಮಾತಿಗೆ ಪ್ರತಿ ಇಲ್ಲವೆಂದು ಮಹಾರಾಜ ಹೇಳಲಿ.

ರಾಜ : ಒಪ್ಪಿದೆವು.

ಹಿರಿಯ ೩ : ಹಾಗಾದಲ್ಲಿ ಕೇಳಿ: ನಮ್ಮ ನುಡಿ ಬೇರೆ ಅಲ್ಲ, ದೈವದ ನುಡಿ ಬೇರೆ ಅಲ್ಲ. ದಿವ್ಯ ಏನೆಂದು ಮಹಾರಾಣಿಯವರೇ ನಿರ್ಧರಿಸಲಿ; ಮಹಾರಾಣಿಯವರ ವಿವೇಕದಲ್ಲಿ ನಮಗೆ ನಂಬಿಕೆ ಇದೆ.

ಭಾಗವತ : **ನಾಗಲಿಂಗನ ಮೇಲೆ ಲೀಲೆಯಲಿ ಹರವಂಥ**
**ನಾಗರಾಯನ ಕೊಳ್ಳುವೆನು ಮೈಯಮೇಲೆ**
**ಪರಿಶುದ್ಧೆಯಾಗಿದ್ದರದು ಹರಿದು ಹೋಗುವುದು**
**ಅಲ್ಲದಿರೆ ಕಚ್ಚುವುದು ಇದಕೆ ಸಮ್ಮತಿಯೆ ||**

ಸಂಪಿಗೆ : ಅಗೋ ನಾಗಲಿಂಗನ ಮೇಲೆ ಹರಿದಾಡೋ ಹಾವಿದೆಯಲ್ಲ. ಅದನ್ನು ನಮ್ಮ ಮೈಮೇಲೆ ಹಾಕಿಕೊಳ್ಳುತ್ತೇನೆ. ನಾನು ಪರಿಶುದ್ಧಳೇ ಆಗಿದ್ದರೆ ಅದು ಕಚ್ಚದೆ ಮೈಮೇಲೆ ಹರಿದು ಸರಿದು ಹೋಗುತ್ತದೆ. ಅದಿಲ್ಲ, ಕಚ್ಚಿ ವಿಷವಾಗುತ್ತದೆ. ಈ ದಿವ್ಯದಲ್ಲಿ ಸತ್ಯಪರೀಕ್ಷೆಯೂ ಇದೆ, ಶಿಕ್ಷೆಯೂ ಇದೆಯಾಗಿ ಒಪ್ಪಿಗೆಯೋ?

ಹಿರಿಯರು : ಒಪ್ಪಿದೆವು.

ತಾಯಿ : ಬಾ ಮಗಳೆ....

ಭಾಗವತ : **ಮುಗಿದು ಕೈಗಳ ತಲೆಯಲಿಟ್ಟಳು**
**ನಾಗಲಿಂಗನ ಮುಂದೆ ಬಂದಳು**
**ಬಾಗಿ ವಂದಿಸಿ ಲಿಂಗವನು ಬಲಗೊಂಡು ಭಕ್ತಿಯಲಿ ||**

**ನೀಗಿ ಭಯವನು ಕೈಯ ನೀಡುತ**
**ನಾಗನೇ ಕಾಪಾಡು ಸತ್ಯವ**
**ಚಾಂಗು ಭಲೆ ಎಂದೆನುತಕೊಂಡಳು ಹಾವ ಮೈಮೇಲೆ||**

**ಸಖ್ಯವಿದ್ದಿತೆ ಹಾವಿಗಿವಳಿಗು**
**ಸತ್ಯ ತಿಳಿಯಿತೆ ಮೂಕ ಪ್ರಾಣಿಗು**
**ಮುತ್ತುಗಳ ಮಳೆ ಸುರಿಸಿ ರಾಣಿಯ ಪರವಶವಗೊಳಿಸಿ ||**

**ಹೆಡೆಯ ತೆರೆದಾಡಿತ್ತು ಮೈಯಲಿ**
**ಹೆಡೆ ಮಣಿಯ ಬೆಳಕಾಡಿಸುತ್ತಲಿ**
**ಜಡೆಯ ಜೊತೆ ಹೆಣೆದಾಡಿ ಗರ್ಭದ ತಟ್ಟಿ ನಲಿದಾಡಿ ||**

**ಹೆಡೆಯ ದೀಪದ ಮುಂದು ಮಾಡುತ**
**ತೊಡೆಯ ಇಳಿಜಾರಿನಲಿ ಜಾರುತ**
**ಒಡೆಯ ಶಿವಲಿಂಗವನು ಹುಡುಕುತ ಸಾಗಿ ಹೋಯಿತಲ ||**

**ಚಿತ್ರವಾದರು ಎಲ್ಲ ಜನರು ವಿ**
**ಚಿತ್ರ ಸಂಗತಿ ಕಂಡೆವಲ್ಲ ಸ–**
**ಚಿತ್ರವಾಯಿತು ಸತ್ಯ ರಾಣಿಯ ದಯದಿ ನಮಗೆಲ್ಲ ||**

**ಜಯ ಜಯಾ ಮಹಾರಾಣಿ ದೇವಿಗೆ**
**ಜಯವು ತಾಯಿಯ ಸತ್ಯ ಗರ್ಭಕೆ**
**ಕುಲಕೆ ಜನ ಜಯವೆಂದು ಬಾಗಿದರೆಲ್ಲ ಸಂಪಿಗೆಗೆ ||**

*ರಾಜಕುಮಾರ ಅವಸರದಲ್ಲಿ ನಾಗಲಿಂಗನ ಬಳಿಯ ನಾಗನ ಹತ್ತಿರ ಹೋಗುವನು. ಅದಲ್ಲಿ ಈಗ ಇಲ್ಲ. ಹುಡುಕುವನು. ಬೆರಗಾಗಿ ನಿಲ್ಲುವನು.*

ತಾಯಿ : ಪವಾಡ ಮೆರೆದು ದೇವತೆಯಾದೆ ಮಗಳೇ.

ಹಿರಿಯ ೧ : ಭೂಲೋಕದ ಕೀರ್ತಿ ದೇವಲೋಕಕ್ಕೂ ಹಬ್ಬುವಂತೆ ಮಾಡಿದೆ ತಾಯಿ. ನಮ್ಮ ನಾಡು ಧನ್ಯವಾಯಿತು.

ಹಿರಿಯ ೨ : ಮಹಾರಾಣಿಯವರಿಗೆ ನೂರು ಜಯವಾಗಲಿ. ಮಹಾರಾಣಿಯವರ ಸತ್ಯಕ್ಕೆ ಸಾವಿರ ಜಯವಾಗಲಿ. ಮಹಾರಾಣಿಯವರ ಪಾದ ಮೂಡಿದಲ್ಲಿ ಗುಡಿ ಗುಂಡಾರಗಳೇಳಲಿ.

*ಎಲ್ಲರೂ ಕೈಮುಗಿದು ತಾಯಿಯ ಬಳಿಗೆ ಹೋಗಿ ನಮಸ್ಕರಿಸುವರು. ತಾಯಿಯ ಜೊತೆ ಹೊರಟ ಸಂಪಿಗೆಗೆ ಜಯಜಯಕಾರ ಹೇಳುತ್ತ ಎಲ್ಲರೂ ಹೋಗುವರು. ರಾಜ ಮಾತ್ರ ಉಳಿದು 'ಇದು ಮೋಸ ಮೋಸ' ಎನ್ನುತ್ತಾನೆ.*

## ದೃಶ್ಯ ೧೨

*ಅವಳಿ ಒಬ್ಬನೇ ಅಳುತ್ತಿದ್ದಾನೆ.*

ಭಾಗವತ : **ಅಣ್ಣ ಇಲ್ಲವೆ ತಮ್ಮ ಸತ್ತನು**
**ಕಾಣೆನಲ್ಲಾ ಬದುಕಿನರ್ಥವ**
**ಇನ್ನು ನಾನಿರಲಾರೆನೆನ್ನುತ ಅವಳಿ ಅಳುತ್ತಿದ್ದ ||**

ಅವಳಿ : *(ಅಳುತ್ತಾ)* ಅಯ್ಯೋ ನನ್ನ ಅಣ್ಣ ಅಥವಾ ತಮ್ಮ ಸತ್ತು ಹೋದ. ನಾ ಈಗ ಒಂಟಿ ಆದೆನಲ್ಲಪ್ಪೋ. ನನಗೆ ಹತ್ತಿರದವರು ಹೊಂದಿದವರು ಯಾರು ಇಲ್ಲವಲ್ಲೋ ದೇವರೇ.

ರಾಜ : ಯಾರದು ವಿಕಾರವಾಗಿ ಅಳುತ್ತಿರುವುದು?

ಅವಳಿ : ನಾನು ಅವಳಿ.

ರಾಜ : ಯಾಕಯ್ಯಾ ಒಬ್ಬನೇ ಅಳ್ತಾ ಇದ್ದೀಯಾ?

ಅವಳಿ : ಯಾಕಂದ್ರೆ, ನಾನೊಬ್ಬನೇ ಇದ್ದೀನಿ ಅದಕ್ಕೆ.

ರಾಜ : ಜವಳಿ ಎಲ್ಲಿ ಹೋದ?

ಅವಳಿ : ಸತ್ತು ಹೋದ.

ರಾಜ : ಸತ್ತು ಹೋದ ? ಯಾವಾಗ? ಏನಾಗಿತ್ತು.

ಅವಳಿ : ಊರ ಹೊರಗಿನ ಆಲದ ಮರದಡಿ ಒಂದು ಹುತ್ತ ಇದೆಯಲ್ಲ. ಅಲ್ಲಿಗೆ ಲಿಂಗಪೂಜೆ ಮಾಡೋದಕ್ಕೆ ಕಮಲಳ ಜೊತೆ ಹೋಗಿದ್ದ.

ಭಾಗವತ : ದುರಾಸೆಯಿಂದ ಪ್ರೇರಿತನಾಗಿ ಮಡಕೆ ಹಾಲು ತಗೊಂಡು ಇವನೂ ಅಲ್ಲಿಗೇ ಹೋಗಿ ಹೊಂಚಿ ಕೂತಿದ್ದ.

ಅವಳಿ : ಹಾಗಲ್ಲ, ಶಿವಲಿಂಗಕ್ಕೆ ಹಾಲೆರೆಯೋಣ ಅಂತ ಹೋದದ್ದು.

ರಾಜ : ಮುಂದೆ?

ಅವಳಿ : ಪೂಜೆ ಮುಗಿಸಿದ ಮೇಲೆ ಕಮಲು ಲಿಂಗದ ಮೇಲಿನ ಮಲ್ಲಿಗೆ ಮಾಲೆಯನ್ನು ಜವಳಿಯ ಕತ್ತಿಗೆ ಹಾಕಿದಳು. ಮಾಲೆ ಹಾಕ್ಕಿದ್ದೇ ತಡ ಜವಳಿ ಸರ್ಪವಾಗಿ ಮಾರ್ಪಾಡಾದ.

ರಾಜ : ಸುಳ್ಳು ಹೇಳಬೇಡ.

ಅವಳಿ : ಸುಳ್ಳು ಹೇಳುತ್ತಿಲ್ಲ, ಬೇಕಾದರೆ ಭಾಗವತರನ್ನು ಕೇಳಿ.

ಭಾಗವತ : ಜವಳಿ ಸರ್ಪವಾಗಿ ಮಾರ್ಪಾಡಾದ್ದು ನಿಜ; ಹಾಗೆಂದು ಕುಲದೇವರ ಅಪ್ಪಣೆಯಿತ್ತು.

ಅವಳಿ : ಸರ್ಪವಾದವನೇ ಕಮಲಳ ಜೊತೆ ಸರಸವಾಡಲಿಕ್ಕೆ ಸುರು ಮಾಡಿದ. ಮುಂದೆ ಯಾವುದನ್ನು ನಾಚಿಕೆಯಿಂದ ನಾನು ಹೇಳಲಾರೆನೋ ಅದನ್ನೂ ಮಾಡತೊಡಗಿದ. ಬರಬರುತ್ತ ತಗ್ಗಿಗೆ ನುಗ್ಗುವ ಪ್ರವಾಹದಂತೆ ಸುಖದ ವೇಗ ಜಾಸ್ತಿಯಾಗಿ ಇಬ್ಬರೂ ಏದುಸಿರು ಬಿಡತೊಡಗಿದರೂ. ದಣಿದು ಹಸಿದವರಿಗೆ ಒದಗಲೆಂದು ಪಕ್ಕದಲ್ಲಿ ಒಲೆಹೂಡಿ ಮಡಕೆಯ ಹಾಲು ಕುದಿಯಲಿಟ್ಟು ಕುಳಿತೆ. ಹಾಲು ಬಿಸಿಯಾಗಿ ಕುದಿಯತೊಡಗಿತು. ಕುದ್ದು ಹಾಲು ಉಕ್ಕತೊಡಗಿತು. ಉಕ್ಕಿದ ಹಾಲಿನ ವಾಸನೆ ಹುತ್ತದಲ್ಲೆಲ್ಲಾ ವ್ಯಾಪಿಸಿ, ಕಮಲುವಿನ ಒಳಗಿದ್ದ ಸರ್ಪಕ್ಕೆ ತಾಗಿ ಮೆಲ್ಲನೆ ಹೊರಬಂತು. ಹಸಿದುದರಿಂದ ಹೆಡೆಯೆತ್ತಿ ಮಡಕೆಗೇ ಬಾಯಿ ಹಾಕಿತು. ಬಾಯಿ ಸುಟ್ಟು ಒದ್ದಾಡಿ ಒದ್ದಾಡಿ ಸುತ್ತು ಬಿತ್ತು.

ಭಾಗವತ : ಹಸೀ ಸುಳ್ಳು ಪ್ರಭು. ಇವನು ಮಾಡಿದ್ದು ಕೊಲೆ.

ಅವಳಿ : ಇರಬಹುದು, ಆದರೆ ಬೇಖುಬರಾಗಿ ಬಿದ್ದ ಕಮಲುವನ್ನು ಅವನು ಕೊಲೆ ಮಾಡಬಹುದೆಂದು ಅನ್ನಿಸಿ ಹಾಗೆ ಮಾಡಿದ್ದು.

ಭಾಗವತ : ಇದೂ ಸುಳ್ಳು. ಅಸೂಯೆ ಮತ್ತು ಕೋಪಗಳಿಂದ ಕುರುಡನಾಗಿದ್ದ ನೀನು ಇದೇ ಸಮಯವೆಂದು ಬಾಯಿ ಸುಟ್ಟು ಒದ್ದಾಡುತ್ತಿದ್ದ ಹಾವನ್ನು ಮಚ್ಚಿನಿಂದ ಕೊಚ್ಚಿ ಹಾಕಿದೆ.

ಅವಳಿ : (ಅಳುತ್ತ) ಅಯ್ಯೋ! ತಮ್ಮಣ್ಣ ಜವಳಿಯನ್ನು ಕೈಯಾರೆ ಕೊಂದೆನಪ್ಪೋ….

ರಾಜ : ಅಳಬೇಡ, ಮುಂದೇನಾಯಿತು ಹೇಳು - ಸಂಪಿಗೆಯೇನು ಮಾಡಿದಳು?

ಅವಳಿ : ಸಂಪಿಗೆಯಲ್ಲ, ಕಮಲು. ಹೊರಗೆ ಹೀಗೆ ಭಾರಿ ಭಾರಿ ಅಘಟಿತಗಳು ಘಟಿಸುತ್ತಿರಬೇಕಾದರೆ ಆಕೆಯಿನ್ನೂ ಸುಖದ ಮತ್ತಿನಲ್ಲಿ ಮೈಮರೆತು ಕಣ್ಣು ಮುಚ್ಚಿದ್ದಳು. ಸರ್ಪದ ತುಂಡುಗಳನ್ನು ಮಡಕೆಯಲ್ಲಿ ತುಂಬಿ ಹೊರಕ್ಕೆಸೆದು ಬಂದೆ. ಚೆಲ್ಲಾಡಿದ ನೆತ್ತರನ್ನ ಸ್ವಚ್ಛಮಾಡಿ ಕಮಲುವನ್ನೆಬ್ಬಸಿ 'ಮನೆಗೆ ಹೋಗೋಣ ನಡೆ'ಎಂದು ಮಧುರ ನುಡಿದೆ. ನನ್ನನ್ನವಳು ಜವಳಿಯೆಂದೇ ತಿಳಿದು ಮೆಲ್ಲನೆ ನಡೆಯತೊಡಗಿದಳು. ಅಷ್ಟು ದೂರ ಬರುವಷ್ಟರಲ್ಲಿ ಆಯಾಸವೆಂದು ಕೂತಳು. ತುಸು ಹೊತ್ತಿನಲ್ಲೇ ಎದ್ದು ಮತ್ತೆ ನಡೆದಳು. ನೋಡುತ್ತೇನೆ - ಅವಳು ಕೂತು ಎದ್ದಲ್ಲೊಂದು ಮೊಟ್ಟೆ ಹಾಕಿದ್ದಾಳೆ! ಹಾವಿನ ಸಂತಾನವೆಂಬ ಕೋಪದಿಂದ ಮೊಟ್ಟೆಯನ್ನು ಹೊಸಕಿಹಾಕಿದೆ.

ಭಾಗವತ : ಜವಳಿ ಮೇಲಿನ ಅಸೂಯೆಯಿಂದ ನೀನು ಹಾಗೆ ಮಾಡಿದ್ದು.

ಅವಳಿ : ಮಾಡಿದವನಿಗಿಂತ ನೋಡಿದವನಿಗೇ ಚೆನ್ನಾಗಿ ತಿಳಿದಿರುವಂತಿದೆ. ಹಾಗಿದ್ದರೆ ನೀವೇ ಹೇಳಿ.

ರಾಜ : ಹೇಳಿ ಭಾಗವತರೇ.

ಭಾಗವತ : ಹಾಗೆಯೇ ಎರಡನೆಯ ಮೊಟ್ಟೆಯನ್ನೂ ಹೊಸಗಿದ. ಮೂರನೆಯದನ್ನು ಹೊಸಕಿದಾಗ ಮಾತ್ರ ಕಮಲಳಿಗೆ ಗೊತ್ತಾಯಿತು. ಗೊತ್ತಾದದ್ದೆ ತಡ ಅವಳ ಕಣ್ಣಲ್ಲಿಯ ತೃಪ್ತಿ ಮತ್ತು ಸುಖ ಮಾಯವಾಗಿ ಏಳೇಳು ಲೋಕದ ಭಾರೀ ಕೋಪಗಳಿಂದ ಗದಗದ ನಡುಗತೊಡಗಿದಳು. ಮೂಗಿನಲ್ಲಿಯ ಮುತ್ತಿನ ಮೂಗುತಿ ಸಿಡಿದುಬಿತ್ತು. ನಡುಗುತ್ತಿದ್ದ ಮೊಲೆಗಳಿಂದ ಕಣ್ಣೀರಿನಂತೆ ಒಂದೇ ಸಮನೆ ಹಾಲು ಸೋರಿ ಕುಬಸ ಒದ್ದೆಯಾಯಿತು. ವಿಕಾರವಾಗಿ ದನಿ ತೆಗೆದು ಕಿರಿಚಿ "ನನ್ನ ಸಂತಾನ ಸವರಿದೆಯಲ್ಲೋ ಚಂಡಾಲ" ಎಂದು ಹೇಳುತ್ತ ಹಾಲು ಜಿನುಗುತ್ತಿದ್ದ ಎರಡೂ ಮೊಲೆಗಳನ್ನು ಪ್ರಯಾಸದಿಂದ ಕಿತ್ತು ಇವನ ಮೇಲೆಸೆದು ಕಾಡಿನಲ್ಲಿ ಕಣ್ಮರೆಯಾದಳು. ನೋಡಲಾರದೆ ಸೂರ್ಯ ಕೂಡಲೇ ಅಸ್ತಂಗತನಾದ.

ಅವಳಿ : *(ಅಳುತ್ತ)* ನಾನೀಗ ಒಂಟಿಯಾದೆನಪ್ಪೋ….

ರಾಜ : ಅಳಬೇಡ. ನಿನಗೂ ಅವನನ್ನು ಕೊಲ್ಲಬೇಕಾಗಿತ್ತಲ್ಲವೇ?

ಅವಳಿ : ಹೌದು.

ರಾಜ : ಸತ್ತುಹೋದ. ಒಳ್ಳೆಯದಾಯಿತಲ್ಲ.

ಅವಳಿ : ಅವನು ಇರೋತಕ ಕೊಲ್ಲಬೇಕೆನಿಸಿತ್ತು. ಅವನು ಯಾವಾಗಲೂ ಅಕ್ಕ, ಇಲ್ಲವೇ ಪಕ್ಕ, ಇಲ್ಲವೇ ಹಿಂದೆ ಇಲ್ಲವೇ ಮುಂದೆ, ಇಲ್ಲವೇ ದೂರ ಇಲ್ಲವೇ ಸಮೀಪ ಇರುತ್ತಿದ್ದ. ಈಗ ಅವನಿಲ್ಲವಾದ್ದರಿಂದ ನಾನು ಅರ್ಧ ಆದೆ. ಅದಕ್ಕೇ ನಾನು ಸಾಯಬೇಕಂತ ಅನ್ನಿಸುತ್ತಿದೆ. ನಾನು ಒಂಟಿ.

ರಾಜ : ಅಯ್ಯಾ ಮಹಾರಾಜ.

ಅವಳಿ : ಮಹಾರಾಜ?

ರಾಜ : ಗಾಬರಿಯಾಗಬೇಡ. ನಿನ್ನನ್ನು ನಾನೇ ಅಂದುಕೊಂಡೆ. ನೀನು ಪುಣ್ಯವಂತನಯ್ಯಾ -ಒಂಟಿಯಾಗಿದ್ದೀಯಾ. ನನ್ನ ನೋಡು ಒಂಟಿಯಾಗಿ ಒಬ್ಬನೇ ಕೂತಾಗಲೂ ನನ್ನ ಬದಿಗೆ ಯಾರೋ ನನ್ನಂಥವನೇ ಒಬ್ಬ ಕೂತ ಹಾಗೇ ಅನ್ನಿಸುತ್ತದೆ. ನನ್ನ ದೇಹದಲ್ಲಿ ಅಲೆದಾಡುತ್ತಾ, ನನ್ನ ದನಿಯಲ್ಲಿ ಮಾತಾಡುತ್ತ ನನ್ನನ್ನು ಕದ್ದುಕೊಂಡು ಓಡಾಡುತ್ತಿದ್ದ ಅವನು ಮನುಷ್ಯನಲ್ಲ ಕನ್ನಡಿ ಅಂತಿದ್ದೆ. ಆದರೆ ಕನ್ನಡಿಗಿಂತ ಹೆಚ್ಚು. ಯಾಕೆಂದರೆ ಕನ್ನಡಿ ಮಾತಾಡೋದಿಲ್ಲ. ಅವನು ಮಾತಾಡುತ್ತಾನೆ. ಕನ್ನಡಿ ತಂತಾನೇ ಅಲುಗೋದಿಲ್ಲ. ಅವನು ನನ್ನ ಹಂಗಿಲ್ಲದೆ ಅರಮನೆ ತುಂಬಾ ಅಲೆದಾಡುತ್ತಾನೆ. ಗುಟ್ಟು ಹೇಳಿರುತ್ತೇನೆ. ಯಾರ ಮುಂದೆ ಹೇಳಬೇಡ. ಅವನು ನನ್ನ ಹೆಂಡತಿಯ ಹಾಸಿಗೆಯಲ್ಲೂ ಕದ್ದು ನುಸುಳಿದ್ದಾನೆ. ಇರು, ಕೇಳಿದೆಯಾ, ಅಂತಃಪುರದಿಂದ ನಿನಗವನ ಮಾತು ಕೇಳಿಸಿತಾ?

ಅವಳಿ : ಹೌದು. ಅಂತಃಪುರದಲ್ಲಿ ಯಾರೋ ಗಂಡಸಿನ ಧ್ವನಿ ಕೇಳಿಸುತ್ತಾ ಇದೆ.

ರಾಜ : ಗಲಾಟೆ ಮಾಡಬೇಡ. ಮಹಾರಾಣಿ ತನ್ನ ಕಣ್ಣಿನ ಬೆಳಕಿನಿಂದ ಅವನ ಮುಖ ಒರೆಸುತ್ತ ಅವನ ಪಾಪದ ಕಲೆ ತೊಳೆಯುತ್ತಿದ್ದಾಳೆ- ಅವರಿಬ್ಬರ ಕೊನೇ ಗಳಿಗೆ ಪವಿತ್ರವಾಗಿರಲಿ ಅಂತ. ನಾನೋ ಹಗಲು ರಾತ್ರಿ ಮನಸ್ಸಿನಲ್ಲಿ ಅವರ ಪಾಪ ನೆನೆಯುತ್ತಾ, ಪರಿತಪಿಸುತ್ತ ಅವನ ನೆತ್ತರಿಗಾಗಿ ಹಪಾಪಿಯಾಗಿ ಹಾರೈಸುತ್ತ ಅಲೆದಾಡುತ್ತಿದ್ದೇನೆ.

ಅವಳಿ : ವೈರಿಯ ಸೆರೆ ಹಿಡಿಯಲಿಕ್ಕೆ ಸೇವಕರನ್ನು ಕರೆತರಲೇ?

ರಾಜ : ಹೋಗು, ಆದರೆ ಮೆಲ್ಲಗೆ ಹೋಗಿ ಕರೆದು ತಾ.

## ದೃಶ್ಯ ೧೩

*ತೊಟ್ಟಿಲ ಕೂಸನ್ನು ಸಂಪಿಗೆ ತೂಗುತ್ತಿದ್ದಾಳೆ. ಕಾಳಿಂಗನೂ ಇದ್ದಾನೆ.*

ಭಾಗವತ : **ಸಿರಿಸಂಪಿಗೆಯವಳ ಕಂದನ ನೋಡಿ**
**ನುಡಿಸಿಬರುವೆನು ಎನುತ ನಾಗನು**
**ಬೇಲಿ ದಾಟುತ ಬಂದನು.**

ಕಾಳಿಂಗ : ಮಾತಾಡೋದಿಲ್ಲವೇ ಸಂಪಿಗೆ?

ಸಂಪಿಗೆ : ಯಾಕೆ ಬಂದೆ? ರಾಜರಿಗೆ ಸಂದೇಹ ಬಂದು ಸರೋವರಕ್ಕೆ ಹೋಗೋದನ್ನು ಬಿಟ್ಟು ಸೇವಕರ ಹಾಗೆ ಕಾವಲು ಕಾಯುತ್ತಿದ್ದಾರೆ. ಗೊತ್ತಾಗೋದಿಲ್ಲವೆ?

ಕಾಳಿಂಗ : ನಿನ್ನೊಂದಿಗೆ ಮಾತಾಡುವುದಿತ್ತು.

ಸಂಪಿಗೆ : ಮಾತಾಡಿಯಾಯ್ತಲ್ಲ.

ಕಾಳಿಂಗ : ಕೂಸಿನ ಮುಖ ನೋಡೋಣ ಅನ್ನಿಸಿತು.

ಸಂಪಿಗೆ : ಇಕೋ ಕೂಸಿನ ಮುಖ, ಇನ್ನು ಹೊರಡು.

ಕಾಳಿಂಗ : ಒಂದೇ ಒಂದು ಗಳಿಗೆ ಮಾತಾಡುವುದಕ್ಕೆ ಅವಕಾಶ ಕೊಡು ಸಂಪಿಗೆ; ಏನಾಗಿದೆ ನೋಡು ನನಗೆ. ಕಣ್ಣ ಕಡೆ ನಿದ್ದೆ ಸುಳಿಯುತ್ತಿಲ್ಲ. ನನ್ನ ರಾಜ್ಯದ ಸೀಮೆ ಎಲ್ಲಿ ಅಂತ ಗೊತ್ತಿಲ್ಲ. ಎಲ್ಲ ಮರೆತು ನನ್ನ ಕಡೆ ಒಂದು ಬಾರಿಯಾದರೂ ನೋಡುತ್ತಾಳೋ ಅಂತ ಕೂತಿರುತ್ತೇನೆ. ನನ್ನನ್ನು ಹೊರತುಪಡಿಸೋದಕ್ಕೆ ದಿನ ದಿನಕ್ಕೆ ನಿನ್ನ ಕೋಟೆಯ ಗೋಡೆ ಎತ್ತರವಾಗುತ್ತಲೇ ಇದೆ.

ಸಂಪಿಗೆ : ನನಗೂ ನನ್ನ ಜವಾಬ್ದಾರಿ ಮತ್ತು ಮರ್ಯಾದೆ ಇವೆ, ಕಾಳಿಂಗಾ. ದಯಮಾಡಿ ಹೊರಡು.

ಕಾಳಿಂಗ : ಜ್ಞಾಪಿಸಿಕೊ ದೇವಿ, ನಿನ್ನ ಜಡೆಯೊಂದಿಗಾಡಿದ ಕರಿ ಹುಡುಗನನ್ನ ಜ್ಞಾಪಿಸಿಕೋ ಒಮ್ಮೆ ಕಾಳಿಂಗನಾಗು ಅಂತಿದ್ದೆ. ಇನ್ನೊಮ್ಮೆ ರಾಜನಾಗು ಅಂತಿದ್ದೆ. ಎರಡನ್ನೂ ಬಳಸಿ ಗರ್ಭದ ವಿದ್ಯುತ್ಪಾತ್ರೆಯನ್ನ ಹೊತ್ತಿಸಿಕೊಂಡೆ. ನವಿರು ಮಾತುಗಳಿಂದ ನನ್ನ ಮನ ಒಲಿಸಿ ದಿವ್ಯ ಗೆದ್ದೆ. ಈಗ ಕೊಳ್ಳಿಯ ಹಾಗೆ ಬಳಸಿ ಬಿಸಾಕ ಬೇಕಂತೀಯಲ್ಲವೆ?

ಸಂಪಿಗೆ : ನಾನೆಂದರೆ ಬರೀ ದೇಹದ ಸರಕು ಅಲ್ಲ ಕಾಳಿಂಗಾ. ಈ ಕೂಸು ನಿನ್ನ ಅಹಂಕಾರಕ್ಕೆ ಹುಟ್ಟಿದ ಸಂತಾನವಾಗಿರಬಹುದು. ಆದರೆ ನನಗಿದು ನೀನು ಮಾಡಿದ ಗಾಯ.

ಕಾಳಿಂಗ : ನಿನ್ನನ್ನು ಅರ್ಥಮಾಡಿಕೊಳ್ಳುವುದು ಕಷ್ಟ ಹೆಣ್ಣೆ.

ಸಂಪಿಗೆ : ಈಗ ನಿನ್ನ ಪ್ರಾಣದ ಬಗೆಗಿನ ಕಾಳಜಿಯಿಂದ ಹೇಳುತ್ತೇನೆ - ಬೇಗನೆ ಪಾರಾಗಿ ಹೋಗು.

ಕಾಳಿಂಗ : ಕಡೆಯ ಬಾರಿ ನಿನಗೊಂದು ಮಾತು ಹೇಳಿ ಹೋಗೋಣ ಅಂತ ಬಂದೆ. ಈ ಮಾತು ಹೇಳದಿದ್ದರೆ ನನಗೆ ಸಾಯುವುದಕ್ಕೂ ಸಾಧ್ಯವಾಗುವುದಿಲ್ಲ.

ಸಂಪಿಗೆ : ಏನಿಂಥಾ ಮಾತಾಡುತ್ತೀಯಾ?

ಕಾಳಿಂಗ : ನಿಜ ಸಂಪಿಗೆ. ನನಗೆ ನಿನ್ನ ಬಿಟ್ಟು ಯಾರಿದ್ದಾರೆ? ಈ ಮಾತು ಕೇಳಲೇಬೇಕು.

ಸಂಪಿಗೆ : ಹೆದರಿದ್ದೀಯಾ ಕಾಳಿಂಗ?

ಕಾಳಿಂಗ : ಯಾರಿಗೆ, ರಾಜನಿಗೆ? ಅವನನ್ನು ಕಂಡರೆ ನನಗೆ ಸಿಟ್ಟು ಬರೋದೇ ಇಲ್ಲ. ಯಾಕಂತ ಗೊತ್ತಿಲ್ಲ. ನನ್ನ ಕರುಳಿನ ಕೊನೆಯೊಂದು ಆತನಲ್ಲಿ ಮುಂದುವರಿದಿದೆ ಎಂದು ಅನಿಸುತ್ತದೆ. ಪೂರ್ವಜನ್ಮದಲ್ಲಿ ನಾವಿಬ್ಬರೂ ಅಣ್ಣತಮ್ಮ ಆಗಿದ್ದೇವೋ ಏನೋ.

ಸಂಪಿಗೆ : ಅದೇನೋ ಹೇಳಬೇಕೆಂದೆಯಲ್ಲ. ಹೇಳು ಕೇಳುತ್ತೇನೆ.

ಭಾಗವತ : **ಬಲು ಭೀಕರ ನೆರಳು ನನ್ನ**
**ಕಾಡುತಿರುವುದೇ | ಚೆನ್ನೆ**
**ಗರುಡನೊಬ್ಬ ಹೊಂಚಿ ನನ್ನ**
**ಕಾಯುತಿರುವನೇ ||**

ಕಾಳಿಂಗ : ಕೇಳು ಸಂಪಿಗೆ. ಇಷ್ಟು ದಿವಸ ನಿನ್ನ ಜೊತೆ ಹ್ಯಾಗಿದ್ದೇನೆ ಅಂತ ಆಶ್ಚರ್ಯವಾಗುತ್ತಿದೆ. ನಿನ್ನ ಆಚೆಗಿನ ಯಾವುದೋ ನೆರಳನ್ನು ನಾನು ಬಯಸುತ್ತಿದ್ದೆ ಅಥವಾ ಅದನ್ನ ನೋಯಿಸಿದ್ದೇನೆ ಅಂತ ಅನ್ನಿಸುತ್ತಿದೆ. ನಿನ್ನನ್ನು ಸೇರಿದಾಗೆಲ್ಲ ನಿನ್ನಾಚೆಗಿನ ಆ ನೆರಳು ಬಂದು ಅಣಕಿಸುತ್ತದೆ. ದೇಹದ ಕ್ಷಣಿಕ ಸುಖದಲ್ಲಿ ಅದನ್ನು ಇಷ್ಟು ದಿನ ಮರೆತಿದ್ದೆ. ಇಬ್ಬರ ಮಧ್ಯೆ ಗಾಳಿ ಕೂಡ ಸುಳಿಯದ ಹಾಗೆ ತಬ್ಬಿಕೊಳ್ಳಬೇಕೆನ್ನುತ್ತೇನೆ. ಆದರೆ ಇಬ್ಬರ ಮಧ್ಯೆ ಅಗಾಧವಾದ ಖಾಲಿ ಅವಕಾಶ ಉಳಿಯುತ್ತದೆ. ಅದರಲ್ಲಿ ಆ ಕರೀ ನೆರಳು ಕಾಣಿಸಿಕೊಂಡು ಕೈ ಮಾಡಿ ಕರೆಯುತ್ತದೆ. ಮೊದಲಾದರೆ ದೇಹ ಕಾಣಿಸುತ್ತಿತ್ತು. ಈಗ ನೆರಳನ್ನು ಬಿಟ್ಟು ಬೇರೇನೂ ಕಾಣಿಸುವುದಿಲ್ಲ. ನಮ್ಮಿಬ್ಬರಲ್ಲಿ ಆ ನೆರಳು ನಿಜ ಅನ್ನಿಸುತ್ತದೆ.

ರಾಜ : *(ಹೊರಗಿನಿಂದ)* ಎಲ್ಲಾ ಬಂದೋಬಸ್ತ್ ಮಾಡಿ. ಕಿಟಕಿ ಕಿಂಡಿಗಳಿದ್ದಲ್ಲೆಲ್ಲ ಒಬ್ಬೊಬ್ಬ ಸೈನಿಕ ಆಯುಧ ಹಿರಿದು ನಿಂತಿರಲಿ. ಶತ್ರು ತನಗೆ ಬೇಕಾದಾಗ ಬೇಕಾದ ಆಕಾರ ಧರಿಸಬಲ್ಲ ಮಾಯಕಾರ ಎನ್ನುವುದು ನೆನಪಿರಲಿ. ದೇವೀ ಬಾಗಿಲು ತೆರೆ.

ಕಾಳಿಂಗ : ಈಗ ನನ್ನ ಮನಸ್ಸು ಹಗುರವಾಯ್ತು. ಹೋಗುತ್ತೇನೆ ದೇವಿ. ಬಾಗಿಲು ತೆಗೆ.

ಸಂಪಿಗೆ : ನಾನು ಜೋಗುಳ ಹಾಡುತ್ತ ನಿಧಾನವಾಗಿ ಬಾಗಿಲು ತೆರೆಯುತ್ತೇನೆ. ನೀನು ಬಚ್ಚಲ ಹರಿಯಿಂದ ಪಾರಾಗಿ ಹೋಗು. ಆ ಕಡೆ ಯಾರು ನಿಂತಿಲ್ಲ.

**ಏಳೇಳು ಹೆಡೆಗಳ ನಾಗರಹಾವೇ**
**ಹೆಡೆಗೊಂದು ರತ್ನದ ಹರಳಿಟ್ಟ ಹಾವೇ**
**ಮುಡಿದ | ಮಲ್ಲಿಗೆಯ ಜಡೆಯಲ್ಲಿ**
**ನಿದ್ರಿಸುವ ಹಾವೇ ಜೋ ಜೋ**
**ಜೋ ಜೋ ನಮ್ಮ ನಾಗರ ರಾಯಾ ಜೋ ಜೋ ||**

## ದೃಶ್ಯ ೧೪

*ಅವಳಿ ಮತ್ತು ರಾಜ*

ಭಾಗವತ : **ತೆರೆಯ ಬಾಗಿಲು ಜಾರೆಯೇ ತೆರೆ**
**ಯಾರ ಜೊತೆಯಲಿ ಸರಸವಾಡುವೆ**
**ದುರಳನಾತನ ತರಿವೆನೆನ್ನುತ ರಾಜ ಗರ್ಜಿಸಿದ ||**

ಅವಳಿ : ಬಾಗಿಲು ತೆರೆದರೆ ಒಳಗೆ ಯಾರೂ ಇರಲಿಲ್ಲ. ನಿನ್ನ ಆಜ್ಞೆಯಂತೆ ಮೂಲೆ ಮೂಲೆ ಹಿಡಿದರೂ ಸಿಕ್ಕಲಿಲ್ಲ.

ರಾಜ : ಒಳಗಡೆಯಿಂದ ಒಂದು ಕ್ರಿಮಿಯೂ ಹೊರಗೆ ಹೋಗಲಿಲ್ಲವೆ?

ಅವಳಿ : ಒಂದು ಸರ್ಪಮಾತ್ರ ಬಚ್ಚಲ ಹರಿಯಿಂದ ಪಾರಾಗಿ ಹೋಯ್ತು. ಮನುಷ್ಯರ ಬೇಟೆಗೆಂದು ಸಿದ್ಧರಾದ ನಾವು ಹಾವನ್ನ ಬೆನ್ನಟ್ಟಿದರೆ ವೈರಿ ಪಾರಾಗಬಹುದೆಂದು ಅದರ ಕಡೆ ಹೋಗಲಿಲ್ಲ.

ರಾಜ : ಹಾವು ಹ್ಯಾಗಿತ್ತು?

ಅವಳಿ : ಉದ್ಯಾನವನಕ್ಕಿಳಿದದ್ದೇ ಎಳೆಎಳೆಯಾಗಿ ನದಿಯಂತೆ ಹರಿಯಿತು. ಮಧ್ಯೆ ಮಧ್ಯೆ ತನ್ನನ್ನು ಯಾರಾದರೂ ನೋಡಿದರೇನು ಗತಿ ಎಂದು ಯೋಚಿಸುವಂತೆ ಸುತ್ತ ಹೆಡೆ ಆಡಿಸಿ ನೋಡಿತು. ಹೆಡೆ ಮಾತ್ರ ಭವ್ಯವಾಗಿತ್ತು.

ರಾಜ : ಉಂಡ ಸುಖದ ನೆನಪು ಅದರ ಕಣ್ಣಲ್ಲಿ ಮಿಂಚುತ್ತಿರಲಿಲ್ಲವೆ?

ಅವಳಿ : ನಮಗದರ ಕಣ್ಣು ಕಾಣಲಿಲ್ಲ ಮಿತ್ರಾ.

ರಾಜ : ಕೊನೇಪಕ್ಷ ಅದು ದೇವಲೋಕದಲ್ಲಿ ಹುಟ್ಟಿದ್ದೆಂದು ನೋಡಿದ ತಕ್ಷಣ ಅನ್ನಿಸಲಿಲ್ಲವೆ?

ಅವಳಿ : ಹೌದು, ಅದರ ನಡೆಯಲ್ಲಿ ಸಾವಿರ ಚಕ್ರವರ್ತಿಗಳ ಠೀವಿಯಿತ್ತು.

ರಾಜ : ಬಿಸಿಲಲ್ಲಿ ಹೊಳೆಯುತ್ತ ನೆಲದ ಮೇಲೆ ನಡೆಯುವ ಧೂಮಕೇತುವಿನಂತೆ ಕಾಣುತ್ತಿದ್ದಿತ್ತಲ್ಲವೇ?

ಅವಳಿ : ಹೌದು. ಪಳಪಳ ಹೊಳೆಯುತ್ತ ಗೋದಿ ಬಣ್ಣದ ಚಲನೆಗೆ ಮಿಂಚಿನ ತಲೆಯಿದ್ದಂತೆ ಅನಿಸುತ್ತಿತ್ತು. ಕಾಡಿನ ಸಾರ್ವಭೌಮನಂತೆ ಹೋಗುತ್ತ ಕತ್ತಲೆಯ ವೈಭವವನ್ನು ನಮಗೆ ಮನದಟ್ಟು ಮಾಡಿಕೊಡುವ ಹಾಗೆ ಕತ್ತಲೆಯನ್ನು ಭರ್ತಿ ತುಂಬಿಕೊಂಡ ಹುತ್ತವೊಂದರಲ್ಲಿ ಮರೆಯಾಯಿತು.

ರಾಜ : ಆ ದಿನ ಮಹಾರಾಣಿ ದಿವ್ಯ ಕೊಡುವಾಗ ಮೈಮೇಲೆ ಹಾಕಿಕೊಂಡ ಹಾವು ಅದೇ ಅಲ್ಲವೇ?

ಅವಳಿ : ಹಾಗಂತ ಹ್ಯಾಗೆ ಹೇಳಲಿ ಮಿತ್ರಾ? ಪ್ರಾಣಿಗಳ ಬಗ್ಗೆ ಖಚಿತ ಜ್ಞಾನ ನನಗಿಲ್ಲ.

ರಾಜ : ಮೂರ್ಖಾ, ನೀನು ಜವಳಿಯ ಗುಪ್ತ ಸುಖಗಳನ್ನು ಪತ್ತೆ ಹಚ್ಚವ ಹಾಗೆ ನಾನು ಆ ಹಾವಿನ ಲವಲವಿಕೆಗಳನ್ನು ಆಯಾಯಾ ಸ್ಥಳದಲ್ಲೆ ಪತ್ತೆಹಚ್ಚಬಲ್ಲೆ. ರಾಜಠೀವಿ ಎಂದಾದರೆ ದಿವ್ಯದ ದಿನ ಬಂದ ಹಾವು ಅದೇ ಎನ್ನುವುದರಲ್ಲಿ ಸಂದೇಹವಿಲ್ಲ. ದಿವ್ಯದ ಹಾವು ಅದೇ ಎಂದಾದರೆ ಅವನೇ ನನ್ನ ವೈರಿ ಎನ್ನುವುದೂ ಖಚಿತ. ಅವನು ಕಾಮರೂಪಿ, ಹೆದರಿ ಹಾವಾಗಿ ಓಡಿದ್ದಾನೆ. ಹೊರಡಿ, ಹುತ್ತ ಹೊಕ್ಕರೆ ಹುತ್ತಕ್ಕೆ, ಕಾಡು ಹೊಕ್ಕರೆ ಕಾಡಿಗೆ ಬೆಂಕಿಯಿಡಿ. ಉಸಿರಾಡೋ ಗಾಳಿಗೆ ವಿಷ ಬೆರಸಿಯಾದರೂ ಅವನನ್ನ ಹಿಡಿದು ಕೊಲ್ಲಲೇ ಬೇಕು.

ಅವಳಿ : ಇಕೋ ಹೊರಟೆ.

ಭಾಗವತ : **ಆಹಾ ಬಂದಳು ಸಿರಿಯ ಸಂಪಿಗೆ**
**ಒಳಗೆ ಪ್ರೇಯಸಿ ಹೊರಗೆ ಅರಸಿಯು**
**ಹೆಣ್ಣು ವೇಷದ ವಂಚನೆಯು ಹೊರಬಂತು ಬಂದಿತೆಲ |**

ಸಂಪಿಗೆ : ಇದೇನು ಮಹಾರಾಜ, ಯುದ್ಧದ ಸಿದ್ಧತೆಯಲ್ಲಿರುವಂತಿದೆ?

ರಾಜ : ನವಿರು ಮಾತುಗಳಿಂದ ನಿಜವನ್ನ ಕವರು ಮಾಡಬೇಡ ದೇವಿ, ಹೇಳು - ಈಗ ಒಳಗಿನಿಂದ ಒಂದು ಹಾವು ಪಾರಾಗಿ ಹೋಯಿತಲ್ಲವೆ?

ಸಂಪಿಗೆ : ಹೌದು.

ರಾಜ : ದಿವ್ಯದ ದಿನ ನಿನ್ನ ಮೈಯಲ್ಲಿ ಹರಿದಾಡಿದ ಹಾವು ಅದೇ ಅಲ್ಲವೇ?

ಸಂಪಿಗೆ : ಹೌದು.

ರಾಜ : ಹೇಳು ಹಾಗಾದರೆ, ಆ ಹಾವು ನಿನ್ನ ಪ್ರಿಯಕರನಲ್ಲವೆ?

ಸಂಪಿಗೆ : ಹೌದು.

ರಾಜ : ಹಾಗಿದ್ದರೆ ನೀನು ಈತನಕ ಮಾಡಿದ್ದು ಅನೀತಿ?

ಸಂಪಿಗೆ : ಕೊನೆಗೂ ತಮಗೆ ಗೊತ್ತಾಯಿತಲ್ಲ; ಸಂತೋಷ. ತಮಗೆ ಹ್ಯಾಗೆ ಹೇಳಬೇಕೆಂದು ಯೋಚನೆ ಮಾಡುತ್ತಿದ್ದೆ.

ರಾಜ : ಹಿರಿಯರಿಗೆ, ಸಮಸ್ತರಿಗೆ ಮೋಸಮಾಡಿ ಎಲ್ಲರ ನಂಬಿಕೆಗೆ ಹುಣ್ಣು ಮಾಡಿದೆಯಲ್ಲವೆ? ಈ ತನಕ ಗುಡಿಗುಂಡಾರದ ದೈವವಾಗಿದ್ದ ನಿನ್ನ ಹೆಸರು ಈಗ ಇಡೀ ನಾಡಿಗೆ ಬೈಗಳಾಗುತ್ತದೆ, ಗೊತ್ತೆ?

ಸಂಪಿಗೆ : ಅದು ನಿಮ್ಮ ದುರ್ದೈವ. ನನ್ನ ಅನೀತಿ ನೀವು ದೇಹ ಮರೆತು ದೇವರು ಬೇಕೆಂದು ಹಂಬಲಿಸಿದಾಗಲೇ ಸುರುವಾಯ್ತು ಪ್ರಭು. ನೀವು ಹಾಸಿಗೆಯಿಂದ ಸರಿದು ಹೋದಿರಿ. ಮಲಗಿ ಜಂತಿ ಎಣಿಸುತ್ತ ನಿಟ್ಟುಸಿರು ಬಿಡುತ್ತಿದ್ದ ನನಗೆ ನೀವು ಸರಿದು ಹೋದದ್ದು ಗೊತ್ತಾಗಲೇ ಇಲ್ಲ. ನಿಮ್ಮನ್ನು ಹುಡುಕಿದೆ; ಅರಮನೆಯಲ್ಲಿ, ಉದ್ಯಾನವನದಲ್ಲಿ, ನೀವಾಡಿದ ಮಾತಿನಲ್ಲಿ - ಎಲ್ಲಿ ಹುಡುಕಿದರೂ ನೀವು ಸಿಕ್ಕಲಿಲ್ಲ. ಕೊನೆಗೆ ನೀವು ಸರೋವರದಲ್ಲಿ ಬೊಗಸೆಯಲ್ಲಿ ನೀರು ಹಿಡಿದು ದೇವರ ದರ್ಶನ ಮಾಡಿಕೊಳ್ಳುತ್ತಿದ್ದೀರೆಂದು ತಿಳಿಯಿತು. ನಾನೂ ಬೊಗಸೆಯಲ್ಲಿ ನೀರು ಹಿಡಿದೆ. ನನ್ನ ಬೊಗಸೆಯಲ್ಲೂ ಒಬ್ಬ ದೇವರಿದ್ದ. ಆದರೆ ಅವನು ನಿಮ್ಮ ಬೊಗಸೆಯಲ್ಲಿರೋ ದೇವರಾಗಿರಲಿಲ್ಲ. ತಪ್ಪೆ?

ರಾಜ : ಅನೀತಿಗೇನು ಶಿಕ್ಷೆ ಇದೆ ಗೊತ್ತೆ?

ಸಂಪಿಗೆ : ನಾನಾಗಲೇ ಅರ್ಧ ವಿಧವೆ. ಸದಾ ಅರ್ಧ ವಿಧವೆಯಾಗಿರುವ ದುಃಖ ನಿಮಗೆ ತಿಳಿಯದು ಪ್ರಭು! ನೀವು ಸೀಳಿಕೊಂಡಾಗ ನನ್ನನ್ನೂ ಸೀಳಿಬಿಟ್ಟಿರಿ. ನೀವೆದುರಿಗಿದ್ದಾಗ ದೇಹ, ಅವನೊಂದಿಗಿದ್ದಾಗ, ಮಲಗಿದ್ದಾಗ ಮನಸ್ಸು ಹೀಗೆ ಸದಾ ಅರ್ಧ ವಿಧವೆಯಾಗಿರುವ ಸ್ಥಿತಿಯಿದೆಯಲ್ಲಾ - ಅದರಂಥಾ ಹಿಂಸೆ ಇನ್ನೊಂದಿಲ್ಲ. ನನಗೆ ದುಃಖ ಎಂದರೆ ನನ್ನನ್ನು ಯಾರೂ ಅರ್ಥಮಾಡಿಕೊಳ್ಳುವುದಿಲ್ಲ. ಒಂಟಿ ನಾನು. ಒಂಟಿತನಕ್ಕೆ ಹೆದರಿ ಜೊತೆಗಾರನನ್ನು ಹುಡುಕುತ್ತೇನೆ. ಸಿಕ್ಕೋರೆಲ್ಲ ಅರೆಮಾನವರು. ಅರೆಮಾನವರಿಗಾಗಿ ಹುಟ್ಟಿದವಳೇ ನಾನು? ಪೂರ್ಣಲಿಂಗ ಶಿವಲಿಂಗ ದೇವರಿಗಾಗಿ ಹುಟ್ಟಿ ಹುಡುಕಿ ಹೊರಟವಳು. ಆದರೆ ಸಿಕ್ಕದ್ದು ಅಪೂರ್ವಕ್ಕೆ ಅಕ್ರಮವಾಗಿ ಹುಟ್ಟಿದ ಕೂಸು. ಇದು ಹುಟ್ಟಿದ್ದು ವಿಧವೆಗೆ. ಅಕ್ರಮ ಸಂತಾನ ಹೆತ್ತವಳನ್ನು ಕೊಲ್ಲಬೇಕಂತ ಬಂದಿರಲ್ಲವೆ? ಇಗೋ ಸಿದ್ಧಳಾಗಿದ್ದೇನೆ.

ಅವಳಿ : (ಬಂದು) ಮಿತ್ರಾ, ವೈರಿಯ ಸುಳಿವು ಸಿಕ್ಕಿದೆ. ಹುತ್ತದಲ್ಲಿ ಅಡಗಿಕೊಂಡಿದ್ದಾನೆ. ಸೈನಿಕರಾಗಲೇ ಹುತ್ತ ಅಗೆಯುತ್ತಿದ್ದಾರೆ.

ರಾಜ : ದೇವೀ, ನನ್ನ ಆಯುಧಗಳಿಗೆ ಬೇರೆ ಒಳ್ಳೇ ಕೆಲಸ ಇದೆ. ವೈರಿಯ ಶಿರ ತರಿದು ಬಂದು ನಿನ್ನನ್ನು ವಿಚಾರಿಸಿಕೊಳ್ಳುತ್ತೇನೆ. ಯುದ್ಧದಲ್ಲಿ ಸಾಯುತ್ತೇನೆಂದು ಸಂತೋಷ ಪಡಬೇಡ. ಭಾಗಾದಿಗಳಿಲ್ಲವಾಗಿ ನನಗೆ ಸಾವಿಲ್ಲ. *(ಇಬ್ಬರೂ ಹೋಗುವರು.)*

ಸಂಪಿಗೆ : ನಾನೀಗ ಪೂರ್ತಿ ವಿಧವೆ.

# ದೃಶ್ಯ ೧೫

*ಯುದ್ಧಭೂಮಿಯಲ್ಲಿ ರಾಜ ಮತ್ತು ಕಾಳಿಂಗ ಎದುರಾಗುವರು*

ಭಾಗವತ : **ನನ್ನ ನಾರಿಯ ಸೇರಿದಾತನೆ**
**ನನ್ನ ಕುಲವೆಂಜಲಿಸಿದಾತನೆ**
**ನಿನ್ನ ಕೊಲ್ಲದೆ ಮಾಣೆನೆನ್ನುತ ರಾಜ ಗರ್ಜಿಸಿದ |**

ರಾಜ : ಮಾಯಕಾರನಾಗಿ ಬಂದು ನನ್ನ ನಾರಿಯ ಸೇರಿದ ಜಾರ ನೀನಲ್ಲವೊ? ನನ್ನ ಕುಲವೆಂಜಲಿಸಿದ ನಾಯಿ ನೀನಲ್ಲವೋ? ನಿನ್ನಂಥ ಜಾರಚೋರನನ್ನು ಕೊಂದಲ್ಲದೆ ನನ್ನ ಆಯುಧಗಳಿಗೆ ನೆಮ್ಮದಿಯೆಲ್ಲಿ? ಬಂದು ಯುದ್ಧ ಕೊಡು ಅಧಮಾಧಮಾ.

ಭಾಗವತ : **ಕಣ್ಣ ಕನ್ನಡಿಯಲ್ಲಿ ಕಂಡಿರುವೆನೇ ನಿನ್ನ**
**ನನ್ನ ಇನ್ನೊಬ್ಬನಂತಿರುವಿ**
**ನನಗೆ ನಿನ್ನಲಿ ಕೋಪ ಹುಟ್ಟದಯ್ಯಾ ನೀನು**
**ಅನುಜನೇ ಅಳಿದ ಜನ್ಮದಿ |**

ಕಾಳಿಂಗ : ದೂರವಿರು ರಾಜಕುಮಾರ, ಯುದ್ಧಕ್ಕೆ ಹೆದರಿದವನಲ್ಲ ನಾನು. ಕನ್ನಡಿಯಲ್ಲಿ ಅನೇಕ ಬಾರಿ ನಿನ್ನ ಕಂಡಂತೆ ನೆನಪಾಗುತ್ತಿದೆ. ನಿನನ್ನ ಕಂಡರೆ ನನಗ್ಯಾಕೋ ಕರುಣೆ ಬರುತ್ತಿದೆ. ಕಾಳಗಮಾಡುವ ಮುನ್ನ ಈ ಉಮ್ಮಳ ಯಾಕೆಂದು ಚಿಂತಿಸಲಿಕ್ಕೆ ಸಮಯಕೊಡು ರಾಜಕುಮಾರ.

ಭಾಗವತ : **ಹಾವಿನಂತೆಯೆ ಸಿಂಬೆಸುತ್ತುವು**
**ದಾವ ವೇಷವೊ ಕಾಣೆನಲ್ಲಾ**
**ನಿನ್ನ ಪಾಲಿನ ಗರುಡ ಬಂದೆನು**
**ಸಹಿಸಿಕೊ ಎಂದ |**

ರಾಜ : ಅನುಕೂಲಕ್ಕೆ ತಕ್ಕಂತೆ ಆಯಾ ರೂಪ ತಾಳಿ ವಂಚನೆ ಮಾಡುವ ನಿನಗೆ ಇನ್ನೂ ಸಮಯಾವಕಾಶ ಕೊಡಬೇಕೋ? ಪ್ರಾಣಭೀತಿಯಿಂದ ಮುದುಡಿ ಸಿಂಬೆಯಾಗುತ್ತಿರುವ ನಿನ್ನ ಯಾವ ಹಂಚಿಕೊಯೂ ಇನ್ನು ಫಲಿಸದಯ್ಯಾ. ಇಗೋ ನಿನ್ನ ಪಾಲಿನ ಗರುಡ ನಿನ್ನ ಮೇಲೆರಗುತ್ತೇನೆ ಧೈರ್ಯವಿದ್ದರೆ ಎದುರಿಸು.

ಕಾಳಿಂಗ : ನನ್ನ ಅಹಂಕಾರ ಕೆಣಕಬೇಡ ರಾಜಕುಮಾರ. ನೀನು ಸುಕುಮಾರ; ಕೊಲೆಗಳನ್ನ ಕಾವ್ಯದಲ್ಲಿ ಮಾತ್ರ ಓದಿದವನು. ಒಂದು ಬಾರಿ ನಿನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡುವುದಕ್ಕಾದರೂ ಅವಕಾಶ ಕೊಡು.

ರಾಜ : ಹಾಗೆ ಮಾಡುವುದೂ ನಿನ್ನ ಕೈಯಲ್ಲಿ ಹಗ್ಗ ಕೊಟ್ಟು ಕೈಕಟ್ಟಿಸಿಕೊಳ್ಳುವುದೂ ಒಂದೇ. ಈಗೇನು ಯುದ್ಧ ಮಾಡುತ್ತಿಯೋ, ಹೇಡಿಯ ಹಾಗೆ ಸಾಯುತ್ತೀಯೋ? ಇಗೋ ಎದುರಿಸು.

ಭಾಗವತ : **ಒಬ್ಬರೊಬ್ಬರ ಕೆಣಕಿ ಕಾದುತ**
**ಅಬ್ಬರದಿ ಸಾಹಸವ ಮೆರೆಯುತ**
**ಇಬ್ಬರೂ ಘನಘೋರ ಹೋರಾಡಿದರು ಧುರದೊಳಗೆ ||**

**ಕಡೆಗೆ ನಾಗನು ಕರುಳು ನೋಯಲು**
**ಕಡಿಮೆಯಾದನು ಎದುರು ಬಲದಲಿ**
**ಜಡಿದು ಕೊಂದನು ರಾಜ ಗುಡುಗುತ ಒಡಲ ತುಳಿಯುತಲಿ ||**

**ದೂರದಾಕಾಶವನು ನೋಡುತ**
**ಹರಣ ಹಾರಿತು ನಾಗದೇವನ**
**ತೆರೆದ ಕಣ್ಣಲಿ ರಾಜ ಕಂಡನು ಮರೆಯದದ್ಭುತವ ||**

**ಕಾಣಕಾಣುತ ಅರರೆ ತನ್ನಯ**
**ಬೆನ್ನಹುರಿ ಕಗ್ಗಂಟು ಸಡಿಲಿತು**
**ತಣ್ಣಗಾಯಿತು ಕರುಳು ಎನ್ನುತ ಅರಮನೆಗೆ ಬಂದ ||**

## ದೃಶ್ಯ ೧೬

*ಅರಮನೆ. ರಾಜನಿಗಾಗಿ ಕಾಯುತ್ತಿರುವ ತಾಯಿ*

ಭಾಗವತ : **ಗೆದ್ದ ವಾರ್ತೆಗೆ ಹಿಗ್ಗಲಾರದ**
**ಬಿದ್ದ ದುಃಸ್ವಪ್ನಗಳ ನೆನೆಯುತ**
**ಒದ್ದೆಗಣ್ಣಲಿ ಕಾಯುತ್ತಿದ್ದಳು ತಾಯಿ ಮನೆಯೊಳಗೆ ||**

ತಾಯಿ : ರಾಜಕುಮಾರ ಗೆದ್ದ ವಾರ್ತೆ ತಿಳಿದರೂ ಮನಸ್ಸಿಗೆ ಹಳಹಳಿಯಾಗುತ್ತಿದೆ. ಕಣ್ಣು ಮುಚ್ಚಿದ್ದರೆ ದುಃಸ್ವಪ್ನಗಳು, ತೆರೆದರೆ ಅಪಶಕುನಗಳು ಆಳದ ಭಯಗಳನ್ನು ಜಾಗ್ರತಗೊಳಿಸುತ್ತಿವೆ. ಸಿಡಿಲು ಬಡಿದ ಮರದಂತೆ ಅರಮನೆ ಬಿಕೋ ಅನ್ನುತ್ತಿದೆ. ಅಗೋ ರಾಜಕುಮಾರನೇ ಬಂದ.
*ರಾಜಕುಮಾರ ಬಂದು ತಾಯಿಗೆ ನಮಸ್ಕರಿಸುವನು.*
ಇಂಥ ಸಾವಿರ ಶತ್ರುಗಳನ್ನು ಜಯಿಸಿ ಜಯಶಾಲಿಯಾಗು ಕಂದಾ.

ರಾಜ : ಇದೇನು ಹೇಳಿಕೊಳ್ಳುವಂಥ ಗೆಲುವಲ್ಲ ತಾಯಿ.
*ನೋವು ಅನುಭವಿಸುತ್ತ ಕೂರುವನು*

ತಾಯಿ : ನಿಜ ಮಗನೇ, ಮಹಾರಾಣಿ ಈ ಪರಿ ಮೋಸ ಮಾಡಬಲ್ಲಳೆಂದು  ನಾನು ತಿಳಿದಿರಲಿಲ್ಲ.

ರಾಜ : ಸಿರಿಸಂಪಿಗೆ ಎಲ್ಲಿ ತಾಯೀ?

ತಾಯಿ : ತನ್ನ ಲಜ್ಜೆಗೆಟ್ಟ ಮುಖವನ್ನು ಮುಚ್ಚಿಕೊಂಡು ಎಲ್ಲೋ ಮೂಲೆಯಲ್ಲಿ ಹುದುಗಿರಬೇಕು. ಇಂಥವರು ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ ಮಗನೇ?

ರಾಜ : ಈ ಗಳಿಗೆಯಲ್ಲಿ ಮಹಾರಾಣಿ ನನ್ನ ಬಳಿ ಇರಬೇಕು ಅನ್ನಿಸುತ್ತಿದೆ.

ತಾಯಿ : ಇನ್ನೆಂಥ ಮಹಾರಾಣಿ? ಕುಲವನ್ನು ಎಂಜಲಿಸಿದಾಗಲೇ ಅ ಪದವಿಯನ್ನು ಅವಳು ಕಳೆದುಕೊಂಡಳು. ಇಂಥ ನೆಮ್ಮದಿಯ ಗಳಿಗೆಯಲ್ಲಿ ಅವಳ ಕೆಟ್ಟ ಮುಖದರ್ಶನ ಮಾಡಲೇಬೇಕೆ ಕಂದಾ?

ರಾಜ : ಅವಳೊಂದಿಗೆ ಅಂತರಂಗ ಮಾತಾಡಬೇಕು.

ತಾಯಿ : ನಾನು ನಿನ್ನ ತಾಯಿ ಬಳಿಯಿದ್ದರೆ ಸಾಲದೆ?

ರಾಜ : ನೀನೂ ನನ್ನ ಬಳಿ ಇರು. ಅವಳೂ ಇರಲಿ. ಯಾರಲ್ಲಿ?

ಸೇವಕ : *(ಬಂದು)* ಏನಪ್ಪಣೆ ಮಹಾಪ್ರಭು?

ಮಹಾರಾಜ : ಮಹಾರಾಣಿಯವರಿಗೆ ಬರಹೇಳು. ಹಾಗೇ ಅವಳಿಯನ್ನೂ ಕರೆ. ಅವನೊಂದಿಗೆ ಒಂದು ಮಾತು ಹಂಚಿಕೊಳ್ಳೋದಿದೆ.

ಸೇವಕ : ಅವಳಿ ಸತ್ತ ಮಹಾಪ್ರಭು.

ಮಹಾರಾಜ : ಅವನೂ ಸತ್ತನೆ? ಯಾವಾಗ? ಹ್ಯಾಗೆ?

ಸೇವಕ : ತಾವು ಯುದ್ಧದಲ್ಲಿ ತೊಡಗಿದ್ದಾಗ ಅವಳಿ "ಅಯ್ಯೋ ಕಳಚಿದ ಮೊಲೆ ಉರುಳುರುಳಿ ನನ್ನ ಕಡೆಗೆ ಬರುತ್ತಿದೆ ಕಾಪಾಡಿ" ಅಂತ ಓಡಿ ಬಂದ. ತಮ್ಮ ಯುದ್ಧದಲ್ಲಿ ಆಸಕ್ತರಾದ ನಾವು ಅವನ ಕಡೆಗೆ ಗಮನ ಕೊಡಲಿಲ್ಲ. ಓಡುತ್ತೋಡುತ್ತ ತಾವು ದಿನಾ ಹೋಗುತ್ತಿದ್ದ ಸರೋವರದ ಕಡೆಗೆ ಹೋದ. ಅಷ್ಟರಲ್ಲಿ ನಾವು ನಿರೀಕ್ಷಿಸಿದಂತೆ ತಾವು ಶತ್ರುವಿನ ವಧೆ ಮಾಡಿದ್ದರಿಂದ ಈ ಆನಂದದ ಸುದ್ದಿಯನ್ನು ಅವನಿಗೆ ತಿಳಿಸೋಣ ಅಂತ ನಾನೂ ಸರೋವರದ ಕಡೆಗೆ ಓಡಿದೆ. ಅವಳಿ ಆಗಲೇ ದಂಡೆಯ ಮೇಲೆ ನೀರಿನ ಕಡೆ ವಾಲಿದ ಮರ ಇದೆಯಲ್ಲಾ ಅದನ್ನು ಹತ್ತಿದ್ದ. ನೀರಿನಲ್ಲಿ ಅವನ ಪ್ರತಿಬಿಂಬ ಮೂಡಿತ್ತು. ಇದ್ದಕ್ಕಿದ್ದಂತೆ ಅವನಿಗೆ ಜವಳಿ ಮತ್ತು ಅವನೊಂದಿಗಿನ ಜಗಳ ನೆನಪಾಗಿ ಕೆಳಗೆ ನೀರಿನಲ್ಲಿ ಮೂಡಿದವನು ಜವಳಿ ಅಂದುಕೊಂಡ. ಭಾರೀ ಕೋಪ ಬಂದು ಕೊಂದೇ ಬಿಡ್ತೀನಿ ಅಂತ ಕೆಳಗೆ ಹಾರಿಯೇಬಿಟ್ಟ. ನಾನು ದಂಡೆಯ ಮೇಲಿದ್ದುಕೊಂಡು ಇದನ್ನೆಲ್ಲ ನೋಡುತ್ತಿದ್ದೆ. ನಾವು ಅವನನ್ನು ಉಳಿಸಲು ನೀರಿಗಿಳಿಯುವಷ್ಟರಲ್ಲಿ ನೀರು ಕುಡಿದು ಮುಳುಗಿದವನು ಏಳಲೇ ಇಲ್ಲ ಮಹಾಪ್ರಭು.

ಮಹಾರಾಜ : *(ಉದ್ವೇಗದಿಂದ)* ಈ ಕ್ಷಣವೇ ಹೋಗಿ ಮಹಾರಾಣಿಯವರಿಗೆ ಬರಹೇಳು ಬೇಗ.

ಸೇವಕ : ಆಗಲಿ ಮಹಾಪ್ರಭು *(ಹೋಗುವನು)*

ರಾಜ : ನಮ್ಮ ಮಗ ರಾಜಕುಮಾರ ಹ್ಯಾಗಿದ್ದಾನೆ ತಾಯಿ?

ತಾಯಿ : ಯುದ್ಧಮಾಡಿ ದಣಿದಿದ್ದೀಯೆ. ತುಸು ವಿಶ್ರಾಂತಿ ತಗೋ. ಹೊರಗಾಗಲೇ ಕತ್ತಲಾಗಿದೆ. ಬೆಳಗ್ಗೆದ್ದರೆ ಮನಸ್ಸು ಹಗುರವಾಗುತ್ತದೆ. ನಾಳೆ ಬೇಕಾದರೆ ಸಂಪಿಗೆಯನ್ನು ನೋಡಬಹುದು.

ರಾಜ : ನಾಳೆ ಸೂರ್ಯೋದಯವಾಗುತ್ತದೆ ಅಂತೀಯಾ ತಾಯಿ?

ತಾಯಿ : ಇದೇನು ಪ್ರಶ್ನೆ ಕೇಳುತ್ತೀ ಕಂದಾ ? ನಾಳಿನ ಸೂರ್ಯೋದಯ ಎಂದಿನಂತಿರೋದಿಲ್ಲ. ಸರಿ ತಪ್ಪು ತಂತಮ್ಮ ಸ್ಥಳದಲ್ಲಿರುತ್ತವೆ. ಅನುಮಾನದ ಕತ್ತಲೆ ಕಳೆದು ಹೋಗಿರುತ್ತದೆ. ಬೆಳಕು ಬೀಳದ ಒಂದು ಮೂಲೆಯೂ ಅರಮನೆಯಲ್ಲಿರೋದಿಲ್ಲ ಬಲ್ಲೆಯಾ? ಬೆಳಿಗ್ಗೆ ಎಚ್ಚರವಾದರೆ ಸಾಕು ಹೊಸ ಬದುಕಿನ ಮೊಗ್ಗು ಬಿಚ್ಚಿಕೊಳ್ಳುತ್ತದೆ. ಹಳೆಯ ದುಃಖಗಳೆಲ್ಲ ಮುಗುಳುನಗೆಯಾಗಿ ಅರಳುತ್ತವೆ. ಹೊಸಲೋಕದ ದೊರೆಯಾಗಿ ನೀನು ಆಳುವುದನ್ನು ನಾನೇ ತೋರಿಸುತ್ತೇನೆ.

ರಾಜ : ತಾಯೀ….

ತಾಯಿ : ಮಗನೇ….

ರಾಜ : ನನ್ನಲ್ಲಿ ನಿನಗೆ ನಂಬಿಕೆ ಇದೆಯೇನಮ್ಮಾ?

ತಾಯಿ : ಇನ್ನು ಮೇಲೆ ನಿನ್ನ ಪ್ರತಿಯೊಂದು ಮಾತನ್ನು ನಂಬುತ್ತೇನೆ ಕಂದಾ. ದಿವ್ಯದ ದಿನ ನಿನ್ನ ಮಾತನ್ನು ನಂಬದಿದ್ದುದೇ ಈ ಎಲ್ಲಾ ಅನಾಹುತಗಳಿಗೆ ಕಾರಣವಾಯಿತು. ತಾಯಿಯಾಗಿ ಮಗನ ಮಾತನ್ನು ನಂಬದವಳು ಮಾರಿಯೇ ಸೈ. ಆದರೆ ಸಿರಿಸಂಪಿಗೆ ಈ ಪರಿ ಮೋಸ ಮಾಡಿದ್ದನ್ನು ನಾನೆಂದೂ ಕ್ಷಮಿಸಲಾರೆ.

ರಾಜ : ಈಗ ನಮ್ಮಿಬ್ಬರ ಮಧ್ಯೆ ಯಾವ ಗುಟ್ಟುಗಳು ಇಲ್ಲ. ಒಂದು ಮಾತು ಕೇಳಲೇ ತಾಯಿ?

ತಾಯಿ : ಕೇಳು ಕಂದಾ.

ರಾಜ : ಶಾಂತಳಾಗಿ ಕೇಳು: ನನ್ನಹೊಕ್ಕಳು ತಣ್ಣಗಾಗುತ್ತಿದೆ, ಬೆನ್ನುಹುರಿ ಸಡಿಲವಾಗುತ್ತಿದೆ.

ತಾಯಿ : (ಹೌಹಾರಿ) ಏನು? ಏನು? ಏನಂದೆ ಮಗನೆ? ಯಾರಲ್ಲಿ? ಸೇವಕರೇ ಯಾರಾದರೂ ಬೇಗ ಬನ್ನಿ.

ರಾಜ : ಕೂಗಬೇಡ ತಾಯಿ. ದಯಮಾಡಿ ನನ್ನ ಮಾತನ್ನು ಕೇಳು.

ತಾಯಿ : ನಿನ್ನ ಮುಖ ನೋಡಿ ನನಗೆ ಭಯವಾಗುತ್ತಿದೆ ಮಗನೇ. ಈ ಪಾಪಿಗೆ ಮೊದಲೇ ಗೊತ್ತಾಗಲಿಲ್ಲ. ಯುದ್ಧದ ದಣಿವಿರಬೇಕು ಅಂದುಕೊಂಡೆ. ಅವನು ಘಾತಿಸಿದನೇ?

ರಾಜ : ಕೇಳು ತಾಯಿ, ನನ್ನ ಸಾವು ಕೂಡ ನೀನು ಹೇಳುವ ಸತ್ಯವನ್ನು ಅವಲಂಬಿಸಿದೆ. ಈಗ ನೀನೇ ಗುಟ್ಟಿನಲ್ಲಿರೋ ಸತ್ಯ ಹೇಳಬೇಕು.

ತಾಯಿ : ಅದೇನು ಹೇಳು ಕಂದಾ.

ರಾಜ : ನನಗೆ ಭಾಗಾದಿ ಇಲ್ಲ ಅನ್ನುವುದು ನಿಜವೇ ತಾಯಿ?

ತಾಯಿ : ತಾಯಿಯ ಮಾತಿನಲ್ಲಿ ಸಂದೇಹವೇ? ಇಗೋ ಕುಲದೇವರ ಆಣೆ....

ರಾಜ : ಆನೆ ಪ್ರಮಾಣ ಬೇಡ ತಾಯೀ, ಹಾಗೇ ಹೇಳು.

ತಾಯಿ : ಖಂಡಿತಾ ಇಲ್ಲ ಮಗನೇ.

ರಾಜ : ಭಾಗಾದಿಗಳಿಂದಲ್ಲವೇ ನನಗೆ ಸಾವಿರೋದು?

ತಾಯಿ : ಹೌದು.

ರಾಜ : ಭಾಗಾದಿಗಳಿಲ್ಲವಾದರೆ?

ತಾಯಿ : ಖಂಡಿತ ಸಾವಿಲ್ಲ.

ಭಾಗವತ : **ಸೀಳಿಕೊಂಡೆವು**
**ಇಬ್ಬರಾದೆವು**
**ತನುವು ಮನಗಳು**
**ಬೇರೆಯಾದೆವು ||**

ರಾಜ : ನಿನ್ನ ಉದರದಲ್ಲಿ ಇನ್ನೊಬ್ಬ ಜನಿಸಿಲ್ಲದಿರಬಹುದು. ಆದರೆ ಜನಿಸಿದ ಒಬ್ಬನೇ ಮಗ ತನ್ನ ತನು ಸೀಳಿಕೊಂಡಾಗ ಜೀವ ತಳೆದ ಆ ಇನ್ನೊಂದು ಭಾಗ - ಅವನು ನನ್ನ ಭಾಗಧಿಯಾಗಲಿಲ್ಲವೇ ತಾಯಿ? ಹೇಳು, ನಾನು ಸೀಳಿಕೊಂಡಾಗ ಹುಟ್ಟಿದ ಆ ಇನ್ನೊಬ್ಬ ಯಾರು? ಕೇಳಿದರೆ ಭೂತ ಪಿಶಾಚಿ ಎಂದಿರಿ. ಅವನು ಆ ನಾಗ ಕಾಳಿಂಗನಲ್ಲವೆ ತಾಯಿ?

ತಾಯಿ : *(ಆಘಾತಗೊಂಡು)* ಹೌದು, ನಿನಗಿಂತ ಮುನ್ನ ಮಡಕೆಯಿಂದ ಬಂದದ್ದು ಒಂದು ಸರ್ಪ!

ರಾಜ : ಖಚಿತವಾಗಿ ಜ್ಞಾಪಿಸಿಕೋ ತಾಯಿ. ದಿವ್ಯಕ್ಕೆ ಒದಗಿ ಬಂದ ನಾಗ ಅವನೇ ಅಲ್ಲವೆ?

ತಾಯಿ : ಬಹುಶಃ....

ರಾಜ : ಖಂಡಿತವಾಗಿ ಅವನೇ ತಾಯಿ. ಆತ ನನ್ನೊಂದಿಗೆ ಸರಿಯಾಗಿ ಯುದ್ಧ ಮಾಡಲೇ ಇಲ್ಲ. ನಿನ್ನ ಬಗ್ಗೆ ನನಗ್ಯಾಕೋ ಕೋಪವೇ ಬರುತ್ತಿಲ್ಲ ಎಂದ. ನಿನ್ನ ಕಣ್ಣಲ್ಲಿ ಕಣ್ಣಿಟ್ಟು ಒಂದು ಬಾರಿ ನೋಡುವ ಅವಕಾಶ ಕೊಡು ಎಂದ. ಅವನ ಮಾತು ತಿರಸ್ಕರಿಸಿ ಯುದ್ಧ ಮಾಡಿದೆ. ಅವನು ಸಮಬಲದಲ್ಲಿ ಹೋರಾಡಲಿಲ್ಲವಾಗಿ ಸುಲಭವಾಗಿ ಕೊಂದೆ. ಕಣ್ಣು ತೆರೆದು ಆಕಾಶ ನೋಡುತ್ತ ಅಸುನೀಗಿದ. ಕುತೂಹಲ ತಾಳದೆ ಅವನ ಕಣ್ಣಲ್ಲಿ ಕಣ್ಣಿಟ್ಟು ನೋಡಿದೆ.

ತಾಯಿ : ಏನು ಕಂಡೆ ಮಗನೆ?

ರಾಜ : ಅವನ ಕಣ್ಣಲ್ಲಿ ಪ್ರಸನ್ನವಾದ ನೀಲಿ ಆಕಾಶ ಮೂಡಿತ್ತು. ಆಕಾಶದಲ್ಲಿ ಒಂದು ಹದ್ದು ಹಾವು ಒಂದಾಗಿ ಹಾರತ್ತಿದ್ದ ದೃಶ್ಯ ಕಂಡ. ಅಧೋಲೋಕದಲ್ಲಿ ಕರೀ ಕತ್ತಲೆಗಳ ಗುಟ್ಟನ್ನೆಲ್ಲ ಹಿಡಿದಿಟ್ಟುಕೊಂಡ ಹಾವನ್ನ ಒಂದು ಹದ್ದು ಕಾಲಲ್ಲಿ ಹಿಡಿದಿರಲಿಲ್ಲ - ಕತ್ತಿಗೆ ಮೈಗೆ

ಮೈತ್ರಿಯಿಂದ ಸುತ್ತಿಕೊಂಡಿತ್ತು. ಹಾವು ಹದ್ದುಗಳು ಎರಡಳಿದು ಒಂದಾಗಿದ್ದವು. ಶಿವದೇವರ ಕರುಣೆಯ ಕಟಾಕ್ಷ ಸೂರ್ಯನ ಹೊಂಗದಿರ ರೂಪದಲ್ಲಿ ಅದರ ಮೇಲೆ ಬಿದ್ದಿತ್ತು. ನೋಡಿದರೆ ಹಾವು ಆಕಾಶದಲ್ಲಿ ಹೆಡೆತೆರೆದು ಆಡಿದಂತಿತ್ತು ಆ ದೃಶ್ಯ. ಹದ್ದನ್ನು ಇಡಿಯಾಗಿ ಆಕ್ರಮಿಸಿ ಕೊಂಡ ಹಾವು ಮಾತ್ರ ಕಾಣಿಸುತ್ತ ಹೆಡೆತೆರೆದ ಹಾವಿಗೇ ರೆಕ್ಕೆ ಬಂದು ಹಾರಾಡುತ್ತಿರುವಂತೆ ಕಾಣುತ್ತಿತ್ತು. ಹದ್ದು ನಿರಾತಂಕವಾಗಿ ನೆತ್ತಿಯ ಸೂರ್ಯನನ್ನು ಕುಡಿಯುತ್ತ ಆಕಾಶದ ಅನಂತಕ್ಕೆ ಏರುತ್ತಿತ್ತು!

ತಾಯಿ : ಹಾಗಂದರೆ ಏನು ಮಗನೆ?

ರಾಜ : ಇದೆಲ್ಲ ಮಹಾರಾಣಿಗೆ ಅರ್ಥವಾಗುತ್ತಿತ್ತು. ಸಿರಿಸಂಪಿಗೆ ತಪ್ಪು ಮಾಡಿಲ್ಲ ತಾಯಿ. ಸೀಳಿಕೊಂಡಾಗ ನಾವಿಬ್ಬರೂ ದೇಹ ಮನಸ್ಸುಗಳಾಗಿ ಒಡೆದುಕೊಂಡೆವು; ಕಾಳಿಂಗ ನನ್ನ ದೇಹವಾದ, ನಾನವನ ಮನಸ್ಸಾದೆ. ಸಿರಿಸಂಪಿಗೆ ನನ್ನ ದೇಹಕ್ಕೆ ಗರ್ಭವತಿಯಾದಳು.

ತಾಯಿ : (ಆಶ್ಚರ್ಯ ಪಶ್ಚಾತ್ತಾಪಗಳಿಂದ) ನಿಜ ಮಗನೇ, ಅದಕ್ಕೇ ಅವನು ಬೇಕಾದಾಗ ನಿನ್ನ ಆಕಾರ ತಳೆಯಬಲ್ಲವನಾಗಿದ್ದ. ಮಹಾರಾಣಿ ತಪ್ಪು ಮಾಡಲಿಲ್ಲ ಮಗನೇ, ಅಯ್ಯೋ ಪಾಪಿ ಮರೆತೇ ಬಿಡ್ಡಿದ್ದೆನಲ್ಲ ಮಗನೇ. ಈಗ ನಿನ್ನ ಜೀವದ ಬಗ್ಗೆ ನನಗೆ ಭಯವಾಗುತ್ತಿದೆ. ಯಾರಲ್ಲಿ?

ರಾಜ : ನನ್ನನ್ನು ಯಾವಾಗಲೋ ಕೊಂದುಕೊಂಡಿದ್ದೇನೆ ತಾಯಿ! ಅಗೋ ಮಹಾರಾಣಿ ಬಂದಳು. ಬಾ ಸಿರಿಸಂಪಿಗೆ....

*ಸಿರಿಸಂಪಿಗೆ ಹತ್ತಿರ ಬರುವಳು.*

ತಾಯಿ : ಯಾರು ಬರುತ್ತಿಲ್ಲವೆ? ಸಿರಿಸಂಪಿಗೆ, ನೀನು ರಾಜನ ಪಕ್ಕದಲ್ಲಿರು. ನಾನೇ ಪಂಡಿತರನ್ನು ಕರೆಯುತ್ತೇನೆ.

*ಹೋಗುವಳು*

ರಾಜ : ಅಪಾರ್ಥದ ಕಿಚ್ಚಿನಲ್ಲಿ ಬೇಯುತ್ತಿದ್ದ ನಿನ್ನನ್ನು ಕೊನೆಗಾದರೂ ತಿಳಿದುಕೊಂಡೆ ಎನ್ನಿಸುತ್ತದೆ.

ಸಂಪಿಗೆ : ತಾವು ಆರೋಗ್ಯವಾಗಿದ್ದೀರಾ ಪ್ರಭು?

ರಾಜ : ಮಹಾರಾಣಿ, ನಮ್ಮ ರಾಜಕುಮಾರ ಹ್ಯಾಗಿದ್ದಾನೆ?

ಸಂಪಿಗೆ : ನೆಮ್ಮದಿಯಿಂದ ಮಲಗಿದ್ದಾನೆ. ತಮ್ಮ ಅರೋಗ್ಯ ಹ್ಯಾಗಿದೆ ಪ್ರಭು?

ರಾಜ : ವಿಷಯ ಗೊತ್ತಾಯಿತೆ?

ಸಂಪಿಗೆ : ಗೊತ್ತು ಪ್ರಭು, ತಾವು ಕಾಳಿಂಗನನ್ನು ಕೊಂದಿರಿ.

ರಾಜ : ಅವನಿಗೆ ನಮ್ಮ ರಾಜಕುಮಾರನಿಂದ ಸಂಸ್ಕಾರ ಮಾಡಿಸಬೇಕು. ನನಗೂ ಕೂಡ.

ಸಂಪಿಗೆ : ಪ್ರಭು!

ರಾಜ : ಇನ್ನೂ ಕೇಳು ನಮ್ಮ ಮಗ ಸೀಳಿಕೊಳ್ಳದ ಹಾಗೆ ನೋಡಿಕೋ.

*ಸಾಯುವನು.*

**ಮಂಗಲಂ.**

## ಅನುಬಂಧ-೧

*೫೫-*

*೫೦ನೇ ಪುಟದ ಸಂಪಿಗೆ ಹಾಡುವ 'ಏಳೇಳು ಹೆಡೆಗಳ ನಾಗರ ಹಾವೇ' ಜೋಗುಳದ ಬದಲು ಈ ಕೆಳಗಿನ ಹಾಡುನ್ನೂ ಹೇಳಬಹುದು.*

೧

ಕಾಳಿಂಗನಂಬೋದು ನಾಗರಹಾವು
ಏಳೇಳು ಹೆಡೆಯವನಿಗೆ
ಸೂರ್ಯನ ಮರಿಯಂಥ ಏಳೇಳು ಮಣಿಗಳು
ಏಳೇಳು ಹೆಡೆಯೊಳಗೆ

ಬಾಲವಾಡಿಸುತಾನೆ ಹೆಡೆಯ ತೂಗಾಡುತ್ತ
ಬಾಲೆಯರ ಕಂಡಾಗಳೆ
ಎಣ್ಣೆ ಹಚ್ಚಿದ ಸಣ್ಣ ಹೆಣ್ಣೇನ ಮುಡಿಯೆಂದ
ರಾನಂದ ಕಾಳಿಂಗಗೆ

ಹೆಣ್ಣೇನ ಜಡೆಯೊಳಗೆ ಮೈಯ ಹೆಣೆದಾಡುತ
ಜಡೆಯಾಗಿ ಜೋತಾಡುತ
ಮಲ್ಲಿಗೆ ಮುಡಿದರೆ ಮೈಮರೆವ ತೂಕಡಿಕೆ
ಸುಖನಿದ್ದೆ ನಮ ಹಾವಿಗೆ ।

ಜೋ ಜೋ ನಾಗರರಾಯಗೆ ॥

೨

ಬೆರಳು ಕಂಡರೆ ಹಾವು ಭಾರೀ ಭುಸುಗುಡುತಿದ್ದ
ಹೆಡೆಯಿಮದ ಹೊಡೆದಾಡುತ
ಸುತ್ತುಮಣಿಗಳ ಚೆಲ್ಲಿ ನೆರಳನೋಡಿಸುತ್ತಿದ್ದ
ಸೀಳು ನಾಲಗೆ ಚಾಚುತ

ಒಮ್ಮೆ ನಮ ಕಾಳಿಂಗ ಎಲೆಬಿಸಿಲು ಕಾಯಿಸುತ
ಮೈ ಚಾಚಿ ಮಲಗಿರಲು
ಗಿರಿಯಂಥ ಗರುಡನ ನೆರಳು ಹರಿದಾಡುತ
ನಾಗನ ಮೈ ತಾಗಲು

ಕೋಪದಲಿ ಕುದಿಯುತ್ತ ಕಣ್ಣಲ್ಲಿ ಕಿಡಿಕಾಡಿ
ಹೆಡೆಗಳ ನಿಗುರಿಸಿದ
ನಿಗುರಿದ ಹೆಡೆಯಿಮದ ನೆರಳು ಬಿದ್ದಲ್ಲೆಲ್ಲ
ಸಿಡಿಲಾಗಿ ಅಪ್ಪಳಿಸಿದ.

ಅಪ್ಪಳಿಸಿ ಹೆಡೆಯಿಂದ ಹಸಿರು ನೆತ್ತರು ಚಿಮ್ಮಿ
ಹೆಡೆ ಸೊರಗಿ ಇಂಗಿದವೆ?
ಕಣ್ಣಿದ್ದಿಲಾದವು ಮೈಸಿಂಬೆಯಾದವು
ಜೋತು ಬಿದ್ದವು ನಾಲಗೆ

ಜೋ ಜೋ ನಾಗರರಾಯಗೆ

ಹೂವಿಂದ ಮುಚ್ಚಿರೆ ಕನಸಿಂದ ಮುಚ್ಚೀರೆ
ಜೋ ಜೋ ನಾಗರರಾಯಗೆ
ಹವ್ವಲ್ಲೆ ಎಲೆ ಹದ್ದೆ ಹಾರಿ ಮುಂದಕೆ ಹೋಗು

ನನ್ನ ಕಂದ ಮಗಗಿರುವನೇ
ಜೋ ಜೋ ನಾಗರರಾಯಗೇ.

## ಅನುಬಂಧ-೧

*ಈ ನಾಟಕವನ್ನು ಓದುವರು / ಪ್ರಯೋಗಿಸುವವರು ದೃಶ್ಯ-೭ ಮತ್ತು ೮ರ ನಡುವೆ ಈ ದೃಶ್ಯವನ್ನು ಬೇಕಿದ್ದರೆ ಸೇರಿಸಿಕೊಳ್ಳಬಹುದು.*

*ಸಂಪಿಗೆ ಕನ್ನಡಿ ನೋಡಿ ಶೃಂಗಾರವಾಗುತ್ತ*

ಸಂಪಿಗೆ : ಮದನಿಕೆ, ಶಯ್ಯಾಗೃಹದ ಕಸವ ಗುಡಿಸಿ ಹೂ ರಂಗೋಲಿ ಬಿಡಿಸಿದೆಯೇನೆ?

ಮದನಿಕೆ : ಬಿಡಿಸಿದ್ದೇನೆ ಮಹಾರಾಣಿ.

ಸಂಪಿಗೆ : ಹಾಸಿಗೆ ತುಂಬ ಮಲ್ಲಿಗೆ ಹೂ ಎರಚಿದ್ದೀಯಾ?

ಮದನಿಕೆ : ಹೌದು ಮಹಾರಾಣಿ.

ಸಂಪಿಗೆ : ಹಾಸಿಗೆಯ ಬಳಿ ಪರಿಮಳ ಇಟ್ಟಿದ್ದೀಯಾ?

ಮದನಿಕೆ : ಇಟ್ಟಿದ್ದೇನೆ. ನೀವೇ ಯೌವನ ತುಂಬಿದ ಪರಿಮಳದ ಭರಣಿಯಾಗಿರುವಾಗ, ಬೇರೆ ಪರಿಮಳ ಬೇಕೆ ಮಹಾರಾಣಿ?

ಸಂಪಿಗೆ : ಬೇರೆ ಸಂದರ್ಭಗಳಲ್ಲಾಗಿದ್ದರೆ ನಿನ್ನ ಮಾತಿಗೆ ಬಹುಮಾನ ಕೊಡುತ್ತಿದ್ದೆ, ಈಗಲ್ಲ. ನನಗೂ ಆತಂಕಗಳಿವೆ, ಮನಸಿನಲ್ಲಿ. ಇರಲಿ, ಈ ಸೀರೆ ನನಗೆ ಚಂದ ಕಾಣುವುದೇನೆ?

ಮದನಿಕೆ : ನಾನೇನು ಹೇಳಲಿ ಮಹಾರಾಣಿ. ನಿಮ್ಮೆದುರಿಗೆ ಕನ್ನಡಿ ಇದೆ.

ಸಂಪಿಗೆ : ಹೌದಲ್ಲವೇ? ಮಹಾರಾಜರೂ ಅಭಿಪ್ರಾಯ ಹೇಳುವುದಿಲ್ಲ. ಎದುರಿಗೆ ಕನ್ನಡಿ ಇದೆಯಲ್ಲವೆ ಅಂತಾರೆ. ಆಯ್ತು, ನೀನು ಹೋಗಿ ಅನ್ನಾಹಾರ ಬೆಂದಿದೆಯೇ ನೋಡು.

ಮದನಿಕೆ : ಆಗಲಿ ಮಹಾರಾಣಿ. *(ಹೊರಡುವಳು.)*

ಸಂಪಿಗೆ : ಇರು ಇರು, ಈ ಸರ ನನಗೆ ಚಂದ ಕಾಣುವುದೇನೆ? ಸರಿ ಬಿಡು, ಎದುರಿಗೆ ಕನ್ನಡಿ ಇದೆಯಲ್ಲ, ನೀನು ಹೋಗು. *(ಮದನಿಕೆ ಹೊರಡುವಳು.)* ಇರು ಇರು, ಮಹಾರಾಜರಿಗೆ ಊಟಕ್ಕೆ ಬರಲು ಸರಿ ಆಮಂತ್ರಿಸಿದ್ದೀ ತಾನೆ?

ಮದನಿಕೆ : ಹೇಳಿದ್ದೇನೆ, ಅವರೂ ಸಕಾಲಕ್ಕೆ ಬರಲು ಒಪ್ಪಿದ್ದಾರೆ. ಅಷ್ಟೇ ಅಲ್ಲ, ಖಂಡಿತ ಬರುತ್ತೇನೆ ಅಂತ ಮೂರು ಸಾರಿ ಹೇಳಿದರು. ಈ ಮಾತನ್ನ ನಾನು ನಿಮ್ಮೆದುರು ಆರು ಸಲ ಹೇಳಿದೆ.

ಸಂಪಿಗೆ : ಸಿಟ್ಟಾಗಬೇಡವೆ, ಆತುರದಲ್ಲಿ ಮತ್ತೆ ಕೇಳಿದೆ ಅಷ್ಟೆ. ನೀನು ಹೋಗಿ ಅನ್ನಾಹಾರ ಬೆಂದಿದೆಯೇ ನೋಡು.

*ಮದನಿಕೆ ಹೋಗುವಳು.*

ಕನ್ನಡಿಯೇ, ನನಗಿರುವ ಒಬ್ಬಳೇ ಸಖಿಯೇ, ಕೇಳು - ಮದುವೆಯಾಗಿ ಇಷ್ಟು ದಿನಗಳಾದರೂ ಮಹಾರಾಜರ ಸ್ವಭಾವ ತಿಳಿಯದಲ್ಲೇ ತಾಯಿ. ಕೋಪವ ಬಿಡು ಎಂದು ದೀನ ಭಾವಗಳಿಂದ ಬೇಡಿಕೊಂಡೆ; ನೀವು ನಕ್ಕಾಡಿದರೆ ನಮಗೆ ಅಕ್ಕರವುಂಟು, ನೀವು ನಗೆಯನು ಬಿಟ್ಟು ನಾನು ಹ್ಯಾಗೆ ಬದುಕಲಿ ಸ್ವಾಮಿ, ಅಂದೆ. ನನ್ನ ಮಾತಿಗೆ ಉಪ್ಪು ಹುಳಿ ಖಾರದ ರುಚಿಯುಂಟು. ನಿನ್ನ ಕಟ್ಟಳೆಗೆ ಒಳಗಾದ ನನ್ನನನ್ನು ಪರಪುರುಷ ಮಾರನ ಆಡಳಿತಕ್ಕೆ ಗುರಿಮಾಡುವುದು ಸರಿಯೇ ಅಂದೆ. ದಮ್ಮಯ್ಯ ಎಂದೆ, ದಯವಾಗು ಸ್ವಾಮಿ ಅಂದೆ. ಏನೆಂದರೂ ಅವರ ಕಲ್ಲಿನಂಥಾ ಮನಸು ಕರಗಲಿಲ್ಲ. ಹೇಳಿದ ಹಿತನುಡಿ ಕೇಳದೆ ಅರಮನೆಯ ತುಂಬ ತನ್ನ ಹುಚ್ಚುಗಳ ಎರಚಾಡಿ ಮುಳ್ಳಿನ ನೋಟಗಳಿಂದ ನನ್ನನ್ನ ಇರಿದು ಕಾಡಿಗೋಡಿದರು.

ದಿನಾ ಬೆಳಿಗ್ಗೆ ನನ್ನ ತಿಳಿಮೊರೆಯನ್ನೇ ನೋಡಿ, ಅದು ಯಾವಾಗ ಕಳೆದೋರಿ ಬಟ್ಟಲು ಬಸಿರು ರೂಹು ಪಡೆದೀತೆಂದು ಕಾಯುತ್ತಿದ್ದ ರಾಜಮಾತೆಗೆ ಈ ವಿಷಯ ತಿಳಿದು ಕಳವಳಪಟ್ಟಳು. ಕೂಡಲೇ ನವತಂತ್ರಿ ನಾರಾಯಣನ ಕರೆಸಿ ಮಂತ್ರಭಾವಿತದಿಂದ ಪತಿವಶೀಕರಣದ ಮೆಚ್ಚು ಮದ್ದು ಮಾಡಿಸಿ, ನನ್ನ ಕೈಗಿತ್ತು ಹೇಳಿದಳು: ಮಗಳೇ, ಮುಟ್ಟಾದ ಮೂರು ದಿನ ಮುಗಿಸಿ, ತಣ್ಣೀರು ಮಿಂದು, ಅಂಗಾಂಗ ಶೃಂಗಾರಗೊಂಡು, ಒಳ್ಳೆ ಗಳಿಗೆ ಒಳ್ಳಯ ಮುಹೂರ್ತವ ನೋಡಿ, ಇದನ್ನ ಅನ್ನಾಹಾರದಲ್ಲಿ ಬೆರಸಿ ಮಹಾರಾಜರಿಗೆ ಬಡಿಸು. ಮಹಾರಾಜನಿಗೆ ಹೆಣ್ಣುಮರುಳುಂಟಾಗಿ ನಿನನ್ನ ವಶನಾಗುತ್ತಾನೆ- ಎಂದು ಪತಿವಶೀಕರಣದ ಮದ್ದು ಕೊಟ್ಟಳು. ಇದ ಕೇಳಿ ಉತ್ತೇಜಿತವಾಯಿತು. ನಮ್ಮ ಹರ್ಷ. ಇದೀಗ ರಾಜಮಾತೆ ಹೇಳಿದ ಮೊದಲ ಭಾಗ್ಯ ಗಳಿಗೆ ಮೂಹೂರ್ತ ಒದಗಿ ಬಂದಿದೆ. ಎಲ್ಲಿ, ಮದನಿಕೆ ಬರಲಿಲ್ಲವಲ್ಲ. ಮದನಿಕೆ, ಅನ್ನಾಹಾರ ಇನ್ನೂ ಬೆಂದಿಲ್ಲವೇನೆ?

*ತಂದು ಮುಂದಿಟ್ಟು ಮದನಿಕೆ ಒಳಗೆ ಹೋಗುವಳು.*

ಇಗೋ ವಶೀಕರಣದ ಮದ್ದು ಬೆರಸುತ್ತೇನೆ.

*ಬೆರಸಿ ಬೆದರುವಳು.*

ಅಯ್ಯೋ ಪಾಪವೇ! ಅಕಟಕಟಾ ಕಾರ್ಯವೇ! ಮದನಿಕೆ ಬೇಗ ಬಾ. (ಮದನಿಕೆ ಬರುವಳು.) ಕೂಡಲೇ ರಾಜಮಾತೆಯನ್ನು ಕರೆದು ತಾ.

*ರಾಜಮಾತೆ ಬರುವಳು.*

ರಾಜಮಾತೆ : ಏನು ಕರೆದೆ ಮಗಳೇ? ಅಡಿಯಿಂದ ಮುಡಿತನಕ ಥರಥರ ನಡುಗುತಿರುವೆ, ಯಾಕೆ ಏನಾಯಿತು?

ಸಂಪಿಗೆ : ಇಲ್ಲಿ ನೋಡಿ ತಾಯಿ. ನೀವು ಹೇಳಿದಂತೆ ಅನ್ನಾಹಾರದಲ್ಲಿ ಮೆಚ್ಚುದ ಮದ್ದು ಬೆರೆಸಿದರೆ ಮುತ್ತಿನ ಬಣ್ಣದ ಅನ್ನ, ನೆತ್ತರ ಬಣ್ಣಕೆ ತಿರುಗಿ- ಭಯಾನಕವಾಗಿ ಕಾಣುತ್ತಿದೆ! ಇಗೋ ನೋಡಿ ತಾಯಿ!

ರಾಜಮಾತೆ : ಇದನ್ನ ನೋಡಿ ಎದೆ ತಣ್ಣಗಾಗಿ ಹೆಪ್ಪುಗಟ್ಟಿತು ಮಗಳೇ! ಪುಣ್ಯ ಚೆನ್ನಾಗಿತ್ತು, ಸಕಾಲದಲ್ಲಿ ನೋಡಿದೆ. ಇಲ್ಲದಿದ್ದರೆ ಮಗನಿಗೆ ಮೆಚ್ಚುವುದ್ದು ಮಾಡಹೋಗಿ ಹುಚ್ಚು ಮದ್ದಾಗಿ ಬಿಟ್ಟರೆ ಏನು ಗತಿ? ಬೇಡ ಬೇಡ. ಇದು ಇನ್ನೊಬ್ಬರಿಗೆ ತಿಳಿಯುವುದೂ ಬೇಡ, ಕಾಣುವುದೂ ಬೇಡ, ಇದನ್ನ ಎಲ್ಲಿಯಾದರೂ ನಿನ್ನ ಕೈಯಾರೆ ತಗೊಂಡು ಹೋಗಿ ಹಿತ್ತಲ ಹುತ್ತದಲ್ಲಿ ಎಸೆದು ಬಾ. ಬೇಗ ಹೋಗು, ನಾವು ಮನಸ್ಸುಗಳನ್ನ ಮೈಲಿಗೆ ಮಾಡಿಕೊಳ್ಳುವುದು ಬೇಡ.

ಸಂಪಿಗೆ : ಸರಿ ತಾಯಿ. (ಹೋಗುವಳು.)

ರಾಜಮಾತೆ : ಈ ವಂಶವನ್ನ ಶಿವನೇ ಕಾಪಾಡಿದ!

*ತೆರಳುವಳು.*

## ಅನುಬಂಧ-೩

ಹಾಡುಗಳಿಗೆ ಹಾಕಿದ ಯಕ್ಷಗಾನದ ರಾಗತಾಳಗಳು

| ಪುಟ | ಹಾಡಿನ ಮೊದಲ ಸಾಲು | ರಾಗ | ತಾಳ |
|---|---|---|---|
| ೯ | ಸೊಲ್ಲಿನ ಮೊದಲೀಗೆ ಸವಿರ ಶರಣೆಂಬೆ | ಮಧ್ಯಮಾವತಿ | ಅಷ್ಟತಾಳ |
| ೧೦ | ಧರೆಯ ಮೇಗಡೆ ಮೆರೆವ ಶಿವಪುರ | ಮಧ್ಯಮಾವತಿ | ತ್ರಿವುಡೆ |
| ೧೦ | ಕುಲದೇವರವತರಿಸಿ ಕಾರಣಿಕ ಹೇಳಿದರು | ಕೇದಾರಗೌಳ | ಅಷ್ಟತಾಳ |
| ೧೩ | ಜನನಿಯೆಂದಳು ಮಗನೆ ನಿನ್ನಯ | ದೇವಗಾಂಧಾರಿ | ಏಕತಾಳ |

| | | | |
|---|---|---|---|
| ೧೩ | ಜನನಿ ಬಿಡುಚಿಂತೆ ಆತುರವು ಯಾಕೆ | ನವರೋಜು | ಏಕತಾಳ |
| ೧೪ | ನಾನು ನೀನು ಭಲೆ ಭಲೆ ಜೋಡಿ | ಮಣಿರಂಗು | ಏಕತಾಳ |
| ೧೯ | ಇಂತು ಕುಮಾರನು ಇಂದ್ರನಿವಾಸದಿ | ಮಾಂಡ್ | ಏಕತಾಳ |
| ೨೧ | ಸಡಗರದಲಿ ಸುದ್ದಿಕೇಳಿ ತಾಯಿ ಎದ್ದಳು | ಮೋಹನಕಲ್ಯಾಣಿ | ಏಕತಾಳ |
| ೨೨ | ಸೀಳಬೇಕು ಸರಿಯರ್ಧಾ ನನ್ನ ದೇಹವನ್ನೇ | ಮೋಹನ | ಏಕತಾಳ |
| ೨೩ | ಶಾಪವು ನಿಜವಾದುದೇ ನಮ್ಮೀ ಕುಲದ | | ಏಕತಾಳ |
| ೨೪ | ಬೆಳಕು ಹರಿದವು ಸೇರಿ ಹಿರಿಯರು | ಸೌರಾಷ್ಟ್ರ | ತ್ರಿವುಡೆ |
| ೨೮ | ಮದುವೆಯಾದನು ಸಂಪಿಗೆಯ ಜೊತೆ | ಸೌರಾಷ್ಟ್ರ | ತ್ರಿವುಡೆ |
| ೩೩ | ಓಹೋ ಇವಳೇನೆ ಈ ಚೆಲುವೆ ಸುಂದರಿ | ನಾದನಾಮಕ್ರಿಯೆ | ಅಷ್ಟತಾಳ |
| ೪೭ | ಧರೆಗೆ ದೊಡ್ಡವರೆಲ್ಲ ಬರಲು ಸತ್ಕರಿಸಿ | ತೋಡಿ | ರೂಪಕ |
| ೪೯ | ನಾಗಲಿಂಗನ ಮೇಲೆ ಲೀಲೆಯಲಿ ಹರಿವಂಥ | ಅರುಣ | ಜಂಪೆ |
| ೪೯ | ಮುಗಿದು ಕೈಗಳ ತಲೆಯಲಿಟ್ಟಳು | ಸಾವೇರಿ | |
| ೫೧ | ಅಣ್ಣ ಇಲ್ಲವೆ ತಮ್ಮ ಸತ್ತನು | ಪುನ್ನಾಗ ತೋಡಿ | ತ್ರಿವುಡೆ |
| ೫೫ | ಬಲು ಭೀಕರ ನೆರಳು ನನ್ನ | ಶ್ರೀರಾಗ | ರೂಪಕ |
| ೫೭ | ತೆರೆಯೆ ಬಾಗಿಲು ಜಾರೆಯೇ ತೆರೆ | ಹಂಸಧ್ವನಿ | ತ್ರಿವುಡೆ |

## Ramakanta Rath

In Sirisampige, the tragedy occurs at two levels. In the story of the Prince, one part of the self, possessed by a vision of ideal and perfect beauty, rejects all approximation real life can offer. In true monkhood, a destiny to which the Prince was very close, a similar obsession occupies the mind wholly and compels renunciation of everyday life, but if the Prince fell into the alternative fate of delusion and death, it was because of self-love. His own reflection in a pool became, for him, the image of the perfect beauty he had been seeking. According to the account of Jawali, the witness, "Until the play of the water was finished he remained still, and then again he looked at himself in the water. His reflection came up there like a floating corpse. The moment he saw it his face shone. Tears of happiness came to his eyes. In his ecstasy, no word came from his mouth. As if silently talking with that corpse, he sat there, still. "As the Prince himself says, "What come floating in the water…. Was not even my reflection …. It was may corpse. And that was what I held daily on my lap and ate of." At one level, what Kambar shows is that self-love is as lifeless as a corpse and all it can give is its own sterility and not the fulfillment of mature relationship; at another, he would like us to believe that every person has these two traits in him - self-love, and capacity to relate himself meaningfully to others - and that while an excess of the first has tragic consequences, it is actually a case of lack of harmony which should be viewed compassionately. Like the twins Awali and Jawali, the Prince and Kalinga are one person and death occurs because they fail to look into each other's eyes, to recognize their oneness and reconcile their separatenesses. It is the Prince's failing that he allows self-

love to be the dominant element in his psyche, but Kalinga is all libido and it is impossible to prefer him to the Prince. In the ideal personality, there is a balanced blending of different psychic urges; this, to my mind, is the play's basic theme and import.

Sirisampige is a tragedy, not only because the Prince and the double die, but because Siri Sampige lives. She was the only one capable of giving and receiving love. The world around her, unfortunately, abounds with freaks who are incapable for rising to her moral level but who have power enough to defraud her of all meaning in life and inflict on her a future of loneliness and calumny.

Whatever we have understood is sufficient to convince us that, in Kambar, we have a superb artist of fusion. He fuses deep pain with banter, wit with purpose, modern insight into the mind and into social reality with archetypal symbols, idiom of the past with idiom of the present, high poetry with bawdy speech. How many writers of comparable achievement do we have? Not many, I am sure.